ಸೋಮವಾರ, ಜನವರಿ 27, 2025 | ₹ 7.00

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

prajavani.net prajavani prajavani prajavani



ನೃತ್ಯ ವೈಭವ
76ನೇ ಗಣರಾಜ್ಯೋತ್ಸವ ದಿನಾಚರಣೆ ಅಂಗವಾಗಿ ಬೆಂಗಳೂರಿನ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಆಗರದ ಕರ್ನಾಟಕ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು ಭಾನುವಾರ ನೃತ್ಯ ಪ್ರಸ್ತುತ ಪಡಿಸಿದರು

ಪ್ರಜಾಪ್ರಭುತ್ವದ ರಕ್ಷಣೆ ಪ್ರತಿಯೊಬ್ಬರ ಹೊಣೆ • ಗಣರಾಜ್ಯೋತ್ಸವ ಸಂದೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ

‘ನ್ಯಾಯಾಂಗಕ್ಕೆ ಬೆದರಿಸಿ ನಿಯಂತ್ರಣಕ್ಕೆ ಷಡ್ಯಂತ್ರ’

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಬೆಂಗಳೂರು: ‘ಸರ್ವಾಧಿಕಾರದ ದಂಡದಡಿ ನಮ್ಮ ಕಾರ್ಯಾಂಗ ಕರ್ತವ್ಯ ಭ್ರಷ್ಟಗೊಳ್ಳುತ್ತಿದೆ. ಶಾಸಕಾಂಗವನ್ನು ಖರೀದಿಸ ಲಾಗುತ್ತಿದೆ. ನ್ಯಾಯಾಂಗಕ್ಕೆ ಬೆದರಿಕೆ ಒಡ್ಡಿ ನಿಯಂತ್ರಣದಲ್ಲಿ ಇಟ್ಟುಕೊಳ್ಳುವ ಷಡ್ಯಂತ್ರ ನಡೆಯುತ್ತಿದೆ. ಇದು ಕಟು ಸತ್ಯ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಗಣರಾಜ್ಯೋತ್ಸವ ಸಂದೇಶದಲ್ಲಿ ಅವರು, ‘ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳೆಂಬ ಆಧಾರಸ್ತಂಭಗಳು ದುರ್ಬಲಗೊಂಡು ಶಕ್ತಿಹೀನವಾದಾಗ ಸಂವಿಧಾನವೇ ಅಪ್ರಸ್ತುತವಾಗಿ ಪ್ರಜಾಪ್ರಭುತ್ವ ವ್ಯವಸ್ಥೆ ಬುಡಮೇಲಾಗುವ ಸಾಧ್ಯತೆಗಳಿವೆ’ ಎಂದು ಆತಂಕ ವ್ಯಕ್ತಪಡಿಸಿರುವ ಅವರು, ‘ಪ್ರಜಾಪ್ರಭುತ್ವವನ್ನು ಉಳಿಸುವ ದೊಡ್ಡ ಜವಾಬ್ದಾರಿ ಪ್ರತಿಯೊಬ್ಬ ಪ್ರಜೆಯ ಹೆಗಲ ಮೇಲಿದೆ’ ಎಂದಿದ್ದಾರೆ.

‘ಸಂವಿಧಾನ ಜಾರಿಗೊಳಿಸಿ ಪ್ರಜಾಪ್ರಭುತ್ವ ರಾಷ್ಟ್ರ ಎಂದು ಘೋಷಣೆ ಮಾಡಿಕೊಂಡ 75 ವರ್ಷಗಳ ನಂತರವೂ ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ಉಳಿಸಲು ಹೋರಾಟ ನಡೆಸಬೇಕಾದ ವಿಷಾದನೀಯ ಸ್ಥಿತಿಯಲ್ಲಿ ನಾವು ಗಣರಾಜ್ಯೋತ್ಸವ ಆಚರಿಸುತ್ತಿದ್ದೇವೆ’ ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ.



ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆಯ ಪುತ್ತಿಗೆ ವಿವೇಕಾನಂದ ನಗರದಲ್ಲಿ ಆಳ್ವಾಸ್ ಶಿಕ್ಷಣ ಸಂಸ್ಥೆ ವತಿಯಿಂದ ನಡೆದ ಗಣರಾಜ್ಯೋತ್ಸವದಲ್ಲಿ ವಿದ್ಯಾರ್ಥಿಗಳ ಸಮೂಹ ಮೂಡಿಸಿದ ‘ಇಂಡಿಯಾ’– ಪ್ರಜಾವಾಣಿ ಚಿತ್ರ

‘ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳೆಂಬ ಸಂವಿಧಾನದ ಮೂರು ಮುಖ್ಯ ಆಧಾರ ಸ್ತಂಭಗಳು ಭದ್ರವಾಗಿದ್ದು, ಆರೋಗ್ಯಕರವಾಗಿ ಕಾರ್ಯ ನಿರ್ವಹಿಸಿದರೆ ಮಾತ್ರ ಸಂವಿಧಾನದ ಪಾಲನೆಯಾಗುತ್ತಿದೆ ಮತ್ತು ಪ್ರಜಪ್ರಭುತ್ವ ಸುರಕ್ಷಿತವಾಗಿದೆ ಎಂದರ್ಥ’ ಎಂದಿದ್ದಾರೆ.

‘ಜಾತಿ, ಮತ, ಪಂಥ, ಪ್ರದೇಶದ ಭೇದಗಳನ್ನು ಮರೆತು ಇಡೀ ದೇಶ ಒಂದಾಗಿ ಹೊರಗಿನ ಶತ್ರುಗಳನ್ನು ಹೊಡೆದೋಡಿಸಲು ಹೇಗೆ ಸ್ವಾತಂತ್ರ್ಯ ಹೋರಾಟ ನಡೆಸಲಾಯಿತೋ, ಅಂತಹದ್ದೇ ಒಂದು ಹೋರಾಟವನ್ನು ದೇಶದೊಳಗಿನ ಸಂವಿಧಾನ ವಿರೋಧಿ ಶತ್ರುಗಳ ವಿರುದ್ಧ ನಡೆಸಬೇಕಾಗಿದೆ. ಇದಕ್ಕಾಗಿ ಎರಡನೇ ಸ್ವಾತಂತ್ರ್ಯ ಹೋರಾಟ ನಡೆಯದೆ ಹೋದರೆ ಮುಂದಿನ ಪೀಳಿಗೆಗೆ ಬದುಕುಳಿಯಲು ಪ್ರಜಾಪ್ರಭುತ್ವ ಇರುವುದಿಲ್ಲ’ ಎಂದಿದ್ದಾರೆ.

‘ಪ್ರಜಾಪ್ರಭುತ್ವ ಮತ್ತು ಸಂವಿಧಾನವನ್ನು ಉಳಿಸುವ ಮೂಲಕ ನಮ್ಮ ಭಾರತವನ್ನು ರಕ್ಷಿಸುವ ಹೋರಾಟಕ್ಕೆ ನಮಗಿರುವ ಅಸ್ತ್ರಗಳೆಂದರೆ ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ಚಿಂತನೆಗಳು. ಈ ಕಾರಣಕ್ಕೆ ಸ್ವಾತಂತ್ರ್ಯ ಹೋರಾಟದ ನೇತೃತ್ವ ವಹಿಸಿದ್ದ ಕಾಂಗ್ರೆಸ್ ಪಕ್ಷವು ‘ಜೈ ಬಾಪು, ಜೈ ಭೀಮ್ ಮತ್ತು ಜೈ ಸಂವಿಧಾನ’ ಎಂಬ ಅಭಿಯಾನ ಆರಂಭಿಸಿದೆ. ಎಲ್ಲರೂ ಪಕ್ಷ, ಪಂಥ, ಜಾತಿ-ಧರ್ಮಗಳ ಎಲ್ಲೆಯನ್ನು ಮೀರಿ ಈ ಅಭಿಯಾನದಲ್ಲಿ ಕೈ ಜೋಡಿಸಬೇಕು’ ಎಂದು ಅವರು ಮನವಿ ಮಾಡಿದ್ದಾರೆ.

‘ಹಿಂದೂ ರಾಷ್ಟ್ರ’ಕ್ಕೆ ಪ್ರತ್ಯೇಕ ಸಂವಿಧಾನ ‘ದೇಶ ದ್ರೋಹ’: ಬಿ.ಕೆ. ಹರಿಪ್ರಸಾದ್



ಬೆಂಗಳೂರು: ‘ಗಣ ರಾಜ್ಯದ ಸಂಭ್ರಮದಲ್ಲಿರುವ ದೇಶದಲ್ಲಿ ‘ಹಿಂದೂ ರಾಷ್ಟ್ರ’ಕ್ಕೆ ಪ್ರತ್ಯೇಕ ‘ಸಂವಿಧಾನ’ ಸಿದ್ಧಪಡಿಸಿರುವ ಆಘಾತಕಾರಿ ಹಾಗೂ ಅತ್ಯಂತ ಅಪಾಯಕಾರಿ ಬೆಳವಣಿಗೆ ನಡೆದಿರುವುದು ದೇಶ ಭಾರಿ ಗಂಡಾಂತರ ಎದುರಿಸುವ ಮುನ್ಸೂಚನೆಯಂತಿದೆ’ ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಹೇಳಿದ್ದಾರೆ.

‘ಫೆ. 3ರಂದು ಈ ‘ಸಂವಿಧಾನ’ದ ಸಂಪೂರ್ಣ 501 ಪುಟಗಳು ಬಹಿರಂಗ ಆಗಲಿದೆ ಎನ್ನಲಾಗಿದ್ದು, ರಾಷ್ಟ್ರಪತಿ ತಕ್ಷಣ ಮಧ್ಯಪ್ರವೇಶಿಸಿ ಯಾವ ಕಾರಣಕ್ಕೂ ಇದು ಬಹಿರಂಗಗೊಳ್ಳದಂತೆ ಹಾಗೂ ದೇಶದ ಸ್ವಾಸ್ಥ್ಯವನ್ನು ಹಾಳುಗೆಡವದಂತೆ ಕ್ರಮ ತೆಗೆದುಕೊಳ್ಳಬೇಕು’ ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ಒತ್ತಾಯಿಸಿದ್ದಾರೆ.

‘ಪ್ರತಿಯೊಬ್ಬ ಭಾರತೀಯರ ಸ್ವಾಭಿಮಾನ, ಗೌರವ ಹಾಗೂ ಘನತೆಯ ಬದುಕಿನ ಹಕ್ಕು ನೀಡಿರುವ ಸಂವಿಧಾನವನ್ನೇ ಗೌಣಗೊಳಿಸುವ ಹಾಗೂ ಅಪಮಾನಗೊಳಿಸುವ ಪಟ್ಟಭದ್ರ ಹಿತಾಸಕ್ತಿಗಳ ವ್ಯವಸ್ಥಿತ ಸಂಚು ಹೊರಬರುತ್ತಲೇ ಇದೆ. ಸಂವಿಧಾನ ವಿರೋಧಿ ದುಷ್ಕರ್ಮಿಗಳ ಇಂತಹ ಕೃತ್ಯವನ್ನು ಹಿಮ್ಮೆಟ್ಟಿಸದಿದ್ದರೆ ಬಹುತ್ವ ಹಾಗೂ ಏಕತೆಯ ಭಾರತ ಉಳಿಯುವುದಿಲ್ಲ’ ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ.

‘ಜಾತ್ಯತೀತ ರಾಷ್ಟ್ರವೆಂದು ಒಪ್ಪಿಕೊಂಡ ದೇಶದ ಸಂವಿಧಾನದಲ್ಲಿ, ಹಿಂದೂ ರಾಷ್ಟ್ರ ಎಂದು ಘೋಷಿಸುವುದು, ಪ್ರತ್ಯೇಕ ಸಂವಿಧಾನ ರಚಿಸುವುದು ದೇಶದ್ರೋಹದ ಕೃತ್ಯ’ ಎಂದೂ ಕಿಡಿಕಾರಿದ್ದಾರೆ.

ಸುದ್ದಿ 2 ನಿಮಿಷ

‘ಮೋಜು– ಮಸ್ತಿಗಾಗಿ ಆಡಳಿತ’

ಸಿರಿಗೆರೆ (ಚಿತ್ರದುರ್ಗ ಜಿಲ್ಲೆ): ‘ದೇಶದ ಸಂವಿಧಾನದಲ್ಲಿರುವ ಹಲವು ಜನಹಿತದ ಮಾರ್ಗದರ್ಶಿಯತ್ತ ಗಮನ ನೀಡದೇ ಮೋಜು– ಮಸ್ತಿಗಾಗಿ ಆಡಳಿತ ನಡೆಸಲಾಗುತ್ತಿದೆ’ ಎಂದು ತರಳಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ಭಾನುವಾರ ಇಲ್ಲಿ ಆಯೋಜಿಸಿದ್ದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಸರ್ಕಾರಗಳು ಜನಹಿತವನ್ನು ಕಡೆಗಣಿಸಿವೆ. ಸ್ವಾತಂತ್ರ್ಯಾನಂತರದ ಅಂಕಿ–ಅಂಶಗಳನ್ನು ಗಮನಿಸಿದರೆ ಮದ್ಯ ಮಾರಾಟದಿಂದ ಸರ್ಕಾರಕ್ಕೆ ಬರುತ್ತಿರುವ ಆದಾಯ ಪ್ರತಿವರ್ಷವೂ ಹೆಚ್ಚಾಗುತ್ತಿದೆ. ಸರ್ಕಾರಗಳು ಮದ್ಯಪಾನ ನಿಷೇಧಕ್ಕೆ ಒಲವು ತೋರದಿರುವುದು ವಿಷಾದನೀಯ. ನಮ್ಮ ಸರ್ಕಾರವು ಜಾರಿಗೊಳಿಸಿರುವ ಹಲವು ಯೋಜನೆಗಳ ಹಣವು ಮಹಿಳೆಯರಿಂದ ಅವರ ಗಂಡಂದಿರ ಕೈಸೇರಿ ಮದ್ಯದಂಗಡಿಗಳ ಮೂಲಕ ಮತ್ತೆ ಸರ್ಕಾರದ ಖಜಾನೆ ಸೇರುತ್ತಿದೆ’ ಎಂದು ಹೇಳಿದರು.

‘ಇಂದು ಬಹುತೇಕರಲ್ಲಿ ದೇಶಭಕ್ತಿ ಕಾಣದಾಗಿದೆ. ಸಂವಿಧಾನದಲ್ಲಿರುವ ನಿರ್ದೇಶಿತ ತತ್ವಗಳನ್ನು ಪ್ರಶ್ನೆ ಮಾಡುವಂತಿಲ್ಲದಿರುವುದು ದುರದೃಷ್ಟಕರ. ದೇಶದಲ್ಲಿ ಸದಾಕಾಲ ಸಂಘರ್ಷಗಳು ನಡೆಯುತ್ತಲೇ ಬಂದಿವೆ. ದೇಶಕ್ಕೆ ಸಂವಿಧಾನ ನೀಡಿದ ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಚುನಾವಣೆಯಲ್ಲಿ ಸೋಲಿಸಲಾಯಿತು. ಸ್ವಾತಂತ್ರ್ಯ ದೊರೆತ ಕೆಲವೇ ದಿನಗಳಲ್ಲಿ ಮಹಾತ್ಮ ಗಾಂಧಿ ಅವರನ್ನು ಹತ್ಯೆ ಮಾಡಲಾಯಿತು’ ಎಂದು ವಿಷಾದಿಸಿದರು.



ತುಮಕೂರು ಬಳಿ ವಿಮಾನ ನಿಲ್ದಾಣ: ಪ್ರಸ್ತಾವ ಸಲ್ಲಿಕೆ

ತುಮಕೂರು: ರಾಜ್ಯದ ಎರಡನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ತುಮಕೂರು ಆಸುಪಾಸಿನಲ್ಲಿಯೇ ನಿರ್ಮಿಸುವಂತೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತುಮಕೂರು ಬಳಿ ಎರಡು ಕಡೆ ವಿಮಾನ ನಿಲ್ದಾಣಕ್ಕೆ ಅಗತ್ಯವಾದ ಭೂಮಿಯನ್ನು ಗುರುತಿಸಲಾಗಿದೆ ಎಂದರು.

ನಗರದ ಹೊರವಲಯ ವಸಂತನರಸಾಪುರ ಬಳಿ ರಾಷ್ಟ್ರೀಯ ಹೆದ್ದಾರಿ 48ಕ್ಕೆ ಹೊಂದಿಕೊಂಡು ಮೂರು ಸಾವಿರ ಎಕರೆ ಗುರುತಿಸಲಾಗಿದೆ. ತಾಲ್ಲೂಕಿನ ಸೀಬಿ ಹತ್ತಿರ ಐದು ಸಾವಿರ ಎಕರೆ ಭೂಮಿಯನ್ನು ನಕ್ಷೆ ಮೂಲಕ ಗುರುತಿಸಲಾಗಿದೆ. ಎರಡು ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಜಿಲ್ಲೆಯಲ್ಲಿಯೇ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಮನವಿ ಮಾಡಲಾಗಿದೆ ಎಂದು ತಿಳಿಸಿದರು.

ರಾಜ್ಯದ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಸುಮಾರು 2.50 ಲಕ್ಷ ಹುದ್ದೆಗಳು ಖಾಲಿ ಇದ್ದು, ಆದ್ಯತೆ ಮೇರೆಗೆ ಭರ್ತಿ ಮಾಡಲಾಗುವುದು. ಈಗಾಗಲೇ 400 ಪಿಎಸ್‌ಐ ಹುದ್ದೆಗಳ ನೇಮಕಾತಿಗೆ ಪರೀಕ್ಷೆ ನಡೆಸಲಾಗಿದ್ದು, ಮುಂದಿನ ದಿನಗಳಲ್ಲಿ ಇನ್ನೂ 600 ಪಿಎಸ್‌ಐ ಹುದ್ದೆಗಳ ಭರ್ತಿಗೆ ಕ್ರಮ ವಹಿಸಲಾಗುವುದು ಎಂದರು.



ರಾಯಚೂರಿನ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಮಹಿಳೆಯರು ಶನಿವಾರ ಮಧ್ಯರಾತ್ರಿ ಸಂವಿಧಾನ ಪೀಠಿಕೆಯನ್ನು ಓದಿ ಗಣರಾಜ್ಯೋತ್ಸವ ಆಚರಿಸಿದರು

405 ಅಡಿ ಎತ್ತರದಿಂದ ಬಿದ್ದ ಧ್ವಜ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಇಲ್ಲಿನ ಪುನೀತ್ ರಾಜ್‌ಕುಮಾರ್ ಜಿಲ್ಲಾ ಕ್ರೀಡಾಂಗಣದಲ್ಲಿ ಭಾನುವಾರ ಗಣರಾಜ್ಯೋತ್ಸವ ಕಾರ್ಯಕ್ರಮ ನಡೆಯುತ್ತಿದ್ದಾಗಲೇ ದೇಶದ ಎರಡನೇ ಅತಿ ಎತ್ತರದ (405 ಅಡಿ) ಧ್ವಜಸ್ತಂಭದಿಂದ 50x40 ಅಡಿ ಗಾತ್ರದ ಬೃಹತ್ ರಾಷ್ಟ್ರಧ್ವಜ ಜಾರಿ, ಕೆಳಗಡೆ ಬಿತ್ತು.

‘ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ಅವರು ಅತಿ ಎತ್ತರದ ಸ್ತಂಭದಲ್ಲಿ ಸಾಂಕೇತಿಕ ಧ್ವಜಾರೋಹಣ ನೆರವೇರಿಸಿದ 15 ನಿಮಿಷಗಳಲ್ಲಿ ಘಟನೆ ನಡೆಯಿತು. ಸ್ತಂಭದ ಸುಮಾರು ಶೇ 60ರಷ್ಟು ಮೇಲಕ್ಕೆ ಏರಿದ್ದ ಧ್ವಜ ದಿಢೀರನೇ ಜಾರಿತು. ಧ್ವಜ ಏರಿಸುವ ಕೇಬಲ್ ತುಂಡಾಗಿದ್ದೇ ಈ ಘಟನೆಗೆ ಕಾರಣ’ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.



ಧ್ವಜಸ್ತಂಭದಿಂದ ಬೃಹತ್ ರಾಷ್ಟ್ರಧ್ವಜ ಜಾರಿ ಬಿತ್ತು

‘ಧ್ವಜ ಜಾರಲು ನಿರ್ಲಕ್ಷ್ಯವೇ ಕಾರಣ. ಈ ಘಟನೆಗೆ ಕಾರಣರಾದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು’ ಎಂದು ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದರು. ಧ್ವಜಸ್ತಂಭ ನಿರ್ವಹಿಸುವ ಪಿಡಬ್ಲ್ಯುಡಿ ಗುತ್ತಿಗೆದಾರ ನಾಗರಾಜ್ ಎಂಬುವವರ ವಿರುದ್ಧ ಇಲ್ಲಿನ ಚಿತ್ತವಾಡ್ಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಸಂವಿಧಾನ ಮೌಲ್ಯಗಳ ಕಡೆಗಣನೆ’

ಕೇಂದ್ರ ಸರ್ಕಾರದ ವಿರುದ್ಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಕ್ರೋಶ

ಪ್ರಜಾವಾಣಿ ವಾರ್ತೆ



ಮಲ್ಲಿಕಾರ್ಜುನ ಖರ್ಗೆ

ಬೆಂಗಳೂರು: ‘ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಸಂವಿಧಾನದ ಎಲ್ಲ ಮೌಲ್ಯಗಳನ್ನು ಮೂಲೆಗುಂಪು ಮಾಡುತ್ತಿದೆ. ಆ ಮೂಲಕ, ನಾಗರಿಕರಿಗೆ ಸಿಗಬೇಕಾದ ಮೂಲಭೂತ ಹಕ್ಕುಗಳು, ಅದರಲ್ಲೂ ಮಹಿಳೆಯರಿಗೆ ವಿಶೇಷವಾಗಿ ಸಿಗುವ ಸ್ವಾತಂತ್ರ್ಯ ಮೊಟಕುಗೊಳಿಸಲಾಗುತ್ತಿದೆ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

76ನೇ ಗಣರಾಜ್ಯೋತ್ಸವ ದಿನಾಚರಣೆ ಅಂಗವಾಗಿ ಕೆಪಿಸಿಸಿ ಕಚೇರಿಯಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಖರ್ಗೆ, ‘ಅಂಬೇಡ್ಕರ್ ಜನ್ಮಸ್ಥಳದಲ್ಲಿ ಲಕ್ಷಾಂತರ ಜನರನ್ನು ಸೇರಿಸಿ ಸೋಮವಾರ (ಜ. 27) ದೊಡ್ಡ ಸಭೆ ನಡೆಸುತ್ತಿದ್ದು, ಅದರಲ್ಲಿ ನಾನು ಭಾಗವಹಿಸುತ್ತಿದ್ದೇನೆ. ದೇಶಕ್ಕೆ ಮೋದಿ ಮತ್ತು ಅಮಿತ್ ಶಾ ಮಾಡುತ್ತಿರುವ ತೊಂದರೆ, ದೇಶದ ಸ್ವಾತಂತ್ರ್ಯಕ್ಕೆ ಧಕ್ಕೆ ತರುತ್ತಿರುವವದರ ವಿರುದ್ಧ ಧ್ವನಿ ಎತ್ತಲಾಗುವುದು’ ಎಂದರು.

'ಸಂವಿಧಾನ ರಕ್ಷಣೆ ಹಾಗೂ ಸಂವಿಧಾನದ ಪ್ರಕಾರವಾಗಿ ನಡೆದುಕೊಳ್ಳುವುದು ಅತಿ ಮುಖ್ಯ. ಆದರೆ ದುಃಖದ ವಿಚಾರವೆಂದರೆ ಅಮಿತ್ ಶಾ ಅವರಂಥ ನಾಯಕರು ಸಂವಿಧಾನವನ್ನು ಅವಮಾನಿಸುತ್ತಿದ್ದಾರೆ. ಸಂವಿಧಾನ ರಚಿಸಿದವರ ಬಗ್ಗೆ ಟೀಕೆ ಮಾಡಿ, ಅಗೌರವ ತೋರುತ್ತಿದ್ದಾರೆ’ ಎಂದರು.

‘ಕೇಂದ್ರ ಸರ್ಕಾರ ದೇಶದ ಪ್ರಜೆಗಳನ್ನು ಬಹಳ ಹೀನಾಯವಾಗಿ ನೋಡುತ್ತಿದೆ. ಅತಿ ಶ್ರೀಮಂತರು ಹಾಗೂ ಪ್ರಭಾವಿ ವ್ಯಕ್ತಿಗಳಿಗೆ ಸರ್ಕಾರ ಹೆಚ್ಚಿನ ಸೌಲಭ್ಯ ನೀಡುತ್ತಿದೆ. ಬಡವರನ್ನು ಕಡೆಗಣಿಸುತ್ತಿದೆ. ನೆಹರೂ, ಇಂದಿರಾಗಾಂಧಿ, ರಾಜೀವ್ ಗಾಂಧಿ ಅವರು ದೇಶಕ್ಕೆ ಮಾಡಿರುವುದನ್ನು ಮೋದಿ ಅವರಾಗಲಿ, ಅವರ ಜತೆಗಿರುವವರಾಗಲಿ ಮಾಡುತ್ತಿಲ್ಲ’ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್, ವಿಧಾನ ಪರಿಷತ್ತಿನ ಮುಖ್ಯ ಸಚೇತಕ ಸಲೀಂ ಅಹಮದ್ ಇದ್ದರು.

‘ಮೇಕೆದಾಟು–ಮೋದಿ ಸಹಿ ಹಾಕುವ ಕ್ಷಣಕ್ಕೆ ಕಾಯುತ್ತಿದ್ದೇವೆ’

‘ಭದ್ರಾ ಮೇಲ್ದಂಡೆ ಯೋಜನೆಗೆ ಘೋಷಣೆ ಮಾಡಿದ್ದ ₹5,300 ಕೋಟಿ ವಿಷಯದಲ್ಲಿ ಕರ್ನಾಟಕ ರಾಜ್ಯಕ್ಕೆ ಕೇಂದ್ರ ಸರ್ಕಾರ ಮೋಸ ಮಾಡುವುದಿಲ್ಲವೆಂಬ ನಂಬಿಕೆಯಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಮಾತನಾಡಿದ ಅವರು, ‘ಮೇಕೆದಾಟು ಯೋಜನೆಗೆ ಮೋದಿ ಅವರ ಕೈಯಿಂದ ಒಂದೇ ದಿನದಲ್ಲಿ ಸಹಿ ಹಾಕಿಸುವುದಾಗಿ ದೇವೇಗೌಡರು ಮತ್ತು ಕುಮಾರಸ್ವಾಮಿ ಹೇಳಿದ್ದರು. ಆ ಕ್ಷಣಕ್ಕೆ ಕಾಯುತ್ತಿದ್ದೇವೆ’ ಎಂದರು.

‘ಕಳಸಾ ಬಂಡೂರಿ ಯೋಜನೆಗೆ ಪ್ರಲ್ಹಾದ ಜೋಷಿ ಹಾಗೂ ಜಗದೀಶ ಶೆಟ್ಟರ್ ಅರಣ್ಯ ಇಲಾಖೆಯಿಂದ ಅನುಮತಿ ಕೊಡಿಸುತ್ತಾರೆಂದು ಕಾಯುತ್ತಿದ್ದೇನೆ. ಈ ವಿಚಾರವಾಗಿ ನಾವು ಮನವಿ ಮಾಡಿದ್ದೇವೆ. ಮುಖ್ಯಮಂತ್ರಿ ಪತ್ರ ಬರೆದಿದ್ದಾರೆ. ಸಂಸತ್ ಕಲಾಪದ ವೇಳೆಯಲ್ಲಿಯೂ ಭೇಟಿ ಮಾಡುತ್ತೇನೆ. ಫಲಾಫಲ ಭಗವಂತನಿಗೆ ಬಿಟ್ಟದ್ದು’ ಎಂದರು.



ಡಿ.ಕೆ. ಶಿವಕುಮಾರ್

‘ಎಐಸಿಸಿ ಅಧ್ಯಕ್ಷರ ಜೊತೆ ಚರ್ಚೆಯ ವೇಳೆ ಯಾವ ಸೂಚನೆ ನೀಡಿದರು’ ಎಂಬ ಪ್ರಶ್ನೆಗೆ, ‘ಕೆಪಿಸಿಸಿ ಕಚೇರಿ ಕಟ್ಟಿದ್ದು ಅವರೇ. ಅವರು ಇಲ್ಲಿ ಎರಡು ನಿಮಿಷ ನೆಮ್ಮದಿಯಾಗಿ ಕಾಫಿ ಕುಡಿಯಬಾರದೇ? ನೀವು (ಮಾಧ್ಯಮ) ನಿಮ್ಮ ಮನೆಯವರು ಚರ್ಚೆ ಮಾಡುವಾಗ ಸಾರ್ವಜನಿಕವಾಗಿ ಮಾತನಾಡುತ್ತೀರಾ’ ಎಂದು ಹಾಸ್ಯ ಚಟಾಕಿ ಹಾರಿಸಿದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ‘ಕಾಂಗ್ರೆಸ್ ಪಕ್ಷವೇ ಒಂದು ಕುಟುಂಬ. ನಮ್ಮಲ್ಲಿ ಯಾವುದೇ ಬಿಕ್ಕಟ್ಟು ಇಲ್ಲ ಎಂದು ವಾಣಿ ವಿಲಾಸ ಸಾಗರ ಅಣೆಕಟ್ಟು ಬಾಗಿನ ಅರ್ಪಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸ್ಪಷ್ಟಪಡಿಸಿದ್ದಾರೆ’ ಎಂದರು.

ಮಂಡೆಕೋಲು: ಕಾಡಾನೆ ಸಾವು

ಸುಳ್ಯ (ದಕ್ಷಿಣ ಕನ್ನಡ): ಸುಳ್ಯ ವಲಯ ಅರಣ್ಯ ವ್ಯಾಪ್ತಿಯ ಮಂಡೆಕೋಲು ಗ್ರಾಮದ ಎರಕಲಪಾಡಿಯ ಮಂಡೆಕೋಲು ಮೀಸಲು ಅರಣ್ಯದಲ್ಲಿ ಸುಮಾರು 50 ವರ್ಷ ವಯಸ್ಸಿನ ಗಂಡಾನೆ ತೀವ್ರ ರಕ್ತಸ್ರಾವದಿಂದ ಮೃತಪಟ್ಟಿದೆ.

ಆನೆಯ ಮೈಯಲ್ಲಿ ಅಲ್ಲಲ್ಲಿ ಗಾಯಗಳು ಇವೆ. ಕಾದಾಟದಲ್ಲಿ ಗಾಯಗೊಂಡು ರಕ್ತಸ್ರಾವವಾಗಿ ಮೃತಪಟ್ಟಿರುವಂತೆ ಕಂಡು ಬಂದಿದೆ ಎಂದು ಸುಳ್ಯ ವಲಯ ಅರಣ್ಯಾಧಿಕಾರಿ ಎನ್. ಮಂಜುನಾಥ್ ತಿಳಿಸಿದ್ದಾರೆ.

ಆರ್‌ಎಫ್‌ಒ ಮಂಜುನಾಥ್, ಅರಣ್ಯಾಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.



ಬೆಂಗಳೂರಿನಲ್ಲಿರುವ, ಜೆಡಿಎಸ್‌ನ ಕೇಂದ್ರ ಕಚೇರಿಯಲ್ಲಿ ಭಾನುವಾರ ಆಯೋಜಿಸಲಾಗಿದ್ದ ಗಣರಾಜ್ಯೋತ್ಸವದಲ್ಲಿ ಪಕ್ಷದ ವರಿಷ್ಠ ಎಚ್‌.ಡಿ.ದೇವೇಗೌಡ ಮತ್ತು ಪದಾಧಿಕಾರಿಗಳು ಭಾಗಿಯಾಗಿದ್ದರು

‘ಪಕ್ಷ ಸಂಘಟನೆಗೆ ಹಾಸನದಲ್ಲಿ 3 ವಾರ ಠಿಕಾಣಿ’

ಪ್ರಜಾವಾಣಿ ವಾರ್ತೆ

ಹಾಸನ: ‘ಸಂಸತ್ತಿನ ಅಧಿವೇಶನ ಮುಗಿದ ಬಳಿಕ ಹಾಸನಕ್ಕೆ ಬರುತ್ತೇನೆ. ಮೂರು ವಾರ ಇಲ್ಲಿಯೇ ಇರುತ್ತೇನೆ. ಪಕ್ಷದ ಸಂಘಟನೆಗಾಗಿ ಕಾರ್ಯಕರ್ತರು, ಮುಖಂಡರ ಸಭೆ ನಡೆಸುತ್ತೇನೆ’ ಎಂದು ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ ಹೇಳಿದರು.

ಇತ್ತೀಚೆಗೆ ನಿಧನರಾದ ವಿಧಾನಪರಿಷತ್ ಮಾಜಿ ಸದಸ್ಯ ಪಟೇಲ್ ಶಿವರಾಂ ಅವರ 11ನೇ ದಿನ ಕಾರ್ಯಕ್ರಮಕ್ಕಾಗಿ ತಾಲ್ಲೂಕಿನ ದೊಡ್ಡಗೇಣಿಗೆರೆ ಗ್ರಾಮಕ್ಕೆ ಬಂದಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

‘ನಮ್ಮ ಕಾರ್ಯಕರ್ತರು, ಮುಖಂಡರ ಜೊತೆಗೆ ಸಮಾಲೋಚನೆ ನಡೆಸಿ, ಪಕ್ಷದ ಸಂಘಟನೆ, ಹೋರಾಟದ ಕುರಿತು ಕಾರ್ಯತಂತ್ರ ರೂಪಿಸಲಾಗುವುದು’ ಎಂದರು.

ಬಜೆಟ್‌ನಲ್ಲೇ ಘೋಷಿಸುವಂತೆ ವಾಲ್ಮೀಕಿ ಸಮಾಜದ ಸಮಾನ ಮನಸ್ಕರ ವಿಶೇಷ ಸಭೆ ಆಗ್ರಹ

‘ವೈದ್ಯಕೀಯ, ಎಂಜಿನಿಯರಿಂಗ್ ಕಾಲೇಜು ಬೇಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಸರ್ಕಾರ ಮುಂಬರುವ ಬಜೆಟ್‌ನಲ್ಲಿ ವಾಲ್ಮೀಕಿ ಸಮುದಾಯಕ್ಕೆ ತಲಾ ಒಂದು ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕಾಲೇಜು ಘೋಷಿಸಬೇಕು’ ಎಂದು ವಾಲ್ಮೀಕಿ ಸಮಾಜದ ಸಮಾನ ಮನಸ್ಕರ ವಿಶೇಷ ಸಭೆ ಒಕ್ಕೊರಲಿನಿಂದ ಆಗ್ರಹಿಸಿದೆ.

ಮಾಜಿ ಸಂಸದ ವಿ.ಎಸ್. ಉಗ್ರಪ್ಪ ನೇತೃತ್ವದಲ್ಲಿ ಶಾಸಕರ ಭವನದಲ್ಲಿ ಭಾನುವಾರ ಈ ಸಭೆ ನಡೆಯಿತು. ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳ ಬಗ್ಗೆ ಸುದ್ದಿಗಾರರ ಜೊತೆ ಮಾತನಾಡಿದ ಉಗ್ರಪ್ಪ, ‘ವಾಲ್ಮೀಕಿ ಸಮುದಾಯದಲ್ಲಿ ಅತಿ ಹೆಚ್ಚು ಶಾಸಕರು, ಸಂಸದರಿದ್ದರೂ ಸಮುದಾಯದ ಶಿಕ್ಷಣದ ಕಡೆಗೆ ಒಬ್ಬರೂ ಗಮನಹರಿಸುತ್ತಿಲ್ಲ’ ಎಂದರು.

‘ಜಾತಿ ಜನಗಣತಿ ವರದಿಯನ್ನು ಸರ್ಕಾರ ತಕ್ಷಣ ಬಿಡುಗಡೆ ಮಾಡಬೇಕು. ಜಾತಿಗಳ ಜನಸಂಖ್ಯೆಗೆ ಅನುಗುಣವಾಗಿ ಬಜೆಟ್ ಮಂಡನೆ ಮಾಡಬೇಕು’ ಎಂದು ಆಗ್ರಹಿಸಿದ ಅವರು, ‘ವಾಲ್ಮೀಕಿ ಸಮುದಾಯ ಉತ್ತರ ಭಾರತದಲ್ಲಿ ಪರಿಶಿಷ್ಟ ಜಾತಿಯಲ್ಲಿದೆ. ಕರ್ನಾಟಕ ಸೇರಿದಂತೆ ಕೆಲವು ರಾಜ್ಯಗಳಲ್ಲಿ ಎಸ್‌ಟಿಗೆ ಸೇರಿದೆ. ತೆಲಂಗಾಣ, ಆಂಧ್ರಪ್ರದೇಶದಲ್ಲಿ ಒಬಿಸಿ ಪಟ್ಟಿಯಲ್ಲಿದೆ. ಆದರೆ, ಕರ್ನಾಟಕದಲ್ಲಿ ಈಗ ನಾಯಕ ಜನಾಂಗದ ಹೆಸರಿನಲ್ಲಿ ನಕಲಿ ಜಾತಿ ಪ್ರಮಾಣಪತ್ರಗಳು ಹೆಚ್ಚಾಗಿವೆ’ ಎಂದರು.



ವಾಲ್ಮೀಕಿ ಸಮಾಜದ ಸಮಾನ ಮನಸ್ಕರ ವಿಶೇಷ ಸಭೆಯಲ್ಲಿ ಮಾಜಿ ಸಂಸದ ವಿ.ಎಸ್ ಉಗ್ರಪ್ಪ, ವಿವಿಧ ಮಠಾಧೀಶರು, ಸಮುದಾಯದ ಮುಖಂಡರು ಭಾಗವಹಿಸಿದ್ದರು– ಪ್ರಜಾವಾಣಿ ಚಿತ್ರ

‘ಎಸ್‌ಟಿ ಜನಾಂಗ ಹೆಚ್ಚಿರುವ ಜಿಲ್ಲೆಗಳಲ್ಲಿ ಕೆಐಎಡಿಬಿಯಿಂದ ವಾಲ್ಮೀಕಿ ಕೈಗಾರಿಕಾ ಪ್ರದೇಶ ನಿರ್ಮಿಸಿ, 50 ಜನರಿಗೆ ಕೈಗಾರಿಕೆ ಸ್ಥಾಪನೆಗೆ ತಲಾ ಎರಡು ಎಕರೆ ಜಾಗದ ಜೊತೆಗೆ ₹ 10 ಕೋಟಿ ಭದ್ರತೆ ನೀಡಬೇಕು. ಎಸ್‌ಟಿ ಸಮುದಾಯದ ಜನರಿಗೆ ಕನಿಷ್ಠ 50 ಕ್ಷೇತ್ರದಲ್ಲಿ 100 ಎಕರೆ ಕೃಷಿ ಭೂಮಿ ನೀಡಿ, ವಾಲ್ಮೀಕಿ ಕೃಷಿ ಕೇಂದ್ರ ಎಂದು ನಾಮಕರಣ ಮಾಡಬೇಕು ಎಂದೂ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು’ ಎಂದರು.

ಸಭೆಯಲ್ಲಿ ರಾಜನಹಳ್ಳಿ ಪ್ರಸನ್ನಾನಂದಪುರಿ ಸ್ವಾಮೀಜಿ ವಿರುದ್ಧ ಕೆಲವರು ಆಕ್ರೋಶ ವ್ಯಕ್ತಪಡಿಸಿದರು. ‘ಪ್ರಸನ್ನಾನಂದಪುರಿ ಸ್ವಾಮೀಜಿ ಜನರನ್ನು ದಿಕ್ಕುತಪ್ಪಿಸಿ ಜಾತ್ರಾ ಸಂಸ್ಕೃತಿ ಬಿತ್ತುತ್ತಿದ್ದಾರೆ. ಸಮಾಜದ ಏಳಿಗೆಯ ಬಗ್ಗೆ ಗಮನಹರಿಸುತ್ತಿಲ್ಲ. ಅವರ ವಿರುದ್ಧ ಧ್ವನಿ ಎತ್ತಿದವರ ಮೇಲೆ ದೂರು ಕೊಡಿಸುವ ಕೆಲಸ ಮಾಡುತ್ತಿದ್ದಾರೆ’ ಎಂದು ಕೆಲವರು ದೂರಿದರು.

ವಾಲ್ಮೀಕಿ ಮಹಾಸಭಾದ ಮಾಜಿ ಅಧ್ಯಕ್ಷ ಎಂ. ನರಸಿಂಹಯ್ಯ, ವಾಲ್ಮೀಕಿ ಸಮುದಾಯದ ವಿವಿಧ ಮಠಗಳ ಮಠಾಧೀಶರು, ವಿವಿಧ ಸಂಘಟನೆಗಳು ಮುಖಂಡರು, ಬುದ್ಧಿಜೀವಿಗಳು, ಸಾಹಿತಿಗಳು ಸಭೆಯಲ್ಲಿದ್ದರು.

ಬಿಜೆಪಿ ಬಿಡಲು ಪ್ರಧಾನ ಕಾರ್ಯದರ್ಶಿಯೊಬ್ಬರ ಸಿದ್ಧತೆ?

ಜಗ್ಗಾಟದ ಮಧ್ಯೆ ಪಕ್ಷದಿಂದ ವಿಮುಖರಾಗುತ್ತಿರುವ ನಾಯಕರು

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯ ಬಿಜೆಪಿ ಗೊಂದಲ ಮತ್ತು ಗೋಜಲುಗಳ ಮಧ್ಯೆ ತೆವಳುತ್ತಿರುವಾಗಲೇ ಪಕ್ಷದ ಪ್ರಧಾನ ಕಾರ್ಯದರ್ಶಿಯೊಬ್ಬರು ರಾಜೀನಾಮೆ ನೀಡಿ ಕಾಂಗ್ರೆಸ್ ಸೇರಲು ಮುಂದಾಗಿದ್ದಾರೆ ಎಂಬ ಚರ್ಚೆ ರಾಜಕೀಯ ವಲಯದಲ್ಲಿ ಆರಂಭವಾಗಿದೆ.

ಜೆಡಿಎಸ್‌ನೊಂದಿಗೆ ಬಿಜೆಪಿ ಸಖ್ಯವನ್ನು ಬಹಿರಂಗವಾಗಿಯೇ ವಿರೋಧಿಸುತ್ತಾ ಬಂದಿರುವ ಈ ಪ್ರಧಾನ ಕಾರ್ಯದರ್ಶಿ ಕಾಂಗ್ರೆಸ್ ಸೇರಲು ಸಿದ್ಧತೆ ನಡೆಸಿದ್ದಾರೆ. ಪಕ್ಷದಲ್ಲಿ ಉಳಿದರೆ ತಮ್ಮ ರಾಜಕೀಯ ಭವಿಷ್ಯವೇ ಮಂಕಾಗಿ ಹೋಗುತ್ತದೆ ಎಂಬ ತೀರ್ಮಾನಕ್ಕೆ ಅವರು ಬಂದಿದ್ದಾರೆ ಎಂದು ಮೂಲಗಳು ಹೇಳಿವೆ.

ಒಂದೆಡೆ ಶಾಸಕ ಬಸನಗೌಡ ಯತ್ನಾಳ– ವಿಜಯೇಂದ್ರ ಬಣಗಳ ಕಿತ್ತಾಟ, ಮತ್ತೊಂದೆಡೆ ಶ್ರೀರಾಮುಲು ಮತ್ತು ಜನಾರ್ದನ ರೆಡ್ಡಿಯವರ ವಾಕ್ಸಮರ ಮಧ್ಯೆ ಪ್ರಮುಖ ನಾಯಕರೊಬ್ಬರು ಪಕ್ಷ ತೊರೆಯಲು ಮುಂದಾಗಿದ್ದಾರೆ. ಆದರೆ, ಅದನ್ನು ತಡೆಯುವ ಪ್ರಯತ್ನಕ್ಕೆ ವರಿಷ್ಠರು ಮಧ್ಯ ಪ್ರವೇಶಿಸದೇ ಇರುವುದು ಪಕ್ಷದ ಘಟಾನುಘಟಿ ನಾಯಕರಿಗೆ ಅಚ್ಚರಿ ಮೂಡಿಸಿದೆ.

ಎತ್ತಿ ಕಟ್ಟುವವರ ಮೇಲೆ ಕಣ್ಣು?: ಬಿ.ವೈ. ವಿಜಯೇಂದ್ರ ಮತ್ತು ಯಡಿಯೂರಪ್ಪ ಅವರನ್ನು ಕಂಡರೆ ಆಗದ ನಾಯಕರು ಮತ್ತು ಕಳೆದ ಚುನಾವಣೆಗಳಲ್ಲಿ ಟಿಕೆಟ್ ಸಿಗದೇ ಅಸಮಾಧಾನಗೊಂಡವರನ್ನು ಪದೇ ಪದೇ ಎತ್ತಿಕಟ್ಟುತ್ತಿರುವವರು ಯಾರು? ಅವರ ಉದ್ದೇಶವೇನು? ಅವರ ಉದ್ದೇಶ ಪಕ್ಷವನ್ನು ಇನ್ನಷ್ಟು ದುರ್ಬಲಗೊಳಿಸುವುದೇ ಆಗಿದೆಯೇ ಎಂಬ ಮಾತು ಪಕ್ಷದ ವಲಯದಲ್ಲಿ ಚರ್ಚೆ ಆಗುತ್ತಿದೆ.

ಈ ಮಧ್ಯೆ ಪರಸ್ಪರ ಎತ್ತಿ ಕಟ್ಟುವ ಕಾರ್ಯದ ಹಿಂದಿರುವ ವ್ಯಕ್ತಿಗಳ ಮೇಲೆ ಕಣ್ಣಿಡುವ ಕೆಲಸ ಸದ್ದು-ಗದ್ದಲವಿಲ್ಲದೇ ಪಕ್ಷದ ವರಿಷ್ಠರು ಆರಂಭಿಸಿದ್ದಾರೆ. ಈ ವ್ಯಕ್ತಿಗಳು ‘ತಟಸ್ಥ’ ಎಂಬ ಬಣವನ್ನೂ ಹುಟ್ಟು ಹಾಕಿ ಅಲ್ಲಿನ ನಾಯಕರ ತಲೆ ಕೆಡಿಸಿ, ಪಕ್ಷದ ಚಟುವಟಿಕೆಗಳಿಂದ ವಿಮುಖರಾಗುವಂತೆ ಮಾಡುವುದರಲ್ಲೂ ಇವರ ಚಿತಾವಣೆ ಇದೆ ಎಂಬ ಮಾಹಿತಿ ವರಿಷ್ಠರಿಗೆ ತಲುಪಿದೆ ಎಂದು ಮೂಲಗಳು ಹೇಳಿವೆ.

ಪಕ್ಷದ ಕೆಲವೇ ಪದಾಧಿಕಾರಿಗಳನ್ನು ಹೊರತುಪಡಿಸಿದರೆ ಉಳಿದ ಪದಾಧಿಕಾರಿಗಳು ನಾಮಕಾವಸ್ಥೆ ಎಂಬಂತೆ ಬಂದು ಹೋಗುತ್ತಾರೆ. ಆದರೆ, ಹೆಚ್ಚು ಉತ್ಸಾಹವನ್ನು ತೋರಿಸುತ್ತಿಲ್ಲ. ರಾಜ್ಯ ಸರ್ಕಾರದ ವಿರುದ್ಧ ಪ್ರಬಲ ಹೋರಾಟ ನಡೆಸಲು ಮುಂದಾಗುತ್ತಿಲ್ಲ. ಹೀಗಾಗಿ ಪ್ರಬಲ ನಾಯಕರಿದ್ದರೂ ಪಕ್ಷ ಬಲಹೀನವಾಗಲು ಕಾರಣವಾಗಿದೆ ಎಂಬುದು ವರಿಷ್ಠರ ಗಮನಕ್ಕೆ ಬಂದಿದೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಆಪ್ತರಾಗಿರುವ ನಾಯಕರೊಬ್ಬರು ಪಕ್ಷವನ್ನು ದುರ್ಬಲಗೊಳಿಸಲು ಯತ್ನಿಸುತ್ತಿರುವ ವ್ಯಕ್ತಿಗಳ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದಾರೆ. ಕೆಲ ಮಾಜಿ ಮುಖ್ಯಮಂತ್ರಿಗಳ ಮೇಲೂ ಕಣ್ಣಿಡಲಾಗಿದೆ ಎಂದೂ ಮೂಲಗಳು ಹೇಳಿವೆ.

‘ಎಲ್ಲರ ನೆಚ್ಚಿನ ನಾಯಕ ಸಿದ್ದರಾಮಯ್ಯ’

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಒಬ್ಬರು ಮುಖ್ಯಮಂತ್ರಿ ಇರುವಾಗ ಮತ್ತೊಬ್ಬ ಸಿ.ಎಂ ಬಗ್ಗೆ ಮಾತನಾಡುವ ಅಗತ್ಯವೇ ಇಲ್ಲ. ಸಿದ್ದರಾಮಯ್ಯ ಎಲ್ಲರ ನೆಚ್ಚಿನ ನಾಯಕ. ಬದಲಾವಣೆಯ ಬಗ್ಗೆ ಅಭಿಪ್ರಾಯ ಅಪ್ರಸ್ತುತ’ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಅಭಿಪ್ರಾಯಪಟ್ಟರು.

ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಅವರು ಭಾನುವಾರ ಗಣರಾಜ್ಯೋತ್ಸವ ಸಮಾರಂಭದ ನಂತರ ಮಾಧ್ಯಮದವರ ಜೊತೆ ಮಾತನಾಡಿದರು. ಸಿ.ಎಂ ಬದಲಾವಣೆ ಚರ್ಚೆಯ ವಿಷಯವೇ ಅಲ್ಲ. ಪಕ್ಷದ ಆಂತರಿಕ ವಿಷಯ ಏನೇ ಇದ್ದರೂ ವರಿಷ್ಠರು ತೀರ್ಮಾನಿಸುತ್ತಾರೆ ಎಂದರು.

ಕೆ.ಸಿ.ರೋಡ್‌ನಲ್ಲಿ ನಡೆದ ದರೋಡೆ ಪ್ರಕರಣ ಕುರಿತು ಹಣಕಾಸು ಸಂಸ್ಥೆಗಳು ಭದ್ರತೆಗೆ ಆದ್ಯತೆ ನೀಡಬೇಕು. ಈ ಕುರಿತು ಮಾರ್ಗಸೂಚಿ ನೀಡಲು ಪೊಲೀಸರಿಗೆ ತಿಳಿಸಲಾಗಿದೆ ಎಂದರು.

ನಗರದಲ್ಲಿ ಸಲೂನ್ ಮೇಲೆ ನಡೆದ ದಾಳಿಯ ಬಗ್ಗೆ ‘ಕೆಲವರು’ ಮಾತನಾಡುವುದೇ ಇಲ್ಲ ಎಂದ ಅವರು, ಕಾನೂನು ಕೈಗೆತ್ತಿಕೊಳ್ಳುವವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದರು.

ಗದಗ ಜಿಲ್ಲಾ ಅರಣ್ಯ ಇಲಾಖೆಗೆ ಕುವೆಂಪು ವಿಶ್ವವಿದ್ಯಾಲಯದ ಸಹಯೋಗ

ಸಮೀಕ್ಷೆಯಲ್ಲಿ ಅಪರೂಪದ ಪಕ್ಷಿಗಳ ‘ಸೆರೆ’

• ಕೆ.ಎಂ.ಸತೀಶ್ ಬೆಳ್ಳಕ್ಕಿ

ಗದಗ: ಜಿಲ್ಲಾ ಅರಣ್ಯ ಇಲಾಖೆಯು ಕುವೆಂಪು ವಿಶ್ವವಿದ್ಯಾಲಯದ ವನ್ಯಜೀವಿ ಮತ್ತು ನಿರ್ವಹಣಾ ವಿಭಾಗದ ವಿದ್ಯಾರ್ಥಿಗಳ ಜತೆಗೂಡಿ ಮೂರು ದಿನಗಳ ಪಕ್ಷಿ ಸಮೀಕ್ಷೆ ನಡೆಸಿ, 232 ಪಕ್ಷಿ ಪ್ರಭೇದಗಳನ್ನು ಗುರುತಿಸಿದೆ. ಈ ಪೈಕಿ ಅಪರೂಪದ ಪಕ್ಷಿಗಳಾದ ಪೆರೆಗ್ರಿನ್ ಫಾಲ್ಕನ್, ಸ್ಟೆಪ್ಪೆ ಈಗಲ್, ಬೈಲನ್ಸ್ ಕ್ರೇಕ್ ಸೇರಿ 35 ವಲಸೆ ಹಕ್ಕಿಗಳು ಕಂಡಿವೆ.

ಈ ಸಮೀಕ್ಷೆಯು ವಲಸೆ ಹಕ್ಕಿಗಳ ನೆಚ್ಚಿನ ಆವಾಸಸ್ಥಾನಗಳ ಗುರುತಿಸುವಿಕೆ, ಅವುಗಳ ರಕ್ಷಣೆ ಮತ್ತು ಸಂಶೋಧನೆಗೆ ಸಂಬಂಧಿಸಿದಂತೆ ಮಹತ್ವ ಹೆಜ್ಜೆಯಾಗಲಿದೆ ಎಂದು ಪಕ್ಷಿತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಗದಗ ಜಿಲ್ಲೆಯಲ್ಲಿ ವಿಂಡ್ ಫ್ಯಾನ್ ಮತ್ತು ಕ್ರಷರ್‌ಗಳ ಸಂಖ್ಯೆ ಹೆಚ್ಚುತ್ತಿದೆ. ಇವುಗಳ ಸಂಖ್ಯೆ ಜಾಸ್ತಿ ಆದಂತೆ ಪಕ್ಷಿಗಳು ಬರುವ ಸಾಧ್ಯತೆಗಳು ಕೂಡ ಕಡಿಮೆ ಆಗುತ್ತವೆ. ಅದಕ್ಕೆ ಜಿಲ್ಲೆಯಲ್ಲಿ ಯಾವ್ಯಾವ ಪಕ್ಷಿಗಳು ಇವೆ ಮತ್ತು ಅವುಗಳ ಆವಾಸಸ್ಥಾನದ ರಕ್ಷಣೆಗೆ ಏನೇನು ಕ್ರಮ ವಹಿಸಬೇಕು ಎಂಬುದಕ್ಕೆ ಈ ಸಮೀಕ್ಷೆ ನೆರವಾಗಲಿದೆ.


‘ಗದಗ ಜಿಲ್ಲೆಯ ಮಾಗಡಿ ಕೆರೆ ಕಳೆದ ವರ್ಷ ‘ರಾಮ್‌ಸರ್’ ಜೌಗುತಾಣ ಪಟ್ಟಿಗೆ ಸೇರ್ಪಡೆಯಾಗಿದೆ. ಅದರ ಭಾಗವಾಗಿ ಮಾಗಡಿ ಕೆರೆ ಸೇರಿ ಗದಗ, ಮುಂಡರಗಿ ಮತ್ತು ಶಿರಹಟ್ಟಿ ವ್ಯಾಪ್ತಿಯಲ್ಲಿ ಬರುವ ಅರಣ್ಯ ಪ್ರದೇಶ, ಜೌಗು ಪ್ರದೇಶ, ಕೃಷಿ ಭೂಮಿಯಲ್ಲಿ ಪಕ್ಷಿ ಸಮೀಕ್ಷೆ ಕೈಗೊಳ್ಳಲಾಗಿದೆ. ಕಾಡು ಪಕ್ಷಿಗಳನ್ನು ಗುರುತಿಸಲು ವಿಶುವಲ್ ಎನ್‌ಕೌಂಟರ್ ವಿಧಾನ, ನೀರಿನ ಹಕ್ಕಿಗಳನ್ನು ಗುರುತಿಸಲು ಪಾಯಿಂಟ್ ಕೌಂಟ್ ವಿಧಾನ ಅನುಸರಿಸಲಾಗಿದೆ’ ಎಂದು ಕುವೆಂಪು ವಿಶ್ವವಿದ್ಯಾಲಯದ ವನ್ಯಜೀವಿ ಮತ್ತು ನಿರ್ವಹಣಾ ವಿಭಾಗದ ಸಂಶೋಧನಾ ವಿದ್ಯಾರ್ಥಿ ಕಾರ್ತಿಕ್ ಎನ್.ಜೆ ‘ಪ್ರಜಾವಾಣಿ’ಗೆ ತಿಳಿಸಿದರು.



ಭಾಗವಹಿಸಿದ್ದ ತಜ್ಞರ ತಂಡ



ರಡ್ಡಿ ಶೆಲ್ಡಕ್



ಪೆರೆಗ್ರಿನ್ ಫಾಲ್ಕನ್

> ಇದೇ ಮೊದಲ ಬಾರಿಗೆ ಜಿಲ್ಲೆಯಲ್ಲಿ ಪಕ್ಷಿ ಸಮೀಕ್ಷೆ ನಡೆದಿದೆ. ಜಿಲ್ಲೆಯಲ್ಲಿನ ಪಕ್ಷಿಗಳ ಆವಾಸಸ್ಥಾನಗಳ ರಕ್ಷಣೆ ಹಾಗೂ ಸಂಶೋಧನೆಗೆ ಈ ಸಮೀಕ್ಷೆ ನೆರವಾಗಲಿದೆ
>
> **ಸಂತೋಷ್ ಕುಮಾರ್ ಕೆಂಚಪ್ಪನವರ,** ಉಪ ಅರಣ್ಯ ಸಂರಕ್ಷಣಾಧಿಕಾರಿ, ಗದಗ


‘ಹಕ್ಕಿಗಳ ಜಗತ್ತಿನಲ್ಲಿ ಆಗುವ ಬದಲಾವಣೆಗಳ ಬಗ್ಗೆ ಅರಿತುಕೊಳ್ಳಲು ಪಕ್ಷಿ ಸಮೀಕ್ಷೆ ನೆರವಾಗಲಿದೆ. ವರ್ಷದಿಂದ ವರ್ಷಕ್ಕೆ ಇಲ್ಲಿಗೆ ಬರುವ ಪಕ್ಷಿಗಳ ಸಂಖ್ಯೆ ಏರಿಳಿತದ ಮಾಹಿತಿ ಈ ಸಮೀಕ್ಷೆಯಿಂದ ಗೊತ್ತಾಗುತ್ತದೆ. ಮುಂದಿನ 10 ವರ್ಷಗಳಲ್ಲಿ ಆ ಪ್ರದೇಶದಲ್ಲಿ ಏನೇನು ಬದಲಾವಣೆಗಳಾದವು ಎಂಬುದಕ್ಕೆ ನಿಖರ ಕಾರಣಗಳು ಗೊತ್ತಾಗಲಿವೆ’ ಎಂದು ಜೀವವೈವಿಧ್ಯ ಸಂಶೋಧಕ ಮಂಜುನಾಥ ನಾಯಕ ತಿಳಿಸಿದರು.


ಜನವರಿ 20ರಿಂದ 23ರವರೆಗೆ ನಡೆದ ಪಕ್ಷಿ ಸಮೀಕ್ಷೆಯಲ್ಲಿ ವೈಲ್ಡ್‌ಲೈಫ್ ಮ್ಯಾನೇಜ್‌ಮೆಂಟ್ ವಿಭಾಗದ 35 ವಿದ್ಯಾರ್ಥಿಗಳು, ಸ್ವಯಂ ಸೇವಕರು ಮತ್ತು ಅರಣ್ಯ ಇಲಾಖೆ ಸಿಬ್ಬಂದಿ ಸೇರಿ 120 ಮಂದಿ ಭಾಗವಹಿಸಿದ್ದರು.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಪರೀಕ್ಷೆಯನ್ನು ಸುಲಭವಾಗಿ ಎದುರಿಸಲು ಕ್ರಮಬದ್ಧ ಓದು ಹೇಗಿರಬೇಕು?





ಹಾಪ್‌ಕಾಮ್ಸ್: 142 ಮಳಿಗೆ ಬಂದ್

• ಕೆ.ಎಸ್.ಸುನಿಲ್

ಬೆಂಗಳೂರು: ಸಿಬ್ಬಂದಿ, ಸೌಲಭ್ಯ ಕೊರತೆ, ಖಾಸಗಿ ಸಂಸ್ಥೆಗಳ ಪೈಪೋಟಿಯಿಂದಾಗಿ ಹಾಪ್‌ಕಾಮ್ಸ್ (ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣ ಸಂಘ) ಆರ್ಥಿಕ ನಷ್ಟದಲ್ಲಿದ್ದು, ರಾಜ್ಯದಲ್ಲಿ ನಾಲ್ಕು ವರ್ಷಗಳಲ್ಲಿ 142 ಮಳಿಗೆಗಳು ಬಾಗಿಲು ಹಾಕಿವೆ.

ಗುಣಮಟ್ಟದ ತಾಜಾ ಹಣ್ಣು, ತರಕಾರಿಗಳನ್ನು ಗ್ರಾಹಕರಿಗೆ ಪೂರೈಸುವ ಹಾಗೂ ಮಧ್ಯವರ್ತಿಗಳಿಂದ ಮುಕ್ತವಾದ ಮಾರುಕಟ್ಟೆ ಒದಗಿಸುವ ಉದ್ದೇಶದಿಂದ ಸ್ಥಾಪನೆಗೊಂಡ ಹಾಪ್‌ಕಾಮ್ಸ್‌ಗಳು, ಸಮಸ್ಯೆಗಳಿಂದ ನಲುಗುತ್ತಿವೆ.

ಮಂಜೂರಾದ 809 ಹುದ್ದೆಗಳ ಪೈಕಿ 525 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ರಾಜೀನಾಮೆ, ನಿಧನ ಮತ್ತಿತರ ಕಾರಣಗಳಿಂದ ಖಾಲಿಯಾದ ಹುದ್ದೆಗಳು ಭರ್ತಿಯಾಗಿಲ್ಲ. ರಜೆ ನಗದೀಕರಣ, ಗ್ರ್ಯಾಚ್ಯುಟಿ ಸೇರಿ ನಿವೃತ್ತರಿಗೆ ನೀಡಲು ₹7 ಕೋಟಿ ಅಗತ್ಯವಿದೆ.


> ಆರ್ಥಿಕ ಸಮಸ್ಯೆ ಎದುರಿಸುತ್ತಿರುವ ಹಾಪ್‌ಕಾಮ್ಸ್‌ಗಳ ಬಲವರ್ಧನೆಗೆ ₹15 ಕೋಟಿ ದುಡಿಯುವ ಬಂಡವಾಳ ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ
> **ಗೋಪಾಲಕೃಷ್ಣ,** ಬೆಂಗಳೂರು ಹಾಪ್‌ಕಾಮ್ಸ್ ಅಧ್ಯಕ್ಷ

ಬೆಂಗಳೂರು ಹಾಪ್‌ಕಾಮ್ಸ್ ಬೆಳೆಗಾರರಿಂದ ನಿತ್ಯ ಸರಾಸರಿ 40 ಟನ್ ಹಣ್ಣು, ತರಕಾರಿ ಖರೀದಿಸುತ್ತಿದೆ. ಆದರೆ, ಬೆಳೆಗಾರರರಿಗೆ ಪಾವತಿಸಲು ಹಣವಿಲ್ಲ. ಹಣ್ಣು, ತರಕಾರಿ ಖರೀದಿಸುವ ಕಾರ್ಖಾನೆಗಳು, ಮುಜರಾಯಿ ವ್ಯಾಪ್ತಿಯ ದೇವಸ್ಥಾನಗಳು ಹಾಗೂ ಸರ್ಕಾರಿ ಆಸ್ಪತ್ರೆಗಳಿಂದ ಹಣ ಪಾವತಿ ವಿಳಂಬವಾಗುತ್ತಿದೆ.

ಬೆಂಗಳೂರು ನಗರ, ಗ್ರಾಮಾಂತರ, ಕೋಲಾರ, ರಾಮನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ವ್ಯಾಪ್ತಿ ಒಳಗೊಂಡು ಒಂದು ಹಾಪ್‌ಕಾಮ್ಸ್ ಸಂಸ್ಥೆ ಇದೆ. ಉಳಿದಂತೆ 26 ಜಿಲ್ಲೆಗಳಲ್ಲಿ ತಲಾ ಒಂದು ಹಾಪ್‌ಕಾಮ್ಸ್ ಕಾರ್ಯನಿರ್ವಹಿಸುತ್ತಿವೆ.

ವಾರ್ಷಿಕ ₹100 ಕೋಟಿ ವಹಿವಾಟು ನಡೆಸುವ ಬೆಂಗಳೂರು ಹಾಪ್‌ಕಾಮ್ಸ್ 2020–21ರಿಂದ ಸತತವಾಗಿ ನಷ್ಟ ಅನುಭವಿಸುತ್ತಿದೆ. ಜಿಲ್ಲಾ ಮಟ್ಟದ ಹಾಪ್‌ಕಾಮ್ಸ್‌ಗಳ ಪೈಕಿ ಶಿವಮೊಗ್ಗ, ಮೈಸೂರು, ಕೊಡಗು ಹೊರತುಪಡಿಸಿ ಉಳಿದವು ನಷ್ಟದಲ್ಲಿವೆ. ರಾಜ್ಯದಲ್ಲಿರುವ 600 ಹಾಪ್‌ಕಾಮ್ಸ್ ಮಳಿಗೆಗಳ ಪೈಕಿ 142 ಮಳಿಗೆಗಳು ಬಂದ್ ಆಗಿವೆ. ರಸ್ತೆ ವಿಸ್ತರಣೆ, ವ್ಯಾಪಾರ ನಷ್ಟ, ಫುಟ್‌ಪಾತ್ ತೆರವು, ಮೆಟ್ರೊ ಕಾಮಗಾರಿ ಹಾಗೂ ಸಿಬ್ಬಂದಿ ಕೊರತೆಯಿಂದ ಬೆಂಗಳೂರು ನಗರದಲ್ಲಿ ಮೊಬೈಲ್ ವ್ಯಾನ್ ಸೇರಿ 300 ಇದ್ದ ಮಳಿಗೆ ಸಂಖ್ಯೆ 205ಕ್ಕೆ ಕುಸಿದಿದೆ.

8ನೇ ಪುಟ ನೋಡಿ



76ನೇ ಗಣರಾಜ್ಯೋತ್ಸವ • ‘ಕರ್ತವ್ಯ ಪಥ’ದಲ್ಲಿ ಸಂಭ್ರಮ • ವೈವಿಧ್ಯ ಕಣ್ತುಂಬಿಕೊಂಡ ವೀಕ್ಷಕರು

ಸೇನೆ ಶಕ್ತಿ, ಸಂಸ್ಕೃತಿ ಸಮೃದ್ಧಿ ಪ್ರದರ್ಶನ

ನವದೆಹಲಿ (ಪಿಟಿಐ): ಶಕ್ತಿಶಾಲಿ ಕ್ಷಿಪಣಿಗಳು ಸೇರಿದಂತೆ ದೇಶದ ಭದ್ರತಾ ಪಡೆಗಳ ಸಾಮರ್ಥ್ಯ, ಶ್ರೀಮಂತ ಸಂಸ್ಕೃತಿ–ಕಲೆಗಳ ಪ್ರದರ್ಶನ, ಗ್ರಾಮ ಪಂಚಾಯಿತಿ ಸದಸ್ಯರು, ಆಶಾ ಕಾರ್ಯಕರ್ತೆಯರಿಂದ ಹಿಡಿದು ಪ್ಯಾರಾಲಿಂಪಿಕ್ ಅಥ್ಲೀಟ್‌ಗಳವರೆಗೆ ವಿವಿಧ ಕ್ಷೇತ್ರಗಳ 10 ಸಾವಿರಕ್ಕೂ ಅಧಿಕ ವಿಶೇಷ ಅತಿಥಿಗಳು ಪಾಲ್ಗೊಂಡಿದ್ದು ರಾಷ್ಟ್ರ ರಾಜಧಾನಿಯ ಕರ್ತವ್ಯಪಥದಲ್ಲಿ ನಡೆದ 76ನೇ ಗಣರಾಜ್ಯೋತ್ಸವಕ್ಕೆ ಭಾನುವಾರ ಮೆರುಗು ನೀಡಿದರು.

ಹಲವು ‘ಪ್ರಥಮ’ಗಳಿಗೂ ಸಾಕ್ಷಿಯಾದ ಈ ಬಾರಿಯ ಗಣರಾಜ್ಯೋತ್ಸವದಲ್ಲಿ, ದೇಶವು ಆರ್ಥಿಕ ಕ್ಷೇತ್ರದಲ್ಲಿ ಸಾಧಿಸಿದ ಪ್ರಗತಿ, ಸಂವಿಧಾನದ ಮಹತ್ವ ಸಾರುವ ಸ್ತಬ್ಧಚಿತ್ರಗಳು ಕೂಡ ಇದ್ದವು.

ಬೆಳಗಾವಿಯ ಕೇಂದ್ರೀಯ ವಿದ್ಯಾಲಯ ಸೇರಿದಂತೆ ಮೂರು ಸರ್ಕಾರಿ ಶಾಲೆಗಳ ಬ್ಯಾಂಡ್‌ಗಳು ಇದೇ ಮೊದಲ ಬಾರಿಗೆ ಪಾಲ್ಗೊಂಡಿದ್ದು ವಿಶೇಷ. ಈ ಪೈಕಿ ಎರಡು ಬ್ಯಾಂಡ್‌ಗಳನ್ನು ಬಾಲಕಿಯರೇ ಮುನ್ನಡೆಸಿದ್ದು ಗಮನಾರ್ಹ.

‘ಕರ್ತವ್ಯ ಪಥ’ದಲ್ಲಿ ನಡೆದ ಕಾರ್ಯಕ್ರಮಕ್ಕೆ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಾರೋಟಿನಲ್ಲಿ ಆಗಮಿಸಿದರು. ಈ ಬಾರಿಯ ಅತಿಥಿ, ಇಂಡೊನೇಷ್ಯಾ ಅಧ್ಯಕ್ಷ ಪ್ರಬೊವೊ ಸುಬಿಯಾಂಟೊ ಅವರು ದೇಶದ ಸಾಂಸ್ಕೃತಿಕ ಶ್ರೀಮಂತಿಕೆ, ವೈವಿಧ್ಯವನ್ನು ಕಣ್ತುಂಬಿಕೊಂಡರು.

9ನೇ ಪುಟ ನೋಡಿ



76ನೇ ಗಣರಾಜ್ಯೋತ್ಸವ ಅಂಗವಾಗಿ ನವದೆಹಲಿಯ ಕರ್ತವ್ಯಪಥದಲ್ಲಿ ಭಾನುವಾರ ನಡೆದ ಪಥಸಂಚಲನದಲ್ಲಿ ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಒಂಟೆ ತುಕಡಿ ಪಾಲ್ಗೊಂಡಿತ್ತು —ಪಿಟಿಐ ಚಿತ್ರ

ವೈಶಿಷ್ಟ್ಯಗಳು

- ದ್ವಿಚಕ್ರ ವಾಹನದ ಮೇಲಿದ್ದ 12 ಅಡಿ ಎತ್ತರದ ಏಣಿ ಮೇಲೆ ನಿಂತಿದ್ದ ಕ್ಯಾಪ್ಟನ್ ಡಿಂಪಲ್ ಸಿಂಗ್ ಭಾಟಿ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಗೌರವ ವಂದನೆ ಸಲ್ಲಿಸಿದರು. ಈ ಮೂಲಕ, ರಾಷ್ಟ್ರಪತಿಯೊಬ್ಬರಿಗೆ ಗೌರವ ವಂದನೆ ಸಲ್ಲಿಸಿದ ಸೇನೆಯ ಮೊದಲ ಮಹಿಳಾ ಅಧಿಕಾರಿ ಎಂಬ ದಾಖಲೆ ಸ್ಥಾಪಿಸಿದರು
- ‘ಸ್ವರ್ಣಿಮ ಭಾರತ: ಪರಂಪರೆ ಮತ್ತು ವಿಕಾಸ’ ವಿಷಯದಡಿ ಒಟ್ಟು 31 ಸ್ತಬ್ಧಚಿತ್ರಗಳ ಪ್ರದರ್ಶನ
- ಲೆಫ್ಟಿನೆಂಟ್ ಅಹಾನ್ ಕುಮಾರ್ ನೇತೃತ್ವದ ಅಶ್ವದಳ, ಸೇನಾತುಕಡಿಗಳನ್ನು ಮುನ್ನಡೆಸಿತು. 1953ರಲ್ಲಿ ಸ್ಥಾಪನೆಗೊಂಡಿರುವ ಈ ಅಶ್ವದಳ, ಈಗಲೂ ಸಕ್ರಿಯವಾಗಿರುವ ವಿಶ್ವದ ಏಕೈಕ ರೆಜಿಮೆಂಟ್ ಆಗಿದೆ
- 352 ಸದಸ್ಯರಿದ್ದ ಇಂಡೊನೇಷ್ಯಾ ಸೇನೆಯ ತುಕಡಿ ಪಥಸಂಚಲನದಲ್ಲಿ ಭಾಗಿಯಾಗಿ ಮೆಚ್ಚುಗೆ ಗಳಿಸಿತು

9ನೇ ಪುಟ ನೋಡಿ

‘ಗ್ಯಾರಂಟಿಯಿಂದ ಅಭಿವೃದ್ಧಿ ಕುಂಠಿತವೆಂಬ ಭವಿಷ್ಯ ಸುಳ್ಳು’



ಬೆಂಗಳೂರು: ಗ್ಯಾರಂಟಿ ಯೋಜನೆಗಳಿಂದಾಗಿ ಆರ್ಥಿಕ ಬಿಕ್ಕಟ್ಟು ಉಂಟಾಗಬಹುದು, ಅಭಿವೃದ್ಧಿ ಕುಂಠಿತವಾಗಬಹುದು ಎಂಬ ನಿರಾಶಾವಾದಿ ಭವಿಷ್ಯ ಸುಳ್ಳಾಗಿದೆ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ತಿಳಿಸಿದರು.

76ನೇ ಗಣರಾಜ್ಯೋತ್ಸವದ ಅಂಗವಾಗಿ ನಗರದ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ, ಗೌರವ ವಂದನೆ ಸ್ವೀಕರಿಸಿ ಅವರು ಭಾನುವಾರ ಮಾತನಾಡಿದರು.

‘ಸಂವಿಧಾನದ ಮಹತ್ವದ ಆಶಯವಾದ ಸಾಮಾಜಿಕ, ಆರ್ಥಿಕ ನ್ಯಾಯ ನೆಲೆಗೊಳಿಸಲು ಶಕ್ತಿ ಮೀರಿ ರಾಜ್ಯ ಸರ್ಕಾರ ಶ್ರಮಿಸುತ್ತಿದೆ. ಐದು ಗ್ಯಾರಂಟಿ ಕಲ್ಯಾಣ ಯೋಜನೆಗಳು ಯಶಸ್ವಿಯಾಗಿ ಜಾರಿಗೊಂಡು ದೇಶದ ಗಮನ ಸೆಳೆದಿವೆ’ ಎಂದು ಹೇಳಿದರು.

ಗೃಹಲಕ್ಷ್ಮಿ ಯೋಜನೆಯಡಿ ಕುಟುಂಬದ ಯಜಮಾನಿಗೆ ಮಾಸಿಕ ₹2 ಸಾವಿರದಂತೆ 2023ರ ಆಗಸ್ಟ್‌ನಿಂದ ಇಲ್ಲಿಯವರೆಗೆ ಒಟ್ಟು ₹35,180.20 ಕೋಟಿ ಆರ್ಥಿಕ ನೆರವು ನೀಡಲಾಗಿದೆ ಎಂದರು.

9ನೇ ಪುಟ ನೋಡಿ

ಪರಿಶಿಷ್ಟರ ‘ನಿಧಿ’ ಶೇ 41ರಷ್ಟು ಬಿಡುಗಡೆಗೆ ಇನ್ನೂ ಬಾಕಿ

ನೋಡಲ್ ಏಜೆನ್ಸಿಗಳ ಸಭೆ: ಅನುದಾನ ಬಳಕೆ ಬಹಿರಂಗ

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯ ಸರ್ಕಾರ ಪ್ರಸಕ್ತ ಸಾಲಿನ (2024–25) ಆಯವ್ಯಯದಲ್ಲಿ ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ (ಟಿಎಸ್‌ಪಿ) ಕಾರ್ಯಕ್ರಮಗಳ ಅಡಿ ಹಂಚಿಕೆ ಮಾಡಿರುವ ₹39,914.87 ಕೋಟಿ ಅನುದಾನದಲ್ಲಿ ಜ. 17ರವರೆಗೆ ₹23,485.70 ಕೋಟಿ (ಶೇ 58.84) ಬಿಡುಗಡೆ ಆಗಿದೆ. ಆರ್ಥಿಕ ವರ್ಷ ಅಂತ್ಯವಾಗಲು ಇನ್ನು ಎರಡು ತಿಂಗಳಷ್ಟೆ ಉಳಿದ್ದು, ಇನ್ನೂ ₹16,429.17 ಕೋಟಿ (ಶೇ 41.16) ಬಿಡುಗಡೆಗೆ ಬಾಕಿ ಇದೆ.

ಈವರೆಗೆ ಬಿಡುಗಡೆ ಆಗಿರುವ ಅನುದಾನದಲ್ಲಿ ₹20,404.38 ವೆಚ್ಚವಾಗಿದೆ. ಪರಿಶಿಷ್ಟರ ಕಲ್ಯಾಣ ಉದ್ದೇಶದಿಂದ ಬಜೆಟ್‌ನಲ್ಲಿ ಹಂಚಿಕೆ ಮಾಡಿರುವ ಒಟ್ಟು ಅನುದಾನಕ್ಕೆ ಹೋಲಿಸಿದರೆ, ಎಲ್ಲ ಇಲಾಖೆಗಳು ಈವರೆಗೆ ವೆಚ್ಚ ಮಾಡಿರುವ ಮೊತ್ತ ಶೇ 51ರಷ್ಟು ಮಾತ್ರ. ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅವರು ಇತ್ತೀಚೆಗೆ ನಡೆಸಿದ ನೋಡಲ್ ಏಜೆನ್ಸಿಗಳ ಸಭೆಯಲ್ಲಿ ಈವರೆಗಿನ ಪ್ರಗತಿಯ ಕುರಿತು ಚರ್ಚೆ ನಡೆಸಲಾಗಿದೆ.

ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನ

₹39,914 ಕೋಟಿ ಪ್ರಸಕ್ತ ಸಾಲಿನಲ್ಲಿ ಹಂಚಿಕೆ
₹23,485 ಕೋಟಿ ಬಿಡುಗಡೆಯಾದ ಅನುದಾನ
₹20,404 ವೆಚ್ಚವಾದ ಅನುದಾನ
ಶೇ 51 ಹಂಚಿಕೆಯಾದ ಅನುದಾನಕ್ಕೆ ವೆಚ್ಚ
ಶೇ 87 ಬಿಡುಗಡೆಯಾದ ಅನುದಾನಕ್ಕೆ ವೆಚ್ಚ

ಪಂಚ ‘ಗ್ಯಾರಂಟಿ’ಗಳಿಗೆ 2025-26 ನೇ ಸಾಲಿಗೆ ಪ್ರಸ್ತಾವ

‘ಗ್ಯಾರಂಟಿ’ಗಳು	ಪ್ರಸ್ತಾಪಿತ ಮೊತ್ತ (₹ ಕೋಟಿಗಳಲ್ಲಿ)
ಗೃಹ ಲಕ್ಷ್ಮಿ	7,344.77
ಗೃಹ ಜ್ಯೋತಿ	3,467.34
ಶಕ್ತಿ	1,209
ಅನ್ನಭಾಗ್ಯ	2,125
ಯುವನಿಧಿ	342.75
ಒಟ್ಟು	14,488.86



> ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನ ಪೂರ್ತಿ ಬಿಡುಗಡೆ ಆಗಲಿದ್ದು, ಯಾವುದೇ ಕಾರಣಕ್ಕೂ ಲ್ಯಾಪ್ಸ್ ಆಗುವುದಿಲ್ಲ
> **ಡಾ.ಎಚ್.ಸಿ. ಮಹದೇವಪ್ಪ,** ಸಚಿವ

ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನವನ್ನು ಒಟ್ಟು 34 ಇಲಾಖೆಗಳಿಗೆ ಹಂಚಿಕೆ ಮಾಡಲಾಗಿದೆ. ಈ ಅನುದಾನ ಬಳಕೆ ಮಾಡಿರುವ ಇಲಾಖೆಗಳ ಪೈಕಿ, ಸಮಾಜ ಕಲ್ಯಾಣ ಇಲಾಖೆ ಶೇ 45, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಕೇವಲ ಶೇ 22ರಷ್ಟು ಮಾತ್ರ ಪ್ರಗತಿ ತೋರಿಸಿವೆ.

9ನೇ ಪುಟ ನೋಡಿ

ಉತ್ತರಾಖಂಡ: ಯುಸಿಸಿ ಜಾರಿ ಇಂದಿನಿಂದ

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡದಲ್ಲಿ ಏಕರೂಪ ನಾಗರಿಕ ಸಂಹಿತೆಯು (ಯುಸಿಸಿ) ಸೋಮವಾರದಿಂದ ಜಾರಿಗೆ ಬರಲಿದೆ ಎಂದು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ತಿಳಿಸಿದ್ದಾರೆ.

ದೇಶದಲ್ಲಿ ಯುಸಿಸಿ ಜಾರಿಗೆ ತರುತ್ತಿರುವ ಮೊದಲ ರಾಜ್ಯ ಉತ್ತರಾಖಂಡ.

‘ಸಂಹಿತೆಯ ಅನುಷ್ಠಾನಕ್ಕೆ ಅಗತ್ಯವಿರುವ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಯುಸಿಸಿ ಅನುಷ್ಠಾನಕ್ಕೆ ಬೇಕಿರುವ ನಿಯಮಗಳಿಗೆ ಒಪ್ಪಿಗೆ ಪಡೆಯಲಾಗಿದೆ. ಅಧಿಕಾರಿಗಳಿಗೆ ತರಬೇತಿ ನೀಡಲಾಗಿದೆ’ ಎಂದು ಧಾಮಿ ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ಸಂಹಿತೆಯು ಸಮಾಜದಲ್ಲಿ ಏಕರೂಪತೆಯನ್ನು ತರುತ್ತದೆ. ಸಮಾಜದಲ್ಲಿ ಎಲ್ಲ ನಾಗರಿಕರಿಗೆ ಸಮಾನ ಹಕ್ಕುಗಳು ಮತ್ತು ಹೊಣೆಗಾರಿಕೆಗಳನ್ನು ಖಾತರಿಪಡಿಸುತ್ತದೆ’ ಎಂದು ಅವರು ಹೇಳಿದ್ದಾರೆ.

‘ಭಾರತವನ್ನು ಅಭಿವೃದ್ಧಿ ಹೊಂದಿದ, ಸಂಘಟಿತ, ಸೌಹಾರ್ದದ ಹಾಗೂ ಸ್ವಾವಲಂಬಿ ದೇಶವನ್ನಾಗಿಸಲು ಪ್ರಧಾನಿಯವರು ನಡೆಸುತ್ತಿರುವ ಯಜ್ಞಕ್ಕೆ ಏಕರೂಪಿ ನಾಗರಿಕ ಸಂಹಿತೆಯೆಂಬುದು ಒಂದು ಹವಿಸ್ಸು ಇದ್ದಂತೆ’ ಎಂದು ಧಾಮಿ ಅವರು ಹೇಳಿದ್ದಾರೆ.

2022ರಲ್ಲಿ ನಡೆದ ಉತ್ತರಾಖಂಡ ವಿಧಾನಸಭಾ ಚುನಾವಣೆಯ ಪ್ರಚಾರದ ಸಂದರ್ಭದಲ್ಲಿ ರಾಜ್ಯದಲ್ಲಿ ಯುಸಿಸಿ ಜಾರಿಗೆ ತರುವ ಭರವಸೆಯನ್ನು ಬಿಜೆಪಿ ನೀಡಿತ್ತು. ಚುನಾವಣೆಯಲ್ಲಿ ಜಯ ಸಾಧಿಸಿದ ಬಿಜೆಪಿ ಸತತ ಎರಡನೆಯ ಅವಧಿಗೆ ಅಧಿಕಾರಕ್ಕೆ ಬಂದಿತ್ತು.

ಪಕ್ಷವು ಯುಸಿಸಿ ಜಾರಿಗೆ ತೋರಿರುವ ಬದ್ಧತೆಯು ಈ ಐತಿಹಾಸಿಕ ಜಯಕ್ಕೆ ಕಾರಣ ಎಂದು ಧಾಮಿ ಅವರು ಹೇಳಿದ್ದರು. ಧಾಮಿ ಅವರು 2022ರ ಮಾರ್ಚ್‌ನಲ್ಲಿ ಸರ್ಕಾರ ರಚಿಸಿದ ತಕ್ಷಣ ಸಂಪುಟವು ತನ್ನ ಮೊದಲ ಸಭೆಯಲ್ಲೇ, ಯುಸಿಸಿ ಕರಡು ಸಿದ್ಧಪಡಿಸಲು ತಜ್ಞರ ಸಮಿತಿಯೊಂದನ್ನು ರಚಿಸುವ ಪ್ರಸ್ತಾವಕ್ಕೆ ಅನುಮೋದನೆ ನೀಡಿತ್ತು.



> ಏಕರೂಪ ನಾಗರಿಕ ಸಂಹಿತೆಯ ಗಂಗೋತ್ರಿಯು ಉತ್ತರಾಖಂಡದಿಂದ ಚಿಮ್ಮಲಿದೆ. ಇದು ದೇಶದ ಇತರೆಡೆಗಳನ್ನೂ ತಲುಪಲಿದೆ
> **ಪುಷ್ಕರ್ ಸಿಂಗ್ ಧಾಮಿ,** ಉತ್ತರಾಖಂಡ ಮುಖ್ಯಮಂತ್ರಿ

ಮುಖ್ಯಾಂಶಗಳು


- ಮದುವೆ, ವಿಚ್ಛೇದನ, ಉತ್ತರಾಧಿಕಾರ ಸಂಬಂಧಿತ ಕಾನೂನು ನಿಯಂತ್ರಣ
- ವಿಚ್ಛೇದನಕ್ಕೆ ಕಾರಣ ಮತ್ತು ವಿಚ್ಛೇದನದ ಪ್ರಕ್ರಿಯೆ ಎಲ್ಲ ಧರ್ಮಗಳಿಗೂ ಒಂದೇ



ಟ್ರ್ಯಾಕ್ಟರ್ ರ್ಯಾಲಿ

ಪಂಜಾಬ್‌ನ ಅಮೃತಸರದಲ್ಲಿ ರೈತರು ಭಾನುವಾರ ಟ್ರ್ಯಾಕ್ಟರ್ ರ್ಯಾಲಿ ನಡೆಸಿದರು – ಪಿಟಿಐ ಚಿತ್ರ

ಭಿನ್ನಾಭಿಪ್ರಾಯ ಗೌರವಿಸಿ: ಭಾಗವತ್



ಮುಂಬೈ (ಪಿಟಿಐ): ‘ಭಿನ್ನಾಭಿಪ್ರಾಯಗಳನ್ನು ಗೌರವಿಸುವ ಮೂಲಕ ಸಾಮರಸ್ಯದಿಂದ ಬದುಕಬೇಕು’ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ ಭಾಗವತ್ ಭಾನುವಾರ ಹೇಳಿದರು.

ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಭಿವಂಡಿ ಪಟ್ಟಣದ ಕಾಲೇಜೊಂದರಲ್ಲಿ ನಡೆದ ಗಣರಾಜ್ಯೋತ್ಸವ ಸಮಾರಂಭದಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

‘ಯಾರನ್ನೂ ಹತ್ತಿಕ್ಕಬಾರದು ಮತ್ತು ಎಲ್ಲರಿಗೂ ಬೆಳೆಯಲು ಅವಕಾಶ ದೊರೆಯಬೇಕು. ಸಾಮರಸ್ಯದಿಂದ ಬದುಕಲು ಒಗ್ಗಟ್ಟು ಮುಖ್ಯ’ ಎಂದರು.

9ನೇ ಪುಟ ನೋಡಿ



ಆಸ್ಟ್ರೇಲಿಯನ್ ಓಪನ್ ಸಿನ್ನರ್‌ಗೆ ಕಿರೀಟ

ಮೆಲ್ಬರ್ನ್ (ಎಎಫ್‌ಪಿ): ಇಟಲಿಯ ಯಾನಿಕ್ ಸಿನ್ನರ್ ಅವರು ಭಾನುವಾರ ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ 6-3, 7-6 (7/4), 6-3ರಿಂದ ಜರ್ಮನಿಯ ಅಲೆಕ್ಸಾಂಡರ್ ಜ್ವರೇವ್ ಅವರನ್ನು ಮಣಿಸಿ, ಸತತ ಎರಡನೇ ಬಾರಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

10

ಚಿನಕುರುಳಿ

ಪ್ರಕಾಶ್ ಶೆಟ್ಟಿ




ಆ್ಯಪ್ ಸಿದ್ಧಪಡಿಸಿದ ಅಮೃತ ವಿದ್ಯಾಪೀಠಂ ವಿಶ್ವವಿದ್ಯಾಲಯ

ಅಂಗೈನಲ್ಲೇ ಆನೆಗಳ ಚಲನವಲನ

• ಚಂದ್ರಹಾಸ ಹಿರೇಮಳಲಿ


ಅಮೃತಪುರಿ (ಕೇರಳ): ಪಶ್ಚಿಮಘಟ್ಟದ ವ್ಯಾಪ್ತಿಯ ಜಿಲ್ಲೆಗಳಲ್ಲಿ ಹೆಚ್ಚಾಗುತ್ತಿರುವ ಆನೆಗಳ ದಾಳಿ, ಉಪಟಳದ ನಿಯಂತ್ರಣಕ್ಕೆ ಕೇರಳದ ಅಮೃತ ವಿದ್ಯಾಪೀಠಂ ವಿಶ್ವ-ವಿದ್ಯಾಲಯದ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಪರಿಹಾರ ಕಂಡು ಹಿಡಿದಿದ್ದಾರೆ.

ಮಲೆನಾಡು, ಅರಣ್ಯದಂಚಿನ ಗ್ರಾಮಗಳಲ್ಲಿ ಆನೆಗಳು ಇತ್ತೀಚೆಗೆ ನಿರಂತರ ಹಾವಳಿ ಮಾಡುತ್ತಿವೆ. ಕಷ್ಟಪಟ್ಟು ಬೆಳೆದ ಬೆಳೆಗಳನ್ನು ನಾಶ ಮಾಡುವ ಜತೆಗೆ, ಹಲವು ರೈತರ ಜೀವಕ್ಕೂ ಎರವಾಗುತ್ತಿವೆ. ಅರಣ್ಯ ಇಲಾಖೆ ಹಾಗೂ ಸ್ಥಳೀಯರು ಆನೆಗಳನ್ನು ಓಡಿಸಲು ಏನೇ ಶ್ರಮಪಟ್ಟರೂ ಫಲ ಸಿಗುತ್ತಿಲ್ಲ. ಇಂತಹ ಸಮಸ್ಯೆಗೆ ಪರಿಹಾರ ದೊರಕಿಸಲು ಸತತ ಪ್ರಯತ್ನ ಮಾಡಿದ್ದ ವಿಶ್ವವಿದ್ಯಾಲಯದ ಸಾಮಾಜಿಕ ಮತ್ತು ನಡವಳಿಕೆ ವಿಜ್ಞಾನ ವಿಭಾಗದ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ರೈತರ ಬೆಳೆಗಳಿಗೆ ಹಾನಿ ಮಾಡುವ, ಜನ ವಸತಿ ಪ್ರವೇಶಿಸುವ ಆನೆಗಳ ಚಲನವಲನದ ಮಾಹಿತಿಯನ್ನು ರೈತರು ಹಾಗೂ ಸ್ಥಳೀಯರ ಮೊಬೈಲ್‌ಗೆ ರವಾನೆ ಮಾಡುವ ನೂತನ ಆ್ಯಪ್ ಸಿದ್ಧಪಡಿಸಿದ್ದಾರೆ.



5ನೇ ಪುಟ ನೋಡಿ

ಭೂಕುಸಿತದ ಮುನ್ನೆಚ್ಚರಿಕೆ ವ್ಯವಸ್ಥೆ



ವಯನಾಡ್ ಭೂಕುಸಿತ ಹಾಗೂ ಸಾವುನೋವಿನ ನಂತರ ಆ ಪ್ರದೇಶದ ನಿರಂತರ ಅಧ್ಯಯನ ನಡೆಸಿದ ಅಮೃತ ವಿಶ್ವವಿದ್ಯಾಲಯದ ತಜ್ಞರು, ನಂತರ ಇಂತಹ ಭೂಕುಸಿತದ ಇತರೆ ಪ್ರದೇಶಗಳಿಂದಲೂ ಮಣ್ಣು ಸಂಗ್ರಹಿಸಿದ್ದಾರೆ.

ವಿಶ್ವವಿದ್ಯಾಲಯದ ವೈರ್‌ಲೆಸ್ ನೆಟ್‌ವರ್ಕ್ಸ್ ಮತ್ತು ಅಪ್ಲಿಕೇಶನ್ ವಿಭಾಗದ ಮುಖ್ಯಸ್ಥೆ ಮನೀಶಾ ರಮೇಶ್ ಮತ್ತು ಅವರ ತಂಡದ ಶಬರಿ ರಮೇಶ್, ಇಂದುಕಲಾ, ನಿತಿನ್ ಅವರು ಸಂಗ್ರಹಿಸಿದ ಮಣ್ಣನ್ನು ನಿರಂತರ ಪ್ರಯೋಗಕ್ಕೆ ಒಳಪಡಿಸಿ, ಅವುಗಳ ಧಾರಣಾ ಸಾಮರ್ಥ್ಯ, ನೀರು ಇಂಗಿಸಿಕೊಳ್ಳುವ, ಸಂಗ್ರಹಿಸುವ ಹಾಗೂ ಕರಗುವ ಬಗೆ, ಪದರಗಳ ರಚನೆಯನ್ನು ನಿರಂತರವಾಗಿ ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಈ ಎಲ್ಲ ಪ್ರಯೋಗಗಳ ಆಧಾರದಲ್ಲಿ ಹಿಮಾಲಯ ಪ್ರದೇಶಗಳ ಮಾದರಿಯಲ್ಲಿ ಭೂಕುಸಿತದ ಮುನ್ಸೂಚನೆ ನೀಡುವ ವ್ಯವಸ್ಥೆ ರೂಪಿಸಿದ್ದಾರೆ. ಪ್ರಯೋಗದ ಅನುಷ್ಠಾನ ಹಾಗೂ ಸಂತ್ರಸ್ತರ ಪರಿಹಾರಕ್ಕೆ ಮಾತಾ ಅಮೃತಾನಂದಮಯಿ ಮಠ ₹15 ಕೋಟಿ ನೆರವು ನೀಡಿದೆ ಎನ್ನುತ್ತಾರೆ ಮಠದ ಉಪಾಧ್ಯಕ್ಷ ಸ್ವಾಮಿ ಅಮೃತಸ್ವರೂಪಾನಂದ ಪುರಿ.

> ಹೊಸ ಆ್ಯಪ್ ಬಗ್ಗೆ ರೈಲ್ವೆ ಇಲಾಖೆ ಮಾಹಿತಿ ಪಡೆದಿದೆ. ಆನೆಗಳ ಮಾಹಿತಿ ನೀಡುವ ಯೋಜನೆ ಕೇರಳದಲ್ಲಿ ಸಂಪೂರ್ಣ ಯಶಸ್ವಿಯಾದ ನಂತರ ಕರ್ನಾಟಕದ ಜತೆಗೂ ಮಾತುಕತೆ ನಡೆಸುತ್ತೇವೆ
> **ಅಜಯ್ ಬಾಲಕೃಷ್ಣನ್**
> ಸಹ ನಿರ್ದೇಶಕ, ಅಮಚಿ ಲ್ಯಾಬ್, ಅಮೃತ ವಿದ್ಯಾಪೀಠಂ

ರಾಮುಲು ಪರ– ವಿರೋಧ ನಿಲ್ಲದ ಚರ್ಚೆ

ಕಾಂಗ್ರೆಸ್‌ನಲ್ಲಿ ಸಚಿವ ಸತೀಶ ಜಾರಕಿಹೊಳಿ ಅವರನ್ನು ಮಣಿಸಲು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಶ್ರೀರಾಮುಲು ಅವರನ್ನು ಕಾಂಗ್ರೆಸ್‌ಗೆ ಸೇರಿಸಲು ಪ್ರಯತ್ನಿಸಿದ್ದಾರೆ ಎಂಬ ಶಾಸಕ ಜನಾರ್ದನ ರೆಡ್ಡಿ ಅವರ ಹೇಳಿಕೆಗೆ ಪರ– ವಿರೋಧವಾಗಿ ವಿವಿಧ ನಾಯಕರ ಪ್ರತಿಕ್ರಿಯೆಗಳು ಭಾನುವಾರವೂ ಮುಂದುವರೆದಿದೆ

ಪ್ರಜಾವಾಣಿ ವಾರ್ತೆ

ಧಾರವಾಡ: ‘ಮಾಜಿ ಸಚಿವ ಶ್ರೀರಾಮುಲು ಕಾಂಗ್ರೆಸ್ ಸೇರಿದರೆ, ವೈಯುಕ್ತಿಕವಾಗಿ ಸ್ವಾಗತಿಸುವೆ. ಅವರು ಕಾಂಗ್ರೆಸ್ ಸೇರಿದರೆ ಪಕ್ಷಕ್ಕೆ ಶಕ್ತಿ ಬಂದಂತೆ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ್ ಎಸ್. ಲಾಡ್ ಪ್ರತಿ-ಕ್ರಿಯಿಸಿದರು.



ಶ್ರೀರಾಮುಲು

‘ಶ್ರೀರಾಮುಲು ಅವರೊಂದಿಗೆ ನನಗೆ ಮೊದಲಿನಿಂದಲೂ ಪ್ರೀತಿ, ವಿಶ್ವಾಸ ಇದೆ. ಬಿಜೆಪಿಯನ್ನು ಬಹಳ ವರ್ಷಗಳಿಂದ ಅವರು ಕಟ್ಟಿದ್ದಾರೆ. ಅವರದೇ ಆದ ವರ್ಚಸ್ಸು ಇದೆ. ಕೆಪಿಸಿಸಿ ಅಧ್ಯಕ್ಷ, ಮುಖ್ಯಮಂತ್ರಿ, ಆ ಜಿಲ್ಲೆಯ ಉಸ್ತುವಾರಿ ಸಚಿವ ಮತ್ತು ಶಾಸಕರು ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳುತ್ತಾರೆ’ ಎಂದು ಅವರು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

ಮೂರಲ್ಲ, ಆರು ಬಾಗಿಲು: ಲಕ್ಷ್ಮಣ ಸವದಿ



ಕಾಗವಾಡ(ಬೆಳಗಾವಿ ಜಿಲ್ಲೆ): ‘ಬಿಜೆಪಿ ಪರಿಸ್ಥಿತಿ ಈಗ, ಮನೆಯೊಂದು ಆರು ಬಾಗಿಲಿನಂತಾಗಿದೆ. ಬಿಜೆಪಿಯಲ್ಲಿ ಈಗ ಎಲ್ಲವೂ ಸರಿ ಇಲ್ಲ. ಶ್ರೀರಾಮುಲುಗೆ ಅಷ್ಟೇ ಅಲ್ಲ, ಹಲವರಿಗೆ ಅಲ್ಲಿ ಸಮಸ್ಯೆಗಳಿವೆ. ಇತ್ತೀಚಿನ ದಿನಗಳಲ್ಲಿ ಮತ್ತಷ್ಟು ಹೊಸ ಸಮಸ್ಯೆಗಳು ಹುಟ್ಟುತ್ತವೆ’ ಎಂದು ಶಾಸಕ ಲಕ್ಷ್ಮಣ ಸವದಿ ತಿಳಿಸಿದರು.

‘ಜನಾರ್ದನ ರೆಡ್ಡಿ ಹಾಗೂ ಶ್ರೀರಾಮುಲು ಮಧ್ಯೆ ಇರುವ ವೈಮನಸ್ಸು ಈಗ ಭುಗಿಲೆದ್ದಿದೆ. ಶ್ರೀರಾಮುಲು ನೊಂದಿದ್ದಾರೆ. ಬಿಜೆಪಿಯಲ್ಲಿ ಮೂರಲ್ಲ, ಆರು ಬಾಗಿಲು ದಾಟಿ ಬಂದಿದ್ದಾರೆ. ನಾನೇನು ಅವರನ್ನು ಸಂಪರ್ಕಿಸಿಲ್ಲ. ಅವರು ಕಾಂಗ್ರೆಸ್‌ಗೆ ಬರುತ್ತಾರೆಯೇ ಅಥವಾ ಇಲ್ಲವೇ ಎಂಬುದನ್ನು ಮುಂದಿನ ದಿನಗಳಲ್ಲಿ ಕಾದುನೋಡೋಣ’ ಎಂದು ಅವರು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

‘ಕಾಂಗ್ರೆಸ್ ಪಕ್ಷ ಸಮುದ್ರವಿದ್ದಂತೆ. ಕೆಲವರು ಬರುತ್ತಾರೆ, ಕೆಲವರು ಹೋಗುತ್ತಾರೆ. ಇದರಿಂದ ರಾಷ್ಟ್ರೀಯ ಪಕ್ಷಗಳಿಗೆ ಯಾವ ಪರಿಣಾಮ ಬೀರುವುದಿಲ್ಲ’ ಎಂದು ಹೇಳಿದರು. ಶಾಸಕ ರಾಜು ಕಾಗೆ ಇದ್ದರು.

ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ: (ಕೊಪ್ಪಳ ವರದಿ): ‘ಶಾಸಕ ಜನಾರ್ದನ ರೆಡ್ಡಿ ಮತ್ತು ಬಿ. ಶ್ರೀರಾಮುಲು ನಡುವಿನ ಗುದ್ದಾಟ ಆಂತರಿಕ ವಿಚಾರವಾಗಿದ್ದು, ಇಬ್ಬರೂ ಕಾಂಗ್ರೆಸ್ ಹೆಸರಿನಲ್ಲಿ ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ’ ಎಂದು ವಸತಿ ಸಚಿವ ಜಮೀರ್ ಅಹ್ಮದ್‌ಖಾನ್ ಆರೋಪಿಸಿದರು.

9ನೇ ಪುಟ ನೋಡಿ





ಲಾಲ್‌ಬಾಗ್‌ನ ಗಾಜಿನ ಮನೆಯಲ್ಲಿ ನಡೆಯುತ್ತಿರುವ ಫಲಪುಷ್ಪ ಪ್ರದರ್ಶನವನ್ನು ವೀಕ್ಷಿಸಲು ಭಾನುವಾರ ದೊಡ್ಡ ಸಂಖ್ಯೆಯಲ್ಲಿ ಸಾರ್ವಜನಿಕರು ಸೇರಿದ್ದರು. ಲಾಲ್‌ಬಾಗ್‌ನ ನಾಲ್ಕೂ ಪ್ರವೇಶ ದ್ವಾರಗಳಲ್ಲಿ ಜನಸಂದಣಿ ಇತ್ತು

ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಲಾಲ್‌ಬಾಗ್: ಸಮುದಾಯ ಪ್ರಾಣಿಗಳ ಕುರಿತು ಬಿಬಿಎಂಪಿಯಿಂದ ಜಾಗೃತಿ ಅಭಿಯಾನ

ಫಲಪುಷ್ಪ ಪ್ರದರ್ಶನಕ್ಕೆ 1.17 ಲಕ್ಷ ಜನ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣರಾಜ್ಯೋತ್ಸವ ಅಂಗವಾಗಿ ಲಾಲ್‌ಬಾಗ್ ಗಾಜಿನ ಮನೆಯಲ್ಲಿ ಆಯೋಜಿಸಿರುವ 'ಆದಿಕವಿ ಮಹರ್ಷಿ ವಾಲ್ಮೀಕಿ' ವಿಷಯ ಆಧಾರಿತ ಫಲಪುಷ್ಪ ಪ್ರದರ್ಶನವನ್ನು ವೀಕ್ಷಿಸಲು ಭಾನುವಾರ 1.17 ಲಕ್ಷ ಜನ ಭೇಟಿ ನೀಡಿದ್ದರು.

ಭಾನುವಾರ ಸಸ್ಯಕಾಶಿಗೆ ಭೇಟಿ ನೀಡಿದವರು	
ವಯಸ್ಕರು	81,250
ಮಕ್ಕಳು	35,811
ಒಟ್ಟು	1,17,061
ಸಂಗ್ರಹವಾದ ಹಣ	₹65 ಲಕ್ಷ

ಗಣರಾಜ್ಯೋತ್ಸವದ ಅಂಗವಾಗಿ ಶಾಲಾ–ಕಾಲೇಜು, ಕಚೇರಿಗಳಿಗೆ ರಜೆ ಇದ್ದುದರಿಂದ ಬೆಳಿಗ್ಗೆಯಿಂದಲೇ ಸಾರ್ವಜನಿಕರು ತಂಡೋಪತಂಡವಾಗಿ ಲಾಲ್‌ಬಾಗ್‌ನತ್ತ ಬರುತ್ತಿದ್ದರು. ಸಂಜೆ ವೇಳೆ ಎತ್ತ ನೋಡಿದರೂ ಜನಜಾತ್ರೆ. ಲಾಲ್‌ಬಾಗ್‌ನ ನಾಲ್ಕೂ ಪ್ರವೇಶ ದ್ವಾರಗಳಲ್ಲಿ ಜನಸಂದಣಿ ಹೆಚ್ಚಿತ್ತು. ಇದರಿಂದ ಸಂಚಾರ ದಟ್ಟಣೆ ಉಂಟಾಗಿತ್ತು. ವಿದ್ಯಾರ್ಥಿಗಳು, ಯುವಕರು 'ಭಾರತ್ ಮಾತಾ ಕೀ ಜೈ', 'ವಂದೇ ಮಾತರಂ' ಎಂಬ ಜಯಘೋಷ ಕೂಗುತ್ತಿದ್ದರು.

ಲಾಲ್‌ಬಾಗ್ ಮುಖ್ಯ ದ್ವಾರದ ರಸ್ತೆಯಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸಲು ಏಕಮುಖ ಸಂಚಾರಕ್ಕೆ ಅವಕಾಶ ಕಲ್ಪಿಸಿದ್ದರೂ, ಬೀದಿ ವ್ಯಾಪಾರಿಗಳ ಹಾವಳಿಯಿಂದಾಗಿ ಸಂಚಾರ ದಟ್ಟಣೆ ಉಂಟಾಗಿತ್ತು. ಲಾಲ್‌ಬಾಗ್ ಮೆಟ್ರೊ ನಿಲ್ದಾಣದಲ್ಲಿ ಟಿಕೆಟ್ ಖರೀದಿಗೆ ಪ್ರಯಾಣಿಕರು ಮುಗಿಬಿದ್ದಿದ್ದರು. ಉದ್ಯಾನದ ನಾಲ್ಕೂ ಪ್ರವೇಶ ದ್ವಾರಗಳ ಪಾದಚಾರಿ ಮಾರ್ಗದಲ್ಲಿ ಕಿರು ಮಾರುಕಟ್ಟೆಗಳೇ ಸೃಷ್ಟಿಯಾಗಿದ್ದವು. ಇದರಿಂದ ವಾಹನ ಸಂಚಾರಕ್ಕೆ ತೊಂದರೆಯಾಯಿತು.

ಗಾಜಿನ ಮನೆಯ ಮುಂಭಾಗದಲ್ಲಿ ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಸಾವಿರಾರು ಜನ ಸೇರಿದ್ದರು. ಇದರಿಂದ ಜನರನ್ನು ನಿಯಂತ್ರಿಸಲು ಪೊಲೀಸರು, ತೋಟಗಾರಿಕೆ ಇಲಾಖೆ ಸಿಬ್ಬಂದಿ ಹರಸಾಹಸಪಟ್ಟರು. ಲಕ್ಷಾಂತರ ಪುಷ್ಪಗಳಲ್ಲಿ ಅರಳಿದ ವಾಲ್ಮೀಕಿ ಅವರ ಜೀವನ ಗಾಥೆಯನ್ನು ಸಾರ್ವಜನಿಕರು ಕಣ್ತುಂಬಿಕೊಂಡರು.

ಬಿಬಿಎಂಪಿ ವತಿಯಿಂದ ಸಮುದಾಯ ಪ್ರಾಣಿಗಳ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಜಾಗೃತಿ ಅಭಿಯಾನವನ್ನು ನಡೆಸಲಾಯಿತು. 'ಪ್ರಾಣಿಗಳ ಆರೋಗ್ಯದ ಮೂಲಕ ಸಾರ್ವಜನಿಕರ ಆರೋಗ್ಯ' ಶೀರ್ಷಿಕೆ ಅಡಿಯಲ್ಲಿ ಸಮುದಾಯ ಪ್ರಾಣಿಗಳ ಸಹಬಾಳ್ವೆ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಬೀದಿ ನಾಟಕ ಹಾಗೂ ನೃತ್ಯದ ಜಾಗೃತಿ ಅಭಿಯಾನ ನಡೆಸಲಾಯಿತು.

'ಕಳೆದ 11 ದಿನಗಳಿಂದ ಒಟ್ಟು 4.38 ಲಕ್ಷ ಜನ ಫಲಪುಷ್ಪ ಪ್ರದರ್ಶನವನ್ನು ವೀಕ್ಷಿಸಿದ್ದಾರೆ' ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.



ಸಮುದಾಯ ಪ್ರಾಣಿಗಳ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಿದ ಕಲಾವಿದರು — ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ಗರ್ಡರ್ ಅಳವಡಿಕೆ ಕಾಮಗಾರಿ ಸಂಚಾರ ಮಾರ್ಗ ಬದಲಾವಣೆ

ಬೆಂಗಳೂರು: ಬಿಎಂಆರ್‌ಸಿಎಲ್ ವತಿಯಿಂದ ಮಹದೇವಪುರ ಹಾಗೂ ಎಚ್‌ಎಎಲ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ರೈನ್ ಬೋ ಆಸ್ಪತ್ರೆ ಜಂಕ್ಷನ್ ಬಳಿಯ ದೊಡ್ಡನೆಕ್ಕುಂದಿಯ ಸೇಲಂ ಸೇತುವೆ ಮೇಲೆ ಜನವರಿ 27 ಮತ್ತು 28ರಂದು ಸಿಮೆಂಟ್ ತೊಲೆ (ಗರ್ಡರ್) ಅಳವಡಿಸುವ ಕಾಮಗಾರಿ ಕೈಗೊಂಡಿರುವುದರಿಂದ ವಾಹನ ಸಂಚಾರದಲ್ಲಿ ಮಾರ್ಪಾಡು ಮಾಡಲಾಗಿದೆ.

ಕೆ.ಆರ್.ಪುರ ಕಡೆಗೆ ಹೋಗುವ ಒಆರ್‌ಆರ್‌ನ ಒಂದು ಬದಿಯಲ್ಲಿ ವಾಹನ ಸಂಚಾರ ನಿರ್ಬಂಧಿಸಿ, ಇನ್ನೊಂದು ಬದಿಯಲ್ಲಿ ರಾತ್ರಿ 9 ರಿಂದ ಬೆಳಿಗ್ಗೆ 6ರವರೆಗೆ ದ್ವಿಮುಖ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗಿದೆ ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದ್ದಾರೆ.

ಹೊರವರ್ತುಲ ರಸ್ತೆಯ ಮಾರತ್‌ಹಳ್ಳಿ ಕಡೆಯಿಂದ ಟಿನ್ ಫ್ಯಾಕ್ಟರಿ ಕಡೆಗೆ ಮೆಟ್ರೊ ಪಿಲ್ಲರ್ ಸಂಖ್ಯೆ 434 ರಿಂದ ಪಿಲ್ಲರ್ ಸಂಖ್ಯೆ 435ರವರೆಗೆ 200ಮೀಟರ್ ಎಡಭಾಗದ ರಸ್ತೆಯಲ್ಲಿ ಸಂಚಾರ ನಿರ್ಬಂಧಿಸಲಾಗಿದೆ.

ಪರ್ಯಾಯ ಮಾರ್ಗ: ಮಾರತ್‌ಹಳ್ಳಿ ಕಡೆಯಿಂದ ಟಿನ್ ಫ್ಯಾಕ್ಟರಿ ಮತ್ತು ಹೆಬ್ಬಾಳ ಕಡೆಗೆ ಸಂಚರಿಸುವ ಸವಾರರು ಮಾರತ್‌ಹಳ್ಳಿ ಸೇತುವೆ ಬಳಿ ಎಡ ತಿರುವು ಪಡೆದು ಎಚ್‌ಎಎಲ್ ಏರ್‌ಪೋರ್ಟ್ ರಸ್ತೆಯಲ್ಲಿ ಸಂಚರಿಸಿ ಸುರಂಜನ್ ದಾಸ್ ರಸ್ತೆ ಜಂಕ್ಷನ್‌ನಲ್ಲಿ ಬಲ ತಿರುವು ಪಡೆದು ಎನ್‌ಜಿಇಎಫ್ ಜಂಕ್ಷನ್ ತಲುಪಿ, ಬಲ ತಿರುವು ಪಡೆದು ಟಿನ್ ಫ್ಯಾಕ್ಟರಿ ಮತ್ತು ಹೆಬ್ಬಾಳ ಕಡೆಗೆ ಸಂಚರಿಸಬಹುದು.

ಟಿನ್ ಫ್ಯಾಕ್ಟರಿ ಕಡೆಯಿಂದ ಮಾರತ್‌ಹಳ್ಳಿ ಕಡೆಗೆ ಸಂಚರಿಸುವ ವಾಹನ ಸವಾರರು ಕೆ.ಆರ್.ಪುರ ರೈಲು ನಿಲ್ದಾಣ ಬಳಿ ಎಡ ತಿರುವು ಪಡೆದು ಐಟಿಪಿಎಲ್ ರಸ್ತೆಯಲ್ಲಿ ಸಂಚರಿಸಿ ಹೂಡಿ ಜಂಕ್ಷನ್ ಬಳಿ ಬಲ ತಿರುವು ಪಡೆದು ಕುಂದಲಹಳ್ಳಿ ಮೂಲಕ ಮಾರತ್ ಹಳ್ಳಿ ಕಡೆಗೆ ಸಂಚರಿಸಬಹುದು.




ಬೈಕ್ ಚಕ್ರಕ್ಕೆ ಸುತ್ತಿಕೊಂಡ ಕೇಬಲ್: ಸವಾರ ಸಾವು

ಬೆಂಗಳೂರು: ಎಚ್‌ಎಎಲ್ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನಕ್ಕೆ ಕೇಬಲ್ ಸುತ್ತಿಕೊಂಡ ಪರಿಣಾಮ ನಿಯಂತ್ರಣ ತಪ್ಪಿ ರಸ್ತೆಗೆ ಬಿದ್ದ ಸವಾರನ ಮೇಲೆ ಬಿಎಂಟಿಸಿ ಬಸ್ ಹರಿದು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಬೊಮ್ಮನಹಳ್ಳಿ ನಿವಾಸಿ ರೋಹಿತ್ ಆರ್.ಪಾಟೀಲ್ (26) ಮೃತ ಸವಾರ. ಐಟಿಪಿಎಲ್ ರಸ್ತೆಯ ರಾಮೇಶ್ವರಂ ಕೆಫೆ ಸಮೀಪದ ಪಾಸ್‌ಪೋರ್ಟ್ ಕಚೇರಿ ಬಳಿ ಘಟನೆ ಸಂಭವಿಸಿದೆ.

ವೃತ್ತಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದ ರೋಹಿತ್, ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದರು. ರಸ್ತೆಯಲ್ಲಿ ಹಾದು ಹೋಗಿದ್ದ ಕೇಬಲ್ ದ್ವಿಚಕ್ರ ವಾಹನದ ಚಕ್ರಕ್ಕೆ ಸುತ್ತಿಕೊಂಡು ನಿಯಂತ್ರಣ ತಪ್ಪಿ ಕೆಳಗೆ ಬಿದ್ದಿದ್ದಾರೆ. ಅದೇ ಸಮಯಕ್ಕೆ ಹಿಂದಿನಿಂದ ಬರುತ್ತಿದ್ದ ಬಿಎಂಟಿಸಿ ಬಸ್‌ನ ಚಕ್ರ ರೋಹಿತ್ ಅವರ ಮೇಲೆ ಹರಿದಿದೆ.

'ಬಿಗ್ ಬಾಸ್' ಗೆದ್ದ ಕುರಿಗಾಹಿ ಹನುಮಂತ



ಹಾವೇರಿ: ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿದ್ದ 'ಬಿಗ್ ಬಾಸ್' 11ನೇ ಆವೃತ್ತಿಯ ರಿಯಾಲಿಟಿ ಶೋನಲ್ಲಿ ಜಿಲ್ಲೆಯ ಸವಣೂರು ತಾಲ್ಲೂಕಿನ ಚಿಲ್ಲೂರು ಬಡ್ನಿ ಗ್ರಾಮದ ನಿವಾಸಿ ಹನುಮಂತ ಲಮಾಣಿ ಅವರು ವಿಜಯಶಾಲಿಯಾಗಿದ್ದಾರೆ.

ವೀಕ್ಷಕರಿಂದ 5.23 ಕೋಟಿ ಮತಗಳನ್ನು ಪಡೆದಿದ್ದ ಹನುಮಂತ, ಬಿಗ್ ಬಾಸ್ ರಿಯಾಲಿಟಿ ಶೋ ಇತಿಹಾಸದಲ್ಲಿಯೇ ಅತ್ಯಧಿಕ ಮತ ಪಡೆದ ಸ್ಪರ್ಧಿ ಎಂಬ ದಾಖಲೆ ಬರೆದಿದ್ದಾರೆ. ಅವರು ಸ್ಪರ್ಧೆಗೆ ವೈಲ್ಡ್‌ಕಾರ್ಡ್ ಮೂಲಕ ಪ್ರವೇಶ ಪಡೆದಿದ್ದರು.

ಸಚಿವ ಸಂಪುಟ ಸಭೆ ಫೆ.17ಕ್ಕೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: 'ಜಿಲ್ಲೆಯ ಮಲೆ ಮಹದೇಶ್ವರ ಬೆಟ್ಟದಲ್ಲಿ ಫೆ.15ರಂದು ನಡೆಸಲು ಉದ್ದೇಶಿಸಿದ್ದ ಸಚಿವ ಸಂಪುಟ ಸಭೆಯನ್ನು ಫೆ.17ಕ್ಕೆ ಮುಂದೂಡಲಾಗಿದೆ. 18ರಂದು ಚಾಮರಾಜನಗರದಲ್ಲಿ ಫಲಾನುಭವಿಗಳ ಸಮಾವೇಶ ಆಯೋಜಿಸಲಾಗಿದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ತಿಳಿಸಿದರು.

ರಾಜಭವನ ವೀಕ್ಷಣೆ: ಇಂದು ಸಾರ್ವಜನಿಕರಿಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 76ನೇ ಗಣರಾಜ್ಯೋತ್ಸವದ ನಿಮಿತ್ತ ಸೋಮವಾರ (ಜ.27) ಸಾರ್ವಜನಿಕರಿಗೆ ರಾಜಭವನ ವೀಕ್ಷಣೆಗೆ ಪ್ರವೇಶಾವಕಾಶ ಕಲ್ಪಿಸಲಾಗಿದೆ.

ಸಂಜೆ 6 ಗಂಟೆಯಿಂದ 7.30ವರೆಗೆ ರಾಜಭವನವನ್ನು ವೀಕ್ಷಿಸಬಹುದು. ಸಾರ್ವಜನಿಕರು ಮುಖ್ಯ ದ್ವಾರದ ಮೂಲಕ ಉಚಿತ ಪ್ರವೇಶ ಪಡೆಯಬಹುದಾಗಿದೆ. ರಾಜಭವನ ಪ್ರವೇಶ ಪಡೆಯಲು ಇಚ್ಛಿಸುವವರು ಪ್ರವೇಶದ ವೇಳೆ ಆಧಾರ್ ಕಾರ್ಡ್ ಅಥವಾ ಭಾವಚಿತ್ರವಿರುವ ಅಧಿಕೃತ ಗುರುತಿನ ಚೀಟಿಯನ್ನು ಹಾಜರುಪಡಿಸಬೇಕು.

ಸಾರ್ವಜನಿಕರು ಯಾವುದೇ ರೀತಿಯ ಕ್ಯಾಮೆರಾ, ಕೈ ಚೀಲ, ಚೂಪಾದ ವಸ್ತುಗಳು, ತಿಂಡಿ-ತಿನಿಸು, ಪ್ಲಾಸ್ಟಿಕ್ ವಸ್ತುಗಳು ಸೇರಿದಂತೆ ಯಾವುದೇ ಲಗೇಜ್ ಚೀಲವನ್ನು ತರುವಂತಿಲ್ಲ. ಹಾಗೆಯೇ, ರಾಜಭವನದ ಒಳಗಡೆ ವಾಹನ ನಿಲುಗಡೆಗೆ ಅವಕಾಶ ಇರುವುದಿಲ್ಲ.

ಸಾರ್ವಜನಿಕರು ಭದ್ರತಾ ಸಿಬ್ಬಂದಿ ನೀಡುವ ಸೂಚನೆಗಳನ್ನು ಪಾಲಿಸಿ, ಸಹಕರಿಸಬೇಕು ಎಂದು ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಆರ್.ಪ್ರಭುಶಂಕರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ದೇಣಿಗೆ ಕೊಟ್ಟವರಿಗಷ್ಟೇ ಪ್ರಶಸ್ತಿ ಕೊಡುತ್ತಿದ್ದ ಕಾಂಗ್ರೆಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತನಗೆ ಬೇಕಾದವರಿಗೆ ಮತ್ತು ಪಕ್ಷಕ್ಕೆ ದೇಣಿಗೆ ನೀಡಿದವರಿಗಷ್ಟೇ ಕಾಂಗ್ರೆಸ್, ಪ್ರಶಸ್ತಿ ನೀಡಿ ಗೌರವಿಸುತ್ತಿತ್ತು' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ದೂರಿದರು.



'ಭೀಮ ಶಕ್ತಿ ಸಂಗಮ' ಕಾರ್ಯಕ್ರಮದ ಅಂಗವಾಗಿ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಅವರು ಪೌರ ಕಾರ್ಮಿಕರ ಜತೆ ಉಪಾಹಾರ ಸೇವಿಸಿದರು

ಬಿಜೆಪಿ ಕೇಂದ್ರ ಕಚೇರಿಯಲ್ಲಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬಾಬಾ ಸಾಹೇಬರನ್ನು ಕಾಂಗ್ರೆಸ್ ನಡೆಸಿಕೊಂಡ ರೀತಿಯೇ ಇದಕ್ಕೆ ಉತ್ತಮ ಉದಾಹರಣೆ. ಅವರನ್ನು ಚುನಾವಣೆಯಲ್ಲಿ ಸೋಲಿಸಿದವರಿಗೆ ಪದ್ಮ ಪ್ರಶಸ್ತಿ ಕೊಡಲಾಗಿತ್ತು. ಆದರೆ, ಅಂಬೇಡ್ಕರರಿಗೆ 'ಭಾರತ ರತ್ನ' ಕೊಡಲಿಲ್ಲ' ಎಂದರು.

'ಸ್ವಾತಂತ್ರ್ಯಕ್ಕಾಗಿ ರಕ್ತ ಹರಿಸಿದವರು, ಪ್ರಾಣತ್ಯಾಗ ಮಾಡಿದವರನ್ನು ನೆನಪಿಸಿಕೊಳ್ಳುತ್ತಿಲ್ಲ. ಯಾರು ಬ್ರಿಟಿಷರಿಗೆ ಸಿಂಹಸ್ವಪ್ನವಾಗಿದ್ದರೋ, ಜೈಲುಗಳಲ್ಲಿ ಜೀವನ ಕಳೆದರೋ ಅಂಥವರಿಗೆ ದೇಶದ್ರೋಹದ ಪಟ್ಟ ಕಟ್ಟಲಾಗಿದೆ. ಯಾರು ಸೈನ್ಯವನ್ನು ಕಟ್ಟಿ ಬ್ರಿಟಿಷರನ್ನು ಹೆದರಿಸುತ್ತಿದ್ದರೋ ಅಂಥವರನ್ನು ನಾಪತ್ತೆ ಮಾಡಿಬಿಟ್ಟರು' ಎಂದರು.

'ಅತಿಥಿಗೃಹದಲ್ಲಿ ನರ್ತನ ಮಾಡಿಕೊಂಡು ಬ್ರಿಟಿಷರೊಂದಿಗೆ ಚಕ್ಕಂದ ಆಡಿದವರು ಪಂಡಿತರಾಗಿಬಿಟ್ಟರು. ಯಾರಿಗೆ ಆಗರ್ಭ ಶ್ರೀಮಂತಿಕೆ, ತಿನ್ನಲು ಅನ್ನ, ಉಡಲು ಬಟ್ಟೆ ಇತ್ತೋ ಅವರು ಉಪವಾಸ ಮಾಡಿದ್ದಷ್ಟಕ್ಕೇ ಮಹಾತ್ಮ ಎಂದು ಮಾಡಿತು' ಎಂದರು.

'ಆದರೆ ಅಂಬೇಡ್ಕರರು ಹಾಕಿಕೊಟ್ಟ ಸಂವಿಧಾನದ ಹಾದಿಯಲ್ಲಿ ನಡೆಯುತ್ತಿರುವ ಕೇಂದ್ರದ ಮೋದಿ ಸರ್ಕಾರವು, ಮೂಲೆ–ಮೂಲೆಯಲ್ಲಿ ಇರುವ ಅರ್ಹ ಸಾಧಕರನ್ನು ಹುಡುಕುತ್ತಿದೆ. ಅಂತಹವರಿಗೆ ಪದ್ಮ ಪ್ರಶಸ್ತಿಗಳನ್ನು ನೀಡಿ ಗೌರವಿಸುತ್ತಿದೆ. ಜನರು ಇದನ್ನು ಅರ್ಥ ಮಾಡಿಕೊಳ್ಳಬೇಕು' ಎಂದರು.

ನಗರದಲ್ಲಿ ಇಂದು

ಎಚ್. ನರಸಿಂಹಯ್ಯ ಅವರ ಜನ್ಮಶತಮಾನೋತ್ಸವ ಅಂಗವಾಗಿ 'ವಿಜ್ಞಾನದೆಡೆಗೆ ನಮ್ಮ ನಡಿಗೆ' ಉದ್ಘಾಟನೆ: ಎನ್.ಎಸ್. ಬೋಸರಾಜು, ಪುಸ್ತಕಗಳ ಬಿಡುಗಡೆ: ಸತೀಶ ಜಾರಕಿಹೊಳಿ, ಆಶಯ ನುಡಿ: ಬರಗೂರು ರಾಮಚಂದ್ರಪ್ಪ, ವಿಜ್ಞಾನದೆಡೆಗೆ ನಮ್ಮ ನಡಿಗೆ ಕುರಿತು: ಎಲ್. ಹನುಮಂತಯ್ಯ, ಅಧ್ಯಕ್ಷತೆ: ಡಾ.ಸಿ. ಆರ್. ಚಂದ್ರಶೇಖರ್, ಆಯೋಜನೆ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ, ಸ್ಥಳ: ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 9.30



ಎಚ್‌.ನರಸಿಂಹಯ್ಯ

'ಧರ್ಮ ಪ್ರವರ್ತಕ ಸಾಮ್ರಾಟ್ ಅಶೋಕ' ನಾಟಕ ಪ್ರದರ್ಶನ: ನಿರ್ದೇಶನ: ದಿವಾಕರ್ ಡಿ., ಅಧ್ಯಕ್ಷತೆ: ವಿಠ್ಠಲ್ ಕೊಪ್ಪದ್, ಅತಿಥಿಗಳು: ಸಿ.ಕೆ. ರಾಮೇಗೌಡ, ಬಿ. ರುದ್ರೇಶ್, ಜಿಪಿಒ ಚಂದ್ರು, ಡಬ್ಲ್ಯು ಶಾಂತುಕುಮಾರ್, ಕೆ.ಜಿ. ನಾರಾಯಣ್, ಆಯೋಜನೆ: ಧ್ರುವಿದ ಚಾರಿಟಬಲ್ ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30ರಿಂದ

55ನೇ ವಾರ್ಷಿಕೋತ್ಸವ: ಅತಿಥಿ: ರಜನೀಶ್ ಶರ್ಮಾ, ಅಧ್ಯಕ್ಷತೆ: ನರಸಿಂಹ ನಾಯ್ಕ, ಉಪಸ್ಥಿತಿ: ರಮಾ ಎಸ್., ಚೇತನ ಜಯಸಿಂಗ್ ಪಾಟೀಲ್ ಔಟಿ, ಮೋಹನ್ ಕರ್ಣಿಕ್, ಆಯೋಜನೆ: ಬಿಇಎಲ್ ದಕ್ಷಿಣ ಕನ್ನಡಿಗರ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಬಿಇಎಲ್ ಜಾಲಹಳ್ಳಿ, ಸಂಜೆ 5.30

'ಸಾಲುಮರಗಳ ತಾಯಿ ತಿಮ್ಮಕ್ಕ' ನಾಟಕ ಪ್ರದರ್ಶನ: ನಿರ್ದೇಶನ: ಬೇಲೂರು ರಘುನಂದನ್, ಆಯೋಜನೆ: ನಾಟಕ ಬೆಂಗ್ಳೂರು, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7

ನಾಡದೇವಿ ಭುವನೇಶ್ವರಿ ಕಂಚಿನ ಪ್ರತಿಮೆ ಅನಾವರಣ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶೋಭಾ ಕರಂದ್ಲಾಜೆ, ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಅತಿಥಿಗಳು: ಶಿವರಾಜ ತಂಗಡಗಿ, ಸತೀಶ ಜಾರಕಿಹೊಳಿ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ವಿಧಾನಸೌಧದ ಪಶ್ಚಿಮ ದಿಕ್ಕಿನ ಗೇಟ್ ಸಂಖ್ಯೆ–1 ಮತ್ತು 2ರ ನಡುವೆ ಇರುವ ವಾಹನ ನಿಲುಗಡೆ ಸ್ಥಳ, ಸಂಜೆ 4.30

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ **9606038256**

'ಬೀಡಾಡಿ ದನಗಳ ಹಾವಳಿ'

ಕನಕಪುರ ರಸ್ತೆಯ ಚುಂಚಘಟ್ಟ ಮುಖ್ಯರಸ್ತೆಯಲ್ಲಿ ಬೀಡಾಡಿ ದನಗಳ ಹಾವಳಿ ಹೆಚ್ಚಾಗಿದೆ. ಇದರಿಂದ ಈ ಭಾಗದಲ್ಲಿ ವಾಹನಗಳ ಸಂಚಾರಕ್ಕೆ ಸಮಸ್ಯೆ ಆಗುತ್ತಿದ್ದು, ಸಂಚಾರ ದಟ್ಟಣೆಯಾಗುತ್ತಿದೆ. ಕೆಲವೊಮ್ಮೆ ಅಪಘಾತಗಳು ಸಂಭವಿಸುತ್ತಿವೆ. ಇವುಗಳಿಂದ ಬೀದಿಬದಿಯ ವ್ಯಾಪಾರಿಗಳಿಗೆ ಕಿರಿಕಿರಿ ಆಗುತ್ತಿದೆ. ಬೀಡಾಡಿ ದನಗಳನ್ನು ನಿಯಂತ್ರಿಸಲು ಅವರ ಮಾಲೀಕರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು.

ಪತ್ತಂಗಿ ಎಸ್. ಮುರಳಿ, ಕುಮಾರಸ್ವಾಮಿ ಬಡಾವಣೆ



ಚುಂಚಘಟ್ಟ ಮುಖ್ಯರಸ್ತೆಯಲ್ಲಿ ಬೀಡಾಡಿ ದನಗಳು



ಶೇಷಾದ್ರಿಪುರದ ರೇಸ್‌ಕೋರ್ಸ್ ವೃತ್ತದ ರಸ್ತೆಯಲ್ಲಿ ಗುಂಡಿಗಳು ಬಿದ್ದಿವೆ

'ರಸ್ತೆ ಗುಂಡಿ ಮುಚ್ಚಿ'

ಶೇಷಾದ್ರಿಪುರ ಮತ್ತು ಸುಬೇದಾರ್ ರಾವ್ ಛತ್ರಂ ರಸ್ತೆಯಿಂದ ರೇಸ್‌ಕೋರ್ಸ್ ಮೂಲಕ ಕುಮಾರಕೃಪಾ ಹಾಗೂ ಯಾದವ ಕಾಲೇಜಿಗೆ ಸಂಪರ್ಕಿಸುವ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ಸಂಪೂರ್ಣ ಹಾಳಾಗಿದೆ. ಈ ರಸ್ತೆಯಲ್ಲಿ ದ್ವಿಚಕ್ರ ವಾಹನಗಳು ಗುಂಡಿಗೆ ಸಿಲುಕಿ ಹಲವಾರು ಸವಾರರು ಕೈ ಕಾಲುಗಳನ್ನು ಮುರಿದುಕೊಂಡಿದ್ದಾರೆ. ರಸ್ತೆ ಹಾಳಾದ ಪರಿಣಾಮ ನಿಧಾನ ಗತಿ ಸಂಚಾರದಿಂದ ಇಲ್ಲಿ ಪ್ರತಿನಿತ್ಯ ಸಂಚಾರದಟ್ಟಣೆ ಉಂಟಾಗುತ್ತಿದೆ. ಕೂಡಲೇ ಬಿಬಿಎಂಪಿ ಅಧಿಕಾರಿಗಳು ಇಲ್ಲಿನ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಶಿವಪ್ರಸಾದ್, ಶೇಷಾದ್ರಿಪುರ

'ಪೊಲೀಸರ ಗಸ್ತು ಹೆಚ್ಚಿಸಿ'

ಬಾಪೂಜಿನಗರ ಎರಡನೇ ಹಂತದ ಸ್ವಾಮಿ ವಿವೇಕಾನಂದ ಉದ್ಯಾನದ ಹತ್ತಿರ ದುರ್ಗಾಪರಮೇಶ್ವರಿ, ಮುನೇಶ್ವರ, ಗಣಪತಿ ದೇವಸ್ಥಾನವಿದೆ. ಶ್ರೀಕೃಷ್ಣದೇವರಾಯ ರೈಲ್ವೆ ನಿಲ್ದಾಣವೂ ಸಮೀಪದಲ್ಲಿದೆ. ಇಲ್ಲಿ ಆಗಾಗ ಕಳ್ಳತನ ಹಾಗೂ ಕಾನೂನುಬಾಹಿರ ಚಟುವಟಿಕೆಗಳು ನಡೆಯುತ್ತಿವೆ. ಇಲ್ಲಿನ ನಾಲ್ಕನೇ ಮುಖ್ಯರಸ್ತೆ ಹಾಗೂ ರೈಲ್ವೆ ಪ್ಯಾರಲಲ್ ರಸ್ತೆಯಲ್ಲಿ ಮತ್ತು ಬಾಪೂಜಿನಗರ ಎರಡನೇ ಹಂತದಲ್ಲಿ ಪೊಲೀಸರ ಗಸ್ತು ಹೆಚ್ಚಿಸಬೇಕು. ಪೊಲೀಸರು ತಿರುಗುವ ಪ್ರದೇಶಗಳಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾಗಳನ್ನು ಅಳವಡಿಸಬೇಕು.

ನಾಗರತ್ನ ರವಿಕುಮಾರ್, ಬಾಪೂಜಿನಗರ

'ತುಕ್ಕು ಹಿಡಿದ ಮಕ್ಕಳ ಆಟಿಕೆಗಳು'

ಕೃಷ್ಣರಾಜಪುರ ವಿಧಾನಸಭಾ ವ್ಯಾಪ್ತಿಯ ಬಿಬಿಎಂಪಿ ವಾರ್ಡ್ ಸಂಖ್ಯೆ–53 ಬಸವನಪುರದ ವ್ಯಾಪ್ತಿಯ ಮೇಡಹಳ್ಳಿ ಎಸ್.ಜೆ.ಇ.ಎಸ್ ಕಾಲೇಜಿನ ಹಿಂಭಾಗದಲ್ಲಿರುವ ಬಿಬಿಎಂಪಿ ಉದ್ಯಾನ ಸಂಪೂರ್ಣ ಹದಗೆಟ್ಟಿದ್ದು, ಮಕ್ಕಳ ಆಟಿಕೆಗಳು ತುಕ್ಕು ಹಿಡಿದಿವೆ. ಉದ್ಯಾನದಲ್ಲಿರುವ ಜೋಕಾಲಿ, ಜಾರುಬಂಡಿ ಸೇರಿದಂತೆ ವಿವಿಧ ಆಟಿಕೆಗಳನ್ನು ಬಳಸಲು ಪ್ರತಿನಿತ್ಯ ಮಕ್ಕಳು ಬರುತ್ತಾರೆ. ತುಕ್ಕು ಹಿಡಿದ ಆಟಿಕೆಗಳಲ್ಲಿ ಮಕ್ಕಳು ಆಟ ಆಡುತ್ತಿದ್ದು, ಅನಾಹುತವಾಗುವ ಸಾಧ್ಯತೆ ಇದೆ. ಆದ್ದರಿಂದ ಇಲ್ಲಿನ ಆಟಿಕೆಗಳನ್ನು ಬದಲಾಯಿಸಬೇಕು.



ತುಕ್ಕು ಹಿಡಿದ ಮಕ್ಕಳ ಆಟಿಕೆಗಳು

ಜೆ. ಕಿರಣ್ ಕುಮಾರ್, ಕೃಷ್ಣರಾಜಪುರ



ಬೆಂಗಳೂರಿನ ಫೀಲ್ಡ್ ಮಾರ್ಷಲ್ ಮಾಣೆಕ್‌ಷಾ ಪರೇಡ್ ಮೈದಾನದಲ್ಲಿ ಭಾನುವಾರ ನಡೆದ 76ನೇ ಗಣರಾಜ್ಯೋತ್ಸವ ದಿನಾಚರಣೆ ಅಂಗವಾಗಿ ಭಾರತೀಯ ಸೇನೆಯ ಗೂರ್ಖಾ ರೆಜಿಮೆಂಟ್‌ನ ಯೋಧರು ಪಥಸಂಚಲನ ನಡೆಸಿದರು ಪ್ರಜಾವಾಣಿ ಚಿತ್ರಗಳು: ಎಂ.ಎಸ್‌ ಮಂಜುನಾಥ್

ಬೆರಗು ಮೂಡಿಸಿದ ಸಾಹಸ ಕಲೆಗಳು, ಮೆರುಗು ನೀಡಿದ ಏಕತೆಯ ನೃತ್ಯ ರೂಪಕ

ಮೈನವಿರೇಳಿಸಿದ ‘ಅಪಹೃತರ ರಕ್ಷಣೆ’ಯ ಅಣಕು ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಯೋತ್ಪಾದಕರಿಂದ ಅಪಹರಣಗೊಂಡ ಬಸ್ಸಿನ ಪ್ರಯಾಣಿಕರನ್ನು ಪೊಲೀಸ್ ಗರುಡ ಪಡೆ ರಕ್ಷಣೆ ಮಾಡಿದ ಪರಿ, ಆ ಸಂದರ್ಭದಲ್ಲಿ ಶ್ವಾನದಳ ಪ್ರದರ್ಶಿಸಿದ ಸಾಹಸ ನೋಡುಗರನ್ನು ರೋಮಾಂಚನಗೊಳಿಸಿತು.

ಗಣರಾಜ್ಯೋತ್ಸವದ ಅಂಗವಾಗಿ ಫೀಲ್ಡ್ ಮಾರ್ಷಲ್ ಮಾಣೆಕ್‌ಷಾ ಪರೇಡ್ ಮೈದಾನದಲ್ಲಿ ಭಾನುವಾರ ಭದ್ರತಾ ಭಯೋತ್ಪಾದಕ ನಿಗ್ರಹ ಕೇಂದ್ರದ ಪೊಲೀಸ್ ಇನ್‌ಸ್ಪೆಕ್ಟರ್ ಸಂತೋಷ್ ನೇತೃತ್ವದಲ್ಲಿ ಮೈನವಿರೇಳಿಸುವಂತೆ ಅಣಕು ಪ್ರದರ್ಶನ ನಡೆಯಿತು.

ಬಸ್ ಅನ್ನು ಅಪಹರಣ ಮಾಡುವುದು, ಅದರ ರಕ್ಷಣೆಗೆ ಗರುಡ ಪಡೆ ಧಾವಿಸುವುದು, ಪಡೆಯ ವಿವಿಧ ವಾಹನಗಳು ಬಸ್ ಅನ್ನು ಸುತ್ತುವರಿದು ನಿಲ್ಲುವಂತೆ ಮಾಡುವುದು, ಶ್ವಾನದಳದ ಅರ್ಜುನ (ಜರ್ಮನ್ ಷೆಫರ್ಡ್ ತಳಿಯ ನಾಯಿ) ಹಾರಿ ಬಸ್‌ನ ಕಿಟಕಿಯ ಮೂಲಕ ಒಳನುಗ್ಗಿ ಭಯೋತ್ಪಾದಕನನ್ನು ಹಿಡಿಯುವುದು, ಬಾಂಬ್ ನಿಷ್ಕ್ರಿಯಗೊಳಿಸುವುದು ಎಲ್ಲವೂ ಎವೆಯಿಕ್ಕದೇ ನೋಡುವಂತೆ ಮಾಡಿದವು.

ಲ್ಯಾನ್ಸ್ ಹವಲ್ದಾರ್ ತೇಜಿಂದರ್ ಸಿಂಗ್ ನೇತೃತ್ವದ 13 ಸೈನಿಕರು ಪಂಜಾಬ್ ಪರಂಪರೆ ಬಿಂಬಿಸುವ ಭಾಂಗ್ಡಾ ನೃತ್ಯ ಮಾಡಿ ಗಮನ ಸೆಳೆದರು. ನಾಯಕ್ ಅರ್ಷ್‌ಪ್ರೀತ್ ಸಿಂಗ್ ನಾಯಕತ್ವದಲ್ಲಿ ನಡೆದ ‘ಗಟ್ಕಾ’ ಪ್ರದರ್ಶನವು ಪ್ರಾಚೀನ ಸಿಖ್ ಯುದ್ಧಕಲೆಯನ್ನು ನೆನಪಿಸಿತು. ಮೈಸೂರಿನ ಕೆಎಸ್‌ಆರ್‌ಪಿಯ ಶೈಲೇಂದ್ರ ಮತ್ತು ತಂಡದವರು ಕುದುರೆ ಏರಿ ವಿವಿಧ ಕಸರತ್ತು ನಡೆಸಿದರು. ಅತಿ ವೇಗದಲ್ಲಿ ಸಾಗುವಾಗ ನಿಗದಿತ ಪ್ರದೇಶಕ್ಕೆ ಈಟಿಯಲ್ಲಿ ಇರಿಯುವ ‘ಟೆಂಟ್ ಪೆಗ್ಗಿಂಗ್’ ಮನಮೋಹಕವಾಗಿತ್ತು.

4/8 ಗೂರ್ಖಾ ರೈಫಲ್ಸ್ ಯೋಧರು ನಾಯಕ್ ಸೋವಿತ್ ತಾಪಾ ಅವರ ನೇತೃತ್ವದಲ್ಲಿ ಪ್ರದರ್ಶಿಸಿದ ಗೂರ್ಖಾಗಳ ಶೌರ್ಯ ಬಿಂಬಿಸುವ ‘ಖುಕ್ರಿ’ ನೃತ್ಯ ಜನರನ್ನು ಬೆರಗುಗೊಳಿಸಿತು.

ಭಾರತದ ಏಕತೆ ಸಾರುವ ‘ನಾವೆಲ್ಲರೂ ಒಂದೇ ನಾವು ಭಾರತೀಯರು’ ನೃತ್ಯವನ್ನು ಬೆಂಗಳೂರಿನ ಅಗರದ ಕರ್ನಾಟಕ ಪಬ್ಲಿಕ್ ಶಾಲೆಯ ಸುಮಾರು 800 ಮಕ್ಕಳು ಪ್ರದರ್ಶಿಸಿದರು. ಅಂಬೇಡ್ಕರ್ ಅನುಭವಿಸಿದ ಅವಮಾನ, ಸವಾಲುಗಳನ್ನು, ಅವರು ಮಾಡಿದ ಹೋರಾಟವನ್ನು ಬಿಂಬಿಸುವ ‘ಅರಿವೇ ಅಂಬೇಡ್ಕರ್’ ನೃತ್ಯ ರೂಪಕವನ್ನು ಹೇರೋಹಳ್ಳಿಯ ಬಿಬಿಎಂಪಿ ಸಂಯುಕ್ತ ಪದವಿಪೂರ್ವ ಕಾಲೇಜಿನ 650 ಮಕ್ಕಳು ಪ್ರದರ್ಶಿಸಿ ಅಂಬೇಡ್ಕರ್ ಬಗ್ಗೆ ಅರಿವು ಮೂಡಿಸಿದರು.

ಆರಂಭದಲ್ಲಿ ಕಿಕ್ಕೇರಿ ಕೃಷ್ಣಮೂರ್ತಿ ಮತ್ತು ತಂಡದವರು ನಾಡಗೀತೆ ಮತ್ತು ರೈತಗೀತೆ ಹಾಡಿದರು.



ಬಸ್ ಪ್ರಯಾಣಿಕರನ್ನು ರಕ್ಷಿಸುವ ಅಣಕು ಪ್ರದರ್ಶನ ಗರುಡ ಪಡೆಯ ಸಿಬ್ಬಂದಿಯಿಂದ ನಡೆಯಿತು

ಗುಂಡು ನಿರೋಧಕ ಪರದೆ ತೆರವುಗೊಳಿಸಿದ ರಾಜ್ಯಪಾಲರು

ಸಮಾರಂಭದ ವೇದಿಕೆಯ ಪೋಡಿಯಂಗೆ ಅಳವಡಿಸಿದ್ದ ಗುಂಡು ನಿರೋಧಕ ಗಾಜಿನ ಪರದೆಯನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ತೆರವು ಮಾಡಿಸಿದರು.

ಧ್ವಜಾರೋಹಣದ ಬಳಿಕ ಗುಂಡು ನಿರೋಧಕ ಗಾಜಿನ ಪರದೆ ತೆರವುಗೊಳಿಸಲು ಅಧಿಕಾರಿಗಳಿಗೆ ಸೂಚಿಸಿ ತೆರೆದ ವಾಹನದಲ್ಲಿ ಗೌರವ ರಕ್ಷೆ ಸ್ವೀಕರಿಸಲು ತೆರಳಿದರು. ಗೌರವ ರಕ್ಷೆ ಸ್ವೀಕರಿಸಿ ವಾಪಸ್ಸಾಗುವುದರ ಒಳಗೆ ಪರದೆ ತೆರವುಗೊಳಿಸಲಾಯಿತು.



ಹೇರೋಹಳ್ಳಿಯ ಬಿಬಿಎಂಪಿ ಸಂಯುಕ್ತ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ‘ಅರಿವೇ ಅಂಬೇಡ್ಕರ್’ ನೃತ್ಯ ಪ್ರಸ್ತುತಪಡಿಸಿದರು



ವಿದ್ಯಾರ್ಥಿನಿಯರ ವಾದ್ಯತಂಡ ಆಕರ್ಷಕ ಪಥಸಂಚಲನ ನಡೆಸಿತು

ಆಕರ್ಷಕ ಪಥಸಂಚಲನ

ಧ್ವಜಾರೋಹಣದ ನಂತರ ನಡೆದ ಆಕರ್ಷಕ ಪಥಸಂಚಲನ, ಮಿಲಿಟರಿ ಬ್ಯಾಂಡ್ ಹಿಮ್ಮೇಳ ಗಮನ ಸೆಳೆದವು. ರಾಜ್ಯದ ಪೊಲೀಸರ ಜೊತೆಗೆ ಕೇರಳ ಪೊಲೀಸರೂ ಹೆಜ್ಜೆ ಹಾಕಿದರು. ಗೂರ್ಖಾ ರೈಫಲ್ಸ್‌ನವರು ಮೆರುಗು ಹೆಚ್ಚಿಸಿದರು. ಶ್ವಾನದಳದ ಪಥಸಂಚಲನ ಬೆರಗು ಮೂಡಿಸಿತು. ಸ್ಕೌಟ್ಸ್ ಆ್ಯಂಡ್ ಗೈಡ್ಸ್, ಎನ್‌.ಸಿ.ಸಿ, ಸೇವಾದಳ ಹಾಗೂ ವಿವಿಧ ಶಾಲೆಗಳ ವಿದ್ಯಾರ್ಥಿಗಳು ಸೇರಿದಂತೆ ಕವಾಯತು ಮತ್ತು ಬ್ಯಾಂಡ್‌ನ ಒಟ್ಟು 38 ತುಕಡಿಗಳಲ್ಲಿ ಸುಮಾರು 1,150 ಮಂದಿ ಭಾಗವಹಿಸಿ ಕ್ರಮಬದ್ಧವಾಗಿ ಹೆಜ್ಜೆಹಾಕಿದರು.



ಪಂಜಾಬ್‌ನ ಸೇನಾ ತಂಡದ ಯೋಧ ಬೆಂಕಿ ಉಗುಳಿದರು



ಮೈಸೂರು ಕೆಎಸ್‌ಆರ್‌ಪಿ ಮೌಂಟೆಡ್ ಪೊಲೀಸ್ ತಂಡ ‘ಟೆಂಟ್ ಪೆಗ್ಗಿಂಗ್’ಪ್ರದರ್ಶನ ನೀಡಿತು

ಗಣತಂತ್ರ ದಿನದ ಸಂಭ್ರಮ

ನಗರದ ವಿವಿಧ ಶಾಲಾ–ಕಾಲೇಜುಗಳು, ಸರ್ಕಾರಿ ಕಚೇರಿಗಳು, ವಿವಿಧ ಬಡಾವಣೆ ಸೇರಿದಂತೆ ನಗರದ ಹಲವೆಡೆ ಭಾನುವಾರ 76ನೇ ಗಣರಾಜ್ಯೋತ್ಸವವನ್ನು ಸಂಭ್ರಮ, ಸಡಗರದಿಂದ ಆಚರಿಸಲಾಯಿತು. ತ್ರಿವರ್ಣ ಧ್ವಜ ಹಾರಿಸಿ, ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಗಣತಂತ್ರ ದಿವಸದ ಸಂಭ್ರಮವನ್ನು ಹೆಚ್ಚಿಸಲಾಯಿತು. ಶಾಲಾ ಕಾಲೇಜುಗಳಲ್ಲಿ ಪಥ ಸಂಚಲನಗಳೂ ನಡೆದವು.



ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಲಿಂಗರಾಜ ಗಾಂಧಿ ಧ್ವಜಾರೋಹಣ ನೆರವೇರಿಸಿದರು



ಬಸವನಗುಡಿಯ ಎನ್‌ಇಎಸ್ ಸಂಸ್ಥೆ ಆಯೋಜಿಸಿದ್ದ ಗಣರಾಜ್ಯೋತ್ಸವದಲ್ಲಿ ಸಂಸದ ಡಾ. ಸಿ.ಎನ್. ಮಂಜುನಾಥ್ ಅವರನ್ನು ಸನ್ಮಾನಿಸಲಾಯಿತು

ಜ್ಞಾನ ಜ್ಯೋತಿ ಆವರಣ: 'ಸಂವಿಧಾನದ ಮೂಲ ಆಶಯಗಳಿಗೆ ಅನುಗುಣವಾಗಿ ಸರ್ವರಿಗೂ ಸಮಾನ ಗುಣಮಟ್ಟದ ಶಿಕ್ಷಣ ಒದಗಿಸುವ ಗುರಿ ಸಾಧನೆಯ ನಿಟ್ಟಿನಲ್ಲಿ ಹೆಚ್ಚಿನ ಪ್ರಯತ್ನ ಮಾಡಬೇಕಾದ ಅಗತ್ಯವಿದೆ' ಎಂದು ಬೆಂಗಳೂರು ನಗರ ವಿಶ್ವವಿದ್ಯಾಲಯದ (ಬಿಸಿಯು) ಕುಲಪತಿ ಪ್ರೊ.ಲಿಂಗರಾಜ ಗಾಂಧಿ ಪ್ರತಿಪಾದಿಸಿದರು.

ಸೆಂಟ್ರಲ್ ಕಾಲೇಜಿನ 'ಜ್ಞಾನಜ್ಯೋತಿ' ಆವರಣದಲ್ಲಿ ಏರ್ಪಡಿಸಲಾಗಿದ್ದ ಗಣರಾಜ್ಯೋತ್ಸವದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು. ಬಿಸಿಯು ಕುಲಸಚಿವರಾದ ಟಿ.ಜವರೇಗೌಡ, ಸಿ.ಎಸ್. ಆನಂದಕುಮಾರ್, ಹಣಕಾಸು ಅಧಿಕಾರಿ ಎಂ. ವಿಜಯಲಕ್ಷ್ಮಿ, ಪ್ರಾಧ್ಯಾಪಕರಾದ ಹರಿಪ್ರಸಾದ್, ದೇವರಾಜ್, ಜಲಜಾ ಮತ್ತಿತರರು ಹಾಜರಿದ್ದರು.

ಜ್ಞಾನ ಭಾರತಿ ಆವರಣ: 'ಸಂವಿಧಾನ ಕೇವಲ ಸ್ಮರಣೆಯಲ್ಲ; ದೇಶದ ಪುನಶ್ಚೇತನದ ಶಕ್ತಿ, ಪ್ರಜಾಪ್ರಭುತ್ವದ ಆದರ್ಶ, ನ್ಯಾಯಾಂಗ ವ್ಯವಸ್ಥೆಯ ಅಡಿಪಾಯ, ರಾಷ್ಟ್ರದ ಪ್ರಗತಿಯ ಮೂಲವಾಗಿದೆ' ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಎಂ.ಎಸ್. ಜಯಕರ ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ನಡೆದ ಗಣರಾಜ್ಯೋತ್ಸವ ದಿನಾಚರಣೆಯಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು. ಕಾರ್ಯಕ್ರಮದಲ್ಲಿ ಕುಲಸಚಿವರಾದ ಶೇಕ್ ಲತೀಫ್, ಶ್ರೀನಿವಾಸ್ ಸಿ, ವಿತ್ತಾಧಿಕಾರಿ ಸುನೀತಾ, ಸಿಂಡಿಕೇಟ್ ಸದಸ್ಯರು, ವಿಶ್ವವಿದ್ಯಾಲಯದ ಅಧಿಕಾರಿಗಳು, ವಿಭಾಗ ಮುಖ್ಯಸ್ಥರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ನ್ಯಾಷನಲ್ ಕಾಲೇಜು: 'ಅಂಕಪಟ್ಟಿ ಕೇವಲ ಕಾಗದದ ಪ್ರಮಾಣಪತ್ರವಾಗದೇ ಬದುಕಿಗೆ ರಕ್ಷಾ ಕವಚವಾಗಬೇಕು' ಎಂದು ಸಂಸದ ಡಾ.ಸಿ.ಎನ್. ಮಂಜುನಾಥ್ ಅಭಿಪ್ರಾಯಪಟ್ಟರು.

ಬಸವನಗುಡಿ ಎನ್‌ಇಎಸ್ ಸಂಸ್ಥೆ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಆಯೋಜಿಸಿದ್ದ ಗಣರಾಜ್ಯೋತ್ಸವದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. 'ಸಾಕ್ಷರತೆ ಹೆಚ್ಚಾದಷ್ಟು ಸಂಸ್ಕಾರದ ಕೊರತೆ ಕಾಣುತ್ತಿದೆ' ಎಂದು ಆತಂಕ ವ್ಯಕ್ತಪಡಿಸಿದರು.

ಎನ್.ಇ.ಎಸ್ ಸಂಸ್ಥೆಯ ಜಂಟಿ ಕಾರ್ಯದರ್ಶಿ ಇಸ್ತೂರಿ ಸುಧಾಕರ್, ಸಂಸ್ಥೆಯ ಗೌರವ ಕಾರ್ಯದರ್ಶಿ ವಿ.ವೆಂಕಟಶಿವಾರೆಡ್ಡಿ ಮತ್ತಿತರರು ಹಾಜರಿದ್ದರು.

ಬೆಂಗಳೂರು ಜಲಮಂಡಳಿ: ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಚೇರಿ ಆವರಣದಲ್ಲಿ ಆಯೋಜಿಸಿದ್ದ ಗಣರಾಜ್ಯೋತ್ಸವದಲ್ಲಿ ಮಂಡಳಿ ಅಧ್ಯಕ್ಷ ವಿ.ರಾಮ್‌ಪ್ರಸಾತ್ ಮನೋಹರ್ ಅವರು ಧ್ವಜಾರೋಹಣ ನೆರವೇರಿಸಿದರು.

ಮಂಡಳಿ ಕಾರ್ಯದರ್ಶಿ ಮದನ್ ಮೋಹನ್, ಪ್ರಧಾನ ಮುಖ್ಯ ಎಂಜಿನಿಯರ್ ಸುರೇಶ್, ಮುಖ್ಯ ಎಂಜಿನಿಯರ್, ಜಲಮಂಡಳಿ ನೌಕರರ ಸಂಘದ ಅಧ್ಯಕ್ಷ ಬಿ.ಕೆ.ಮರಿಯಪ್ಪ, ಪ್ರಧಾನ ಕಾರ್ಯದರ್ಶಿ ಗೋವಿಂದರಾಜು ಸೇರಿದಂತೆ ಅಧಿಕಾರಿಗಳು ಇದ್ದರು.

ಯಲಹಂಕ: 'ದೇಶದ ಹೊರಗಿನ ಶತ್ರುಗಳನ್ನು ಹಿಮ್ಮೆಟ್ಟಿಸುವ ಶಕ್ತಿ ನಮ್ಮ ಸೈನ್ಯ ಹಾಗೂ ಆಡಳಿತ ವ್ಯವಸ್ಥೆಗೆ ಇದೆ. ಆದರೆ ದೇಶದೊಳಗೆ ಇದ್ದುಕೊಂಡೇ ದ್ರೋಹವೆಸಗುವವರ ಬಗ್ಗೆ ಸದಾ ಎಚ್ಚರಿಕೆ ವಹಿಸಬೇಕಾದ ಅಗತ್ಯವಿದೆ' ಎಂದು ಶಾಸಕ ಎಸ್.ಆರ್.ವಿಶ್ವನಾಥ್ ಹೇಳಿದರು.

ಉಪ ನಗರದ ಹೊಯ್ಸಳ ಕ್ರೀಡಾಂಗಣದಲ್ಲಿ ನಡೆದ ಗಣರಾಜ್ಯೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು. ತಹಶೀಲ್ದಾರ್ ಶ್ರೇಯಸ್.ಜಿ.ಎಸ್ ಧ್ವಜಾರೋಹಣ ನೆರವೇರಿಸಿದರು.



ನೈರುತ್ಯ ರೈಲ್ವೆ: ನಗರದ ಮಹಾತ್ಮ ಗಾಂಧಿ ರೈಲ್ವೆ ಕಾಲೊನಿಯ ಮೈದಾನದಲ್ಲಿ ನೈರುತ್ಯ ರೈಲ್ವೆ ವಿಭಾಗ ಆಯೋಜಿಸಿದ್ದ ಗಣರಾಜ್ಯೋತ್ಸವದಲ್ಲಿ ಬೆಂಗಳೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಅಮಿತೇಶ್ ಕುಮಾರ್ ಸಿನ್ಹಾ ಧ್ವಜಾರೋಹಣ ಮಾಡಿ, ರೈಲ್ವೆ ಪೊಲೀಸರಿಂದ ಗೌರವ ವಂದನೆ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ಸುರಕ್ಷತೆಯ ಉತ್ಕೃಷ್ಟತೆಗಾಗಿ 66 ಉದ್ಯೋಗಿಗಳಿಗೆ ಸುರಕ್ಷತಾ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು. ಪ್ರಯಾಣಿಕರ ಸುರಕ್ಷತೆಗೆ ಆದ್ಯತೆ ನೀಡುವ ಜೊತೆಗೆ, ಜನರ ಜೀವ ಉಳಿಸಲು ಕೊಡುಗೆ ನೀಡಿದ ಐವರಿಗೆ 'ರಕ್ಷಕ್ ಪ್ರಶಸ್ತಿ' ನೀಡಲಾಯಿತು.

ಬೆಂಗಳೂರು ವಿಭಾಗದ ನೈರುತ್ಯ ರೈಲ್ವೆ ಮಹಿಳಾ ಕ್ಷೇಮಾಭಿವೃದ್ಧಿ ಸಂಘಟನೆಯು ಬೆಂಗಳೂರು ರೈಲ್ವೆ ಆಸ್ಪತ್ರೆಗೆ 54 ಇಂಚಿನ ಟಿ.ವಿ.ಯನ್ನು ಕೊಡುಗೆಯಾಗಿ ನೀಡಿತು. ರೋಗಿಗಳಿಗೆ ಪೌಷ್ಟಿಕ ಪಾನೀಯ ವಿತರಿಸಲಾಯಿತು.



ಬಿಬಿಎಂಪಿ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಗಣರಾಜ್ಯೋತ್ಸವದ ಅಂಗವಾಗಿ ಆಡಳಿತಗಾರ ಎಸ್.ಆರ್ ಉಮಾಶಂಕರ್, ಆಯುಕ್ತ ತುಷಾರ್ ಗಿರಿನಾಥ್ ಧ್ವಜಾರೋಹಣ ನೆರವೇರಿಸಿದರು.

ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಹರೀಶ್ ಕುಮಾರ್, ಅವಿನಾಶ್ ಮೆನನ್ ರಾಜೇಂದ್ರನ್, ಸುರಳ್ಕರ್ ವಿಕಾಸ್ ಕಿಶೋರ್, ಪ್ರೀತಿ ಗೆಹ್ಲೋಟ್, ವಲಯ ಆಯುಕ್ತರಾದ ರಮ್ಯಾ, ಉಪ ಆಯುಕ್ತರಾದ ಮಂಜುನಾಥ ಸ್ವಾಮಿ, ಜಂಟಿ ಆಯುಕ್ತರಾದ ಪ್ರತಿಭಾ, ಮುಖ್ಯ ಎಂಜಿನಿಯರ್ ಸೇರಿದಂತೆ ಅಧಿಕಾರಿ ವರ್ಗದವರು ಉಪಸ್ಥಿತರಿದ್ದರು.

ಕಲ್ಲಂಗಡಿಗಳಲ್ಲಿ ರಾಷ್ಟ್ರಗೀತೆಯ ಪದಗಳು



ಕಲ್ಲಂಗಡಿ ಹಣ್ಣುಗಳಲ್ಲಿ ಕೆತ್ತಿರುವ ರಾಷ್ಟ್ರಗೀತೆಯ ಪದಗಳು

ಬೆಂಗಳೂರು: ನಗರದ ಚೆನ್ನೈಸ್ ಅಮಿರ್ತಾ ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್ ವಿದ್ಯಾರ್ಥಿಗಳು 19 ನಿಮಿಷ 17 ಸೆಕೆಂಡ್‌ನಲ್ಲಿ 55 ಕಲ್ಲಂಗಡಿ ಹಣ್ಣುಗಳಲ್ಲಿ ರಾಷ್ಟ್ರಗೀತೆಯ ಪದಗಳನ್ನು ಕೆತ್ತಿ ದಾಖಲೆ ನಿರ್ಮಿಸಿದ್ದಾರೆ.

ರಾಜರಾಜೇಶ್ವರಿ ನಗರದಲ್ಲಿರುವ ಈ ಸಂಸ್ಥೆಯ ವಿದ್ಯಾರ್ಥಿಗಳು ಭಾನುವಾರ ಗಣರಾಜ್ಯೋತ್ಸವದ ಅಂಗವಾಗಿ ಇಂಥದ್ದೊಂದು ದಾಖಲೆ ನಿರ್ಮಿಸಿದ್ದಾರೆ. 55 ಕಲ್ಲಂಗಡಿ ಹಣ್ಣುಗಳಲ್ಲಿ ಪ್ರತಿ ಹಣ್ಣಿನ ಮೇಲೆ ರಾಷ್ಟ್ರಗೀತೆಯ ಪದಗಳನ್ನು ಕೆತ್ತಿದ್ದಾರೆ. ಇದೇ ಸಂದರ್ಭದಲ್ಲಿ ವಿದ್ಯಾರ್ಥಿನಿ ಪೂಜಾ ನಾಯ್ಕ್ ಅವರು ಒಂದು ಗಂಟೆಯಲ್ಲಿ 76 ಕಲ್ಲಂಗಡಿ ಹಣ್ಣುಗಳ ಮೇಲೆ ಹೂವಿನ ವಿನ್ಯಾಸ ಕೆತ್ತಿದ್ದಾರೆ. ಈ ಎರಡೂ ದಾಖಲೆಗಳು 'ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್'ಗೆ ಸೇರ್ಪಡೆಗೊಂಡಿವೆ.

ಕಾರ್ಯಕ್ರಮದಲ್ಲಿ ನಿವೃತ್ತ ಐಪಿಎಸ್ ಅಧಿಕಾರಿ ಡಿ.ಎನ್. ಮುನಿಕೃಷ್ಣ ಹಾಗೂ ಐ.ಬಿ.ಆರ್‌.ನ ಅಡ್ಜುಡಿಕೇಟರ್ ಹರೀಶ್ ಆರ್. ಮುಖ್ಯ ಅತಿಥಿಯಾಗಿದ್ದರು. ಸಂಸ್ಥೆಯ ಅಧ್ಯಕ್ಷರಾದ ಆರ್. ಭೂಮಿನಾಥನ್ ಸಮಾರಂಭದಲ್ಲಿ ಉಪಸ್ಥಿತರಿದ್ದರು.

'ಸಂಗೊಳ್ಳಿ ರಾಯಣ್ಣನ ಬದುಕು ಸ್ಫೂರ್ತಿದಾಯಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ ಬದುಕು ಸ್ಫೂರ್ತಿದಾಯಕವಾಗಿದ್ದು, ಅವರ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಗೌರವ ಸಲ್ಲಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ 194ನೇ ಸ್ಮರಣೋತ್ಸವ ಅಂಗವಾಗಿ ನಗರದ ರೈಲ್ವೆ ನಿಲ್ದಾಣದ ಮುಂಭಾಗದಲ್ಲಿರುವ ರಾಯಣ್ಣನ ಪುತ್ಥಳಿಗೆ ಮಾಲಾರ್ಪಣೆ ಮಾಡಿದ ನಂತರ ಅವರು ಮಾತನಾಡಿದರು.

'ಕಿತ್ತೂರು ರಾಣಿ ಚನ್ನಮ್ಮನವರ ಬಲಗೈ ಬಂಟನಾಗಿ ಹೋರಾಡಿದ ರಾಯಣ್ಣನವರು ಅಪ್ರತಿಮ ದೇಶಭಕ್ತ. ಬ್ರಿಟಿಷರ ವಿರುದ್ಧ ಸೆಣಸಲು ಗೆರಿಲ್ಲಾ ಯುದ್ಧ ತಂತ್ರಗಾರಿಕೆಯನ್ನು ಬಳಸಿದ್ದರು. ಶ್ರೇಷ್ಠ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಅವರು ಕನ್ನಡ ನಾಡು–ನುಡಿ, ನೆಲ, ಜಲಕ್ಕೆ ಅತೀವ ಗೌರವ ನೀಡುತ್ತಿದ್ದರು' ಎಂದರು.

'ನಾಯಕರಿಗೆ ಕೊರತೆ ಇಲ್ಲ'

ಪ್ರಜಾವಾಣಿ ವಾರ್ತೆ

ರಾಮನಗರ: 'ನಮ್ಮ ಪಕ್ಷದಲ್ಲಿ ನಾಯಕರಿಗೆ ಕೊರತೆ ಇಲ್ಲ. ಪಕ್ಷಕ್ಕೆ ಬನ್ನಿ ಎಂದು ನಾವು ಯಾರನ್ನೂ ಕರೆಯುವುದಿಲ್ಲ. ಅವರೇ ಬರುವುದಾದರೆ ಬರಬಹುದು. ಬಿಜೆಪಿ ನಾಯಕ ಶ್ರೀರಾಮುಲು ಸಾಕಷ್ಟು ವರ್ಷಗಳಿಂದ ಕಾಂಗ್ರೆಸ್ ವಿರೋಧಿಸಿಕೊಂಡು ಬಂದವರು. ಇದೀಗ, ಜನಾರ್ದನ ರೆಡ್ಡಿ ಮತ್ತು ಅವರ ಮಧ್ಯೆ ಕೆಸರೆರಚಾಟ ನಡೆಯುತ್ತಿದೆ. ಅದಕ್ಕೂ ನಮಗೂ ಸಂಬಂಧವಿಲ್ಲ' ಎಂದು ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾ ರೆಡ್ಡಿ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಸಚಿವ ಸಂಪುಟ ಪುನರ್‌ರಚನೆಯಾದರೆ ಎಲ್ಲರಿಗೂ ಸಚಿವ ಸ್ಥಾನ ಸಿಗುವುದಿಲ್ಲ. ಹಾಗಂತ, ಸಚಿವ ಸ್ಥಾನದ ಆಸೆ ಇಟ್ಟುಕೊಳ್ಳುವುದರಲ್ಲಿ ಯಾವುದೇ ತಪ್ಪಿಲ್ಲ' ಎಂದರು.

'ಶಕ್ತಿ ಯೋಜನೆಯಿಂದ ಸಾರಿಗೆ ನಿಗಮಗಳಿಗೆ ಯಾವುದೇ ನಷ್ಟವಾಗಿಲ್ಲ. ಇಲಾಖೆಗೆ ಬರಬೇಕಾದ ಹಣ ಬಂದಿದೆ. ಬಿಜೆಪಿ ಸರ್ಕಾರವಿದ್ದಾಗ ಕೆಎಸ್‌ಆರ್‌ಟಿಸಿಯಲ್ಲಿ ₹5,900 ಕೋಟಿ ಸಾಲ ಇತ್ತು. ಅದೀಗ ಕಡಿಮೆಯಾಗುತ್ತಿದೆ' ಎಂದರು.

ಚಿತ್ರಾವಳಿ

1


2


3


1. ದಿ ಬೆಂಗಳೂರು ಸಿಟಿ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಆಡಳಿತ ಮಂಡಳಿಗೆ ಮುಂದಿನ 5 ವರ್ಷಗಳಿಗೆ ಅಧ್ಯಕ್ಷರಾಗಿ ಆವಲಹಳ್ಳಿ ಚಂದ್ರಪ್ಪ ಆರ್., ಉಪಾಧ್ಯಕ್ಷರಾಗಿ ದೇವರಾಜ್ ಟಿ.ಎಂ. ಅವಿರೋಧವಾಗಿ ಆಯ್ಕೆಯಾದರು.
2. ಮೈಸೂರು ರಸ್ತೆಯ ಬಾಪೂಜಿನಗರದ ಬೀರೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾನುವಾರ ಲೋಕಾರ್ಪಣೆಗೊಳಿಸಿದರು. ವಿಜಯನಗರ ಹಾಗೂ ಗೋವಿಂದರಾಜನಗರ ಶಾಸಕರಾದ ಕೃಷ್ಣಪ್ಪ, ಪ್ರಿಯಕೃಷ್ಣ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಎಚ್‌.ಎಂ. ರೇವಣ್ಣ ಉಪಸ್ಥಿತರಿದ್ದರು
3. ಎನ್‌ಆರ್‌ ಕಾಲೊನಿಯ ಎ.ಪಿ.ಎಸ್‌ ಮೈದಾನದಲ್ಲಿ ಭಾನುವಾರ ನಡೆದ ಆಚಾರ್ಯ ಪಾಠಶಾಲಾ ಎಜುಕೇಷನಲ್ ಟ್ರಸ್ಟ್ ಹಳೆ ವಿದ್ಯಾರ್ಥಿಗಳ ಸಮ್ಮಿಲನ ಸಭೆಯಲ್ಲಿ ಭಾಗವಹಿಸಿದ್ದ ಜನಸ್ತೋಮ

ಮಾನಸಿಕ–ದೈಹಿಕವಾಗಿ ಹಲವು ಬಾರಿ ಕಿರುಕುಳ ನೀಡಿದ್ದಾರೆ ಎಂದು ಆರೋಪ ಮಾಡಿದ ಪತಿ

ನಟಿ ಶಶಿಕಲಾ ವಿರುದ್ಧ ಎಫ್ಐಆರ್

ಪ್ರಜಾವಾಣಿ ವಾರ್ತೆ

ಆರೋಪಗಳು

- ಹೆದರಿಸಿ ಮದುವೆಯಾಗಿದ್ದ ನಟಿ
- ಹಿಂದೊಮ್ಮೆ ಖಾರದ ಪುಡಿ ಎರಚಿ ಹಲ್ಲೆ
- ಸಿನಿಬಜ್ ಯೂಟ್ಯೂಬ್ ಚಾನೆಲ್‌ನ ಅರುಣ್ ಕುಮಾರ್ ವಿರುದ್ಧ ಪ್ರಕರಣ

ಅಪರಾಧ ಸುದ್ದಿ

ಬೆಂಗಳೂರು: ಪತಿಗೆ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡಿದ ಆರೋಪದ ಮೇಲೆ ಕನ್ನಡ ಚಿತ್ರರಂಗದ ಪೋಷಕ ನಟಿ ಶಶಿಕಲಾ ಸೇರಿದಂತೆ ಇಬ್ಬರ ವಿರುದ್ಧ ವಿದ್ಯಾರಣ್ಯಪುರ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ.

ಪತಿ ಹಾಗೂ ನಿರ್ದೇಶಕ ಟಿ.ಜಿ. ಹರ್ಷವರ್ಧನ್ ನೀಡಿರುವ ದೂರನ್ನು ಆಧರಿಸಿ ಶಶಿಕಲಾ ಹಾಗೂ 'ಸಿನಿ ಬಜ್' ಕನ್ನಡ ಯೂಟ್ಯೂಬ್ ಚಾನೆಲ್ ನಿರ್ವಹಿಸುತ್ತಿರುವ ಅರುಣ್ ಕುಮಾರ್ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಆರೋಪಿಗಳಿಬ್ಬರ ವಿಚಾರಣೆ ನಡೆಸಲು ನಿರ್ಧರಿಸಿದ್ದಾರೆ.

'ಸಿನಿಮಾ ನಿರ್ದೇಶಕನ ಜತೆಗೆ ಕ್ಯಾಬ್ ಚಾಲಕನಾಗಿಯೂ ಕೆಲಸ ಮಾಡುತ್ತಿರುವ ನನಗೆ 2021ರಲ್ಲಿ ಸಿನಿಮಾ ಚಿತ್ರೀಕರಣದ ವೇಳೆ ಶಶಿಕಲಾ ಅವರ ಪರಿಚಯವಾಯಿತು. ತನ್ನೊಂದಿಗೆ ಸಂಬಂಧ ಹೊಂದಿದರೆ ಸಿನಿಮಾದಲ್ಲಿ ಹಣ ಹೂಡಿಕೆ ಮಾಡುವುದಾಗಿ ನಂಬಿಸಿದ್ದರು. ಸಿನಿಮಾ ನಿರ್ಮಾಣ ಮಾಡುತ್ತಾರೆಂಬ ಆಸೆಯಿಂದ ಒಪ್ಪಿಕೊಂಡೆ. ಅವರನ್ನು ಮದುವೆಯಾಗಲು ಆಗುವುದಿಲ್ಲ ಎಂದು ಮೊದಲೇ ಹೇಳಿದ್ದೆ. ಅದಕ್ಕೆ ಅವರು ಒಪ್ಪಿದ್ದರು. ಕೆಲವು ದಿನಗಳ ಬಳಿಕ ಮದುವೆ ಆಗುವಂತೆ ಬಲವಂತ ಮಾಡಿದರು. ನಮ್ಮಿಬ್ಬರ ನಡುವಿನ ಮೊಬೈಲ್ ಕರೆಗಳ ಸಂಭಾಷಣೆಗಳ ರೆಕಾರ್ಡಿಂಗ್ ಇಟ್ಟುಕೊಂಡು ಬೆದರಿಸಿದ್ದರು' ಎಂದು ದೂರಿನಲ್ಲಿ ಹರ್ಷವರ್ಧನ್ ಆರೋಪಿಸಿದ್ದಾರೆ.

'ನಾನು ಮದುವೆಗೆ ಒಪ್ಪದಿದ್ದಾಗ ನಾಗರಬಾವಿಯಲ್ಲಿರುವ ಕಚೇರಿಗೆ ಬಂದು ಖಾರದ ಪುಡಿ ಎರಚಿ ಹಲ್ಲೆ ಮಾಡಿದ್ದರು. ಈ ಬಗ್ಗೆ ಅನ್ನಪೂರ್ಣೇಶ್ವರಿನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದೆ. ಬಳಿಕ ಇಬ್ಬರಿಗೂ ಪೊಲೀಸರು ಬುದ್ಧಿವಾದ ಹೇಳಿ ಕಳಿಸಿದ್ದರು. 2022ರಲ್ಲಿ ಶಶಿಕಲಾ ದೂರಿನ ಮೇರೆಗೆ ಅನ್ನಪೂರ್ಣೇಶ್ವರಿ ನಗರ ಠಾಣೆ ಪೊಲೀಸರು, ನನ್ನನ್ನು ಬಂಧಿಸಿದ್ದರು. ಜೈಲಿನಿಂದ ಹೊರಬಂದ ಬಳಿಕವೂ ನನಗೆ ಸಿನಿಮಾ ನಿರ್ದೇಶನ ಮಾಡಲು ಬಿಡುವುದಿಲ್ಲ ಎಂದು ಶಶಿಕಲಾ ಬೆದರಿಸಿದ್ದರು' ಎಂದು ದೂರಿನಲ್ಲಿ ವಿವರಿಸಲಾಗಿದೆ.

'ವೃತ್ತಿ ಜೀವನ ಹಾಳಾಗುವುದು ಬೇಡ, ಆಕೆಯನ್ನು ಮದುವೆಯಾಗು' ಎಂದು ನಿರ್ಮಾಪಕರು ನೀಡಿದ್ದ ಸಲಹೆ ಮೇರೆಗೆ 2022ರ ಮಾರ್ಚ್‌ನಲ್ಲಿ ಶಶಿಕಲಾ ಅವರನ್ನು ಮದುವೆಯಾದೆ. ಮದುವೆಯಾದ ಕೆಲ ದಿನಗಳ ನಂತರ ನಿರ್ಮಾಪಕರು, ನಿರ್ದೇಶಕರು ಹಾಗೂ ಕಲಾವಿದರು ಮನೆಗೆ ಬಂದು ಹೋಗಲಾರಂಭಿಸಿದ್ದರು. ಅದನ್ನು ಪ್ರಶ್ನಿಸಿದಾಗ ನನ್ನನ್ನು ಮನೆಯಿಂದ ಹೊರಹಾಕುತ್ತಿದ್ದರು. ಒಂದೆರಡು ಗಂಟೆಗಳ ಬಳಿಕ ತಾವೇ ಮನೆಯೊಳಗೆ ಸೇರಿಸುತ್ತಿದ್ದರು' ಎಂದು ಹರ್ಷವರ್ಧನ್ ಆರೋಪಿಸಿದ್ದಾರೆ.

'ಈ ನಡುವೆ ಗಂಗೊಂಡನಹಳ್ಳಿಯಲ್ಲಿ ಶಶಿಕಲಾ ಅನಾಥಾಶ್ರಮ ಆರಂಭಿಸಿದ್ದರು. ಯಾಕೆ ಎಂದು ಪ್ರಶ್ನಿಸಿದಾಗ, 'ಕಪ್ಪು ಹಣವನ್ನು ಬದಲಾಯಿಸುವ ಅವಕಾಶ ಸಿಗುತ್ತದೆ' ಎಂದಿದ್ದರು. 2024ರ ಆಗಸ್ಟ್‌ನಲ್ಲಿ ನನ್ನನ್ನು ಮನೆಯಿಂದ ಹೊರಹಾಕಿರುವ ಶಶಿಕಲಾ, ಯೂಟ್ಯೂಬ್ ಚಾನೆಲ್ ನಿರ್ವಹಿಸುತ್ತಿರುವವರ ಜತೆ ಸೇರಿ ನನ್ನ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆ. ಅಪಪ್ರಚಾರ ಮಾಡುವುದನ್ನು ನಿಲ್ಲಿಸಲು ಲಕ್ಷಾಂತರ ರೂಪಾಯಿ ಹಣಕ್ಕೆ ಬೇಡಿಕೆ ಇರಿಸಿದ್ದಾರೆ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ದೇಹದ ಮೇಲೆ ಗಾಯ, ಗರ್ಭಪಾತ

ಬಾಂಗ್ಲಾ ಮಹಿಳೆ ಕೊಲೆ: ಮಾದರಿ ಎಫ್‌ಎಸ್‌ಎಲ್‌ಗೆ ರವಾನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮಮೂರ್ತಿ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಕಲ್ಕೆರೆ ಬಳಿಯ ನಿರ್ಜನ ಪ್ರದೇಶದಲ್ಲಿ ಕೊಲೆಯಾಗಿರುವ ಬಾಂಗ್ಲಾದೇಶದ 28 ವರ್ಷದ ಮಹಿಳೆಯ ದೇಹದ ಮೇಲೆ ಗಾಯಗಳ ಗುರುತುಗಳು ಕಂಡುಬಂದಿದ್ದು, ಗರ್ಭಪಾತವಾಗಿತ್ತು ಎಂಬುದು ಮರಣೋತ್ತರ ಪರೀಕ್ಷೆಯಲ್ಲಿ ಗೊತ್ತಾಗಿದೆ.

ಕಲ್ಕೆರೆ ಕೆರೆ ಬಳಿಯ ನಿರ್ಜನ ಪ್ರದೇಶದಲ್ಲಿ ಶುಕ್ರವಾರ ಸಂತ್ರಸ್ತೆಯ ಶವ ನಗ್ನಾವಸ್ಥೆಯಲ್ಲಿ ಪತ್ತೆಯಾಗಿತ್ತು. ಮಹಿಳೆಯ ಪತಿ ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ವಿವಿಧ ಆಯಾಮಗಳಲ್ಲಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

'ಪ್ರಕರಣ ಸಂಬಂಧ ಪತಿ, ಸಹೋದರ, ಸಂಬಂಧಿಕರು ಹಾಗೂ ಕೃತ್ಯ ನಡೆದ ಸ್ಥಳದ ಸುತ್ತಮುತ್ತಲ ಪ್ರದೇಶದಲ್ಲಿರುವ ಗ್ಯಾರೇಜ್, ಗಾರ್ಮೆಂಟ್ಸ್‌ಗಳಲ್ಲಿ ಕೆಲಸ ಮಾಡುತ್ತಿರುವವರ ವಿಚಾರಣೆ ಮಾಡಲಾಗಿದೆ. ಈವರೆಗೂ 25 ಜನರ ವಿಚಾರಣೆ ಮಾಡಿ, ಮಾಹಿತಿ ಕಲೆಹಾಕಲಾಗಿದೆ. ಮಹಿಳೆಯ ಮೊಬೈಲ್ ಕರೆಗಳ ವಿವರ (ಸಿಡಿಆರ್) ಪರಿಶೀಲನೆ ನಡೆಯುತ್ತಿದೆ. ಕಡೆಯ ಬಾರಿಗೆ ಆಕೆಗೆ ಯಾರು ಕರೆ ಮಾಡಿದ್ದರು? ಎಲ್ಲಿಂದ ಕರೆ ಬಂದಿದೆ? ಮತ್ತು ಅವರೊಂದಿಗೆ ಯಾರು ಸಂಪರ್ಕದಲ್ಲಿ ಇದ್ದರು? ಎಂಬದುನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದರು.

'ಮಹಿಳೆಯ ದೇಹದ ಮೇಲೆ ಗಾಯದ ಗುರುತುಗಳು, ಗುಪ್ತಾಂಗದಲ್ಲಿ ರಕ್ತಸ್ರಾವ ಆಗಿರುವುದು ಮತ್ತು ಕೆಲ ದಿನಗಳ ಹಿಂದೆ ಆಕೆಗೆ ಗರ್ಭಪಾತವಾಗಿರುವ ಬಗ್ಗೆ ಮರಣೋತ್ತರ ಪರೀಕ್ಷಾ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಕೊಲೆಗೆ ಮುನ್ನ ಆಕೆಯ ಮೇಲೆ ದುಷ್ಕರ್ಮಿಗಳು ಹಲ್ಲೆ ನಡೆಸಿದ್ದಾರೆ. ಮರಣೋತ್ತರ ಪರೀಕ್ಷೆ ವೇಳೆ ಸಂಗ್ರಹಿಸಿದ್ದ ಮಾದರಿಯನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ವರದಿ ಬಂದ ಬಳಿಕ ಅತ್ಯಾಚಾರ ನಡೆದಿದೆಯೋ ಇಲ್ಲವೋ ಎಂಬುದು ಗೊತ್ತಾಗಲಿದೆ' ಎಂದು ಹೇಳಿದರು.

'ದುಷ್ಕರ್ಮಿಗಳ ಪತ್ತೆಗೆ ಮೂರು ತಂಡ ರಚಿಸಿ, ಒಂದೊಂದು ತಂಡಕ್ಕೂ ಪ್ರತ್ಯೇಕ ಕೆಲಸ ವಹಿಸಲಾಗಿದೆ. ಒಂದು ತಂಡ ಘಟನಾ ಸ್ಥಳದ ಸುತ್ತಮುತ್ತಲ ಸಿ.ಸಿ. ಟಿ.ವಿ. ಕ್ಯಾಮೆರಾ ದೃಶ್ಯಾವಳಿ ಪರಿಶೀಲನೆ ನಡೆಸುತ್ತಿದೆ. ಮತ್ತೊಂದು ತಂಡ ಮೊಬೈಲ್ ಕರೆಗಳ ವಿವರ (ಸಿಡಿಆರ್) ಸಂಗ್ರಹಿಸಿ ವಿಶ್ಲೇಷಣೆಯಲ್ಲಿ ತೊಡಗಿದೆ. ಮೂರನೇ ತಂಡವು ಮೃತ ಮಹಿಳೆಯ ಕುಟುಂಬದ ಸದಸ್ಯರು, ಪರಿಚಿತರ, ಸಂಬಂಧಿಕರ ಮಾಹಿತಿ ಸಂಗ್ರಹಿಸಿ ವಿಚಾರಣೆ ನಡೆಸುತ್ತಿದೆ' ಎಂದು ವಿವರಿಸಿದರು.

ಕೊತ್ತನೂರು ಬಳಿ ಬಾಡಿಗೆ ಮನೆಯೊಂದರಲ್ಲಿ ಪತಿ ಹಾಗೂ ಸಹೋದರನ ಜತೆಗೆ ವಾಸವಿದ್ದ ಮಹಿಳೆ, ಕಲ್ಕೆರೆಯ ಅಪಾರ್ಟ್‌ಮೆಂಟ್‌ವೊಂದರಲ್ಲಿ ಮನೆಗೆಲಸ ಮಾಡುತ್ತಿದ್ದರು. ಎಂದಿನಂತೆ ಗುರುವಾರ ಸಹ ಕೆಲಸಕ್ಕೆ ತೆರಳಿದ್ದರು. ರಾತ್ರಿ ವಾಪಸ್ ಬಂದಿರಲಿಲ್ಲ.

ಸುಟ್ಟ ಗಾಯಗಳಿಂದ ನರಳುತ್ತಿದ್ದ ಬಾಲಕನ ರಕ್ಷಿಸಿದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಟ್ಟ ಗಾಯಗಳಿಂದ ನರಳುತ್ತಿದ್ದ ಐದು ವರ್ಷದ ಬಾಲಕನನ್ನು ಬಾಗಲಗುಂಟೆ ಠಾಣೆ ಪೊಲೀಸರು ರಕ್ಷಿಸಿ, ಆಸ್ಪತ್ರೆಗೆ ದಾಖಲಿಸಿದ್ದಾರೆ.

ದಾಸರಹಳ್ಳಿಯ ಮಲ್ಲಸಂದ್ರದಲ್ಲಿ ವಾಸವಿರುವ ಅಂಜಲಿ ಅವರು ತಮ್ಮ ಏಳು ವರ್ಷದ ಮಗಳು ಹಾಗೂ ಐದು ವರ್ಷದ ಮಗನನ್ನು ಮನೆಯೊಳಗೆ ಬಿಟ್ಟು, ಬೀಗ ಹಾಕಿಕೊಂಡು ಯಶವಂತಪುರದಲ್ಲಿರುವ ಗಾರ್ಮೆಂಟ್ಸ್ ಕಾರ್ಖಾನೆಗೆ ಕೆಲಸಕ್ಕೆ ಹೋಗಿದ್ದರು.

ಮನೆಯೊಳಗಿದ್ದ ಮಗ ದೀರ್ಘ ಕಾಲದಿಂದ ಅಳುತ್ತಲೇ ಇರುವ ಸದ್ದು ಕೇಳಿಬರುತ್ತಿತ್ತು. ಪಕ್ಕದ ಮನೆಯವರು ಸ್ಥಳಕ್ಕೆ ತೆರಳಿ ಕಿಟಕಿಯಿಂದ ನೋಡಿದಾಗ ಬಾಲಕ ಸುಟ್ಟ ಗಾಯಗಳಿಂದ ನರಳುತ್ತಿದ್ದುದು ಕಂಡುಬಂದಿತ್ತು. ಅವರು ಪೊಲೀಸ್ ಸಹಾಯವಾಣಿ 112ಕ್ಕೆ ಕರೆ ಮಾಡಿ ತಿಳಿಸಿದ್ದರು. ಪೊಲೀಸರು ಬಂದು ಬೀಗ ತೆರೆದು, ಬಾಲಕನನ್ನು ರಕ್ಷಿಸಿದ್ದಾರೆ. ಕೆಲಸಕ್ಕೆ ತೆರಳಿದ್ದ ತಾಯಿಯನ್ನು ಕರೆಸಿ, ಬಾಲಕನನ್ನು ತಮ್ಮ ವಾಹನದಲ್ಲಿ ಆಸ್ಪತ್ರೆಗೆ ಕಳುಹಿಸಿದ್ದಾರೆ.

'ಬಿಸಿ ನೀರು ಕಾಯಿಸಲು ಹೀಟರ್ ಹಾಕಿದ್ದೆ. ಕೆಲಸಕ್ಕೆ ಹೊರಡುವ ಆತುರದಲ್ಲಿ ಹಾಗೆಯೇ ಮರೆತು ಹೋಗಿದ್ದೆ. ನಾನು ಹೋದ ಕೆಲ ಹೊತ್ತಿನ ಬಳಿಕ ಮಗ ಸ್ನಾನಗೃಹಕ್ಕೆ ನೀರು ತೆಗೆದುಕೊಳ್ಳಲು ಹೋದ ವೇಳೆ ಆತನ ಕಾಲಿಗೆ ಬಿಸಿ ನೀರು ಬಿದ್ದು ಬೊಬ್ಬೆಗಳು ಬಂದಿದ್ದವು' ಎಂಬ ಉತ್ತರವನ್ನು ತಾಯಿ ಪೊಲೀಸರಿಗೆ ನೀಡಿದ್ದಾರೆ.

'ಅಂಜಲಿ ಅವರ ಮನೆಯಲ್ಲಿಯೇ ವಾಸವಾಗಿರುವ ವ್ಯಕ್ತಿಯೊಬ್ಬ ಮಾತು ಕೇಳುತ್ತಿಲ್ಲ ಎಂಬ ಕಾರಣಕ್ಕೆ ನೀರು ಕಾಯಿಸುವ ಹೀಟರ್‌ನಿಂದ ಬಾಲಕನಿಗೆ ಬರೆ ಹಾಕಿದ್ದಾನೆ. ಕೌಟುಂಬಿಕ ಕಲಹದಿಂದ ಅಂಜಲಿ ಅವರು ಪತಿಯಿಂದ ದೂರವಾಗಿದ್ದು, ಪ್ರತ್ಯೇಕವಾಗಿ ಮಕ್ಕಳೊಂದಿಗೆ ವಾಸವಾಗಿದ್ದಾರೆ' ಎಂದು ಸ್ಥಳೀಯರು ಆರೋಪಿಸಿದ್ದಾರೆ.

'ಬಿಸಿ ನೀರು ಬಿದ್ದು ಗಾಯವಾಗಿರುವುದಾಗಿ ಬಾಲಕನ ತಾಯಿ ಹೇಳಿದ್ದಾರೆ. ಬಾಲಕನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಚೇತರಿಸಿಕೊಳ್ಳುತ್ತಿದ್ದಾನೆ. ಈವರೆಗೂ ಯಾರ ವಿರುದ್ಧವೂ ಪ್ರಕರಣ ದಾಖಲಿಸಿಕೊಂಡಿಲ್ಲ. ಮಕ್ಕಳ ಹೇಳಿಕೆ ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಬಾಗಲಗುಂಟೆ ಠಾಣೆ ಪೊಲೀಸರು ತಿಳಿಸಿದರು.

ಸುಧಾ, ಮಯೂರ ಓದಿರಿ

ಡಿಜಿಟಲ್ ಅರೆಸ್ಟ್: ₹1.78 ಕೋಟಿ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ನಿವಾಸಿಯೊಬ್ಬರಿಗೆ ವಂಚಕರು 'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ಬೆದರಿಸಿ ₹1.78 ಕೋಟಿ ಹಣವನ್ನು ತಮ್ಮ ಖಾತೆಗೆ ವರ್ಗಾಯಿಸಿಕೊಂಡು ಮೋಸ ಮಾಡಿದ್ದಾರೆ.

ಮಹದೇವಪುರದ ಕೆಜಿಎಫ್ ಮುನಿರೆಡ್ಡಿ ಪಾಳ್ಯದ ನಿವಾಸಿ ಎಲ್. ಪರಮಶಿವಂ ಅವರ ದೂರು ಆಧರಿಸಿ ವೈಟ್‌ಫೀಲ್ಡ್ ವಿಭಾಗದ ಸಿಇಎನ್ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

'ಜನವರಿ 3ರಂದು ಪರಮಶಿವಂಗೆ ಕರೆ ಮಾಡಿದ್ದ ಅಪರಿಚಿತ ವ್ಯಕ್ತಿ, 'ಕ್ರೆಡಿಟ್ ಕಾರ್ಡ್ ಬಿಲ್ ₹1.20 ಲಕ್ಷ ಪಾವತಿ ಮಾಡಿಲ್ಲ. ಈ ಬಗ್ಗೆ ದೆಹಲಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬ್ಯಾಂಕ್ ಖಾತೆ ಪರಿಶೀಲನೆ ಮಾಡಬೇಕಿರುವ ಕಾರಣ, ನಿಮ್ಮ ಬಳಿ ಇರುವ ಹಣವನ್ನು ಆರ್‌ಬಿಐಗೆ ವರ್ಗಾವಣೆ ಮಾಡಬೇಕು' ಎಂದು ಹೇಳಿದ್ದಾನೆ' ಎಂದು ಪೊಲೀಸರು ತಿಳಿಸಿದರು.

'ಆತನ ಸೂಚನೆಯಂತೆ ಪರಮಶಿವಂ ಅವರು ತಮ್ಮ ಬಳಿಯಿದ್ದ ₹1.17 ಕೋಟಿ ಹಣವನ್ನು ವಂಚಕ ಹೇಳಿದ ವಿವಿಧ ಬ್ಯಾಂಕ್ ಖಾತೆಗಳಿಗೆ ಹಂತ ಹಂತವಾಗಿ ವರ್ಗಾವಣೆ ಮಾಡಿದ್ದರು. ಈ ಬಗ್ಗೆ ವಿಚಾರಿಸಲು ಅವರು ಕರೆ ಮಾಡಿದಾಗ, ಆರೋಪಿ ಮೊಬೈಲ್ ಫೋನ್ ಸ್ವಿಚ್ ಆಫ್ ಮಾಡಿಕೊಂಡಿದ್ದ' ಎಂದು ಹೇಳಿದರು.

ಕಡಿಮೆ ಬೆಲೆಗೆ ಕಾರು ಕೊಡಿಸುವ ಆಮಿಷ ಒಡ್ಡಿ ಕೃತ್ಯ

ನಕಲಿ ನೋಟು ನೀಡಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಡಿಮೆ ಬೆಲೆಗೆ ಕಾರು ಕೊಡಿಸುವುದಾಗಿ ನಂಬಿಸಿ ವ್ಯಕ್ತಿಯೊಬ್ಬರಿಂದ ₹5.40 ಲಕ್ಷವನ್ನು ಬ್ಯಾಂಕ್ ಖಾತೆಗೆ ವರ್ಗಾಯಿಸಿಕೊಂಡು, ಬದಲಿಗೆ ₹6 ಲಕ್ಷ ಮೌಲ್ಯದ ನಕಲಿ ನೋಟು ನೀಡಿ ವಂಚಿಸಲಾಗಿದೆ.

ಆಂಧ್ರ ಪ್ರದೇಶದ ಕಡಪದ ಸೈಯದ್ ಸಮ್ರೀನ್ ಅವರ ದೂರು ಆಧರಿಸಿ ಹೈಗ್ರೌಂಡ್ಸ್ ಠಾಣೆ ಪೊಲೀಸರು ಆರೋಪಿ ರಯಾನ್ ಖುರ್ಷಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ಆರೋಪಿಯ ಬ್ಯಾಂಕ್ ಖಾತೆಯಲ್ಲಿದ್ದ ಹಣವನ್ನು ಜಪ್ತಿ ಮಾಡಿದ್ದಾರೆ.

'ಕುವೈತ್‌ನಲ್ಲಿ ಕಾರು ಚಾಲಕನಾಗಿ ಕೆಲಸ ಮಾಡಿಕೊಂಡಿದ್ದ ಸಮ್ರೀನ್ ಅವರ ಪತಿ ಸಮೀರ್ ನಗರಕ್ಕೆ ವಾಪಸ್ ಆದ ವೇಳೆ ಸೈಯದ್ ಖುರ್ಷಿ ಅವರ ಪರಿಚಯವಾಗಿದೆ. ಮಾತುಕತೆ ವೇಳೆ ಸಮೀರ್, ಕಾರು ಖರೀದಿಸಿ ನಗರದಲ್ಲಿಯೇ ಚಾಲಕನಾಗಿ ಕೆಲಸ ಮಾಡಿಕೊಂಡಿರುವುದಾಗಿ ಹೇಳಿದ್ದಾರೆ. ಆಗ ಖುರ್ಷಿ, ಆರು ಲಕ್ಷ ರೂಪಾಯಿಗೆ ಕಾರು ಕೊಡಿಸುವುದಾಗಿ ಭರವಸೆ ನೀಡಿ ತನ್ನ ಮೊಬೈಲ್ ಸಂಖ್ಯೆ ನೀಡಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

'ಜನವರಿ 19ರಂದು ಶಾಂಗ್ರಿಲಾ ಹೋಟೆಲ್ ಬಳಿ ತನ್ನ ಸಂಬಂಧಿ ಶೇಖ್ ಅಸ್ಲಂ ಪಾಷಾ ಅವರೊಂದಿಗೆ ಸಮೀರ್ ಅವರು ಖುರ್ಷಿಯನ್ನು ಭೇಟಿಯಾಗಿದ್ದರು. ಹಣ ನೀಡಿದರೆ ಕಾರು ತರಿಸಿಕೊಡುವುದಾಗಿ ಆರೋಪಿ ಹೇಳಿದ್ದಾನೆ. ಇದನ್ನು ನಂಬಿದ ಸಮೀರ್, ಆರೋಪಿ ನೀಡಿದ ಬ್ಯಾಂಕ್ ಖಾತೆಗೆ ₹5.40 ಲಕ್ಷ ಹಣವನ್ನು ವರ್ಗಾಯಿಸಿದ್ದಾರೆ. ಕೆಲ ಹೊತ್ತಿನ ಬಳಿಕ ಖುರ್ಷಿ, 'ಈ ದಿನ ಕಾರು ಬಂದಿಲ್ಲ. ಹಾಗಾಗಿ ನೀವು ವರ್ಗಾಯಿಸಿರುವ ಹಣದ ಬದಲಿಗೆ ₹6 ಲಕ್ಷ ನಗದು ಇಟ್ಟುಕೊಂಡಿರಿ' ಎಂದು ಪ್ಲಾಸ್ಟಿಕ್ ಕವರ್‌ನಲ್ಲಿಟ್ಟಿದ್ದ ನೋಟಿನ ಕಂತೆಗಳನ್ನು ನೀಡಿದ್ದಾನೆ. ಅರ್ಧ ಗಂಟೆ ಬಳಿಕ ಕಾರು ತೆಗೆದುಕೊಂಡು ಬರುವುದಾಗಿ ಹೇಳಿ ಹೋದವನು ವಾಪಸ್ ಬರಲಿಲ್ಲ' ಎಂದರು.

'ಅನುಮಾನಗೊಂಡ ಸಮೀರ್, ಆರೋಪಿ ನೀಡಿದ್ದ ಹಣವನ್ನು ಪರಿಶೀಲಿಸಿದಾಗ ₹500 ಮುಖಬೆಲೆಯ ಒಂದು ನೋಟು ಮಾತ್ರ ಅಸಲಿಯಾಗಿತ್ತು. ಉಳಿದ ನೋಟುಗಳು ನಕಲಿ ಎಂಬುದು ಗೊತ್ತಾಗಿದೆ' ಎಂದು ಪೊಲೀಸರು ವಿವರಿಸಿದರು.

ಶಿಕ್ಷಣ





ಕ್ರಮಬದ್ಧ ಓದಿಗೆ ಕೆಲವು ತಂತ್ರಗಳು

ಆರ್. ಶ್ರೀನಾಗೇಶ್

ಅನೇಕರು ಪರೀಕ್ಷೆ ಇನ್ನೂ ದೂರ ಇದೆ ಎಂದು ಓದಿನತ್ತ ಲಕ್ಷ್ಯ ಕೊಡದೇ ಇರುವವರಾದರೆ, ಮತ್ತೆ ಕೆಲವರು ಪ್ರಾರಂಭದಿಂದಲೂ ಶಿಸ್ತಿನಿಂದ ಓದಿರುತ್ತಾರೆ. ಮತ್ತೆ ಕೆಲವರು ವರ್ಷವಿಡೀ ಓದನ್ನು ನಿರ್ಲಕ್ಷ್ಯ ಮಾಡುತ್ತಾರೆ. ಪರೀಕ್ಷೆಯ ಹಿಂದಿನ ರಾತ್ರಿ ನಿದ್ದೆಗೆಟ್ಟು ಓದುವವರಿದ್ದಾರೆ. ಇವರಿಗೆ ಅಂಕಗಳು ಬರಬಹುದು. ಆದರೆ, ವಿಷಯಜ್ಞಾನ ಲಭಿಸುವುದಿಲ್ಲ. ಮುಂದಿನ ಓದಿಗೆ ತಳಹದಿಯೇ ಇಲ್ಲದೆ ಪರದಾಡುವಂತಾಗುತ್ತದೆ. ಜತೆಗೆ ಆರೋಗ್ಯದಲ್ಲಿಯೂ ಏರುಪೇರಾಗಬಹುದು.

ಪರೀಕ್ಷೆ ಹಾಗೂ ಅಂಕಗಳನ್ನು ಗಮನದಲ್ಲಿಟ್ಟುಕೊಂಡು ಓದುವವರಿಗೆ ಪರೀಕ್ಷೆ ಹತ್ತಿರ ಬರುತ್ತಿದ್ದಂತೆ ಹಾಗೂ ಪರೀಕ್ಷೆ ಬರೆಯುವ ಸಮಯದಲ್ಲಿ ಆತಂಕ ಹೆಚ್ಚಾಗಿ ಕಾಡತೊಡಗುತ್ತದೆ. ಪರೀಕ್ಷೆಗೆ ಕೆಲವೇ ತಿಂಗಳಿವೆ ಎನ್ನುವಾಗಲೇ ಕೆಲವರಿಗೆ ಆತಂಕದ ಲಕ್ಷಣಗಳು ಹೆಚ್ಚಾಗಿ, ಅದು ಅವರ ವರ್ತನೆಯಲ್ಲಿ ಗಾಢವಾಗಿ ಕಾಣುತ್ತವೆ.

ಹೀಗಾಗಿ ಪರೀಕ್ಷೆಗೂ ಮುಂಚಿನ ಮೂರು ತಿಂಗಳು ಕ್ರಮಬದ್ಧವಾಗಿ ಓದುವುದರತ್ತ ಗಮನ ಕೊಟ್ಟರೆ, ವಿಷಯವನ್ನು ಸುಲಭವಾಗಿ ಗ್ರಹಿಸಬಹುದು. ಅಂಕಗಳನ್ನೂ ನಿರಾಯಾಸವಾಗಿ ಗಳಿಸಬಹುದು.

ಆದ್ಯತೆ ನೀಡಿ: ಪರೀಕ್ಷೆ ಮತ್ತು ಅಂಕಗಳಿಗೆ ಆದ್ಯತೆ ಕೊಟ್ಟು ಓದುವ ಬದಲಿಗೆ ಕಲಿಕೆಗೆ ಒತ್ತು ಕೊಟ್ಟು ಓದಿ ನೋಡಿ.ಇಷ್ಟಪಟ್ಟು ಏನನ್ನೂ ಓದಿದರೂ ಅದು ನಿಮ್ಮ ತಲೆಯಲ್ಲಿ ಸರಳವಾಗಿ ನೆನಪಿನಲ್ಲಿ ಉಳಿಯುತ್ತದೆ. ಸದಾ ಇಷ್ಟಪಟ್ಟು ಕಲಿಯುವೆ ಎಂದು ಆಗಾಗ್ಗೆ ಮನಸ್ಸಿಗೆ ಹೇಳಿಕೊಳ್ಳುತ್ತ ಓದಲು ಶುರು ಮಾಡಿ. ಇದರಿಂದ ಓದಿನ ಕಡೆ ಗಮನವನ್ನು ಕೇಂದ್ರೀಕರಿಸುವುದು ಸುಲಭವಾಗುತ್ತದೆ.

ಉದಾಹರಣೆಗೆ ಗಣಿತ ನಿಮಗೆ ಕಷ್ಟವಾಗುತ್ತಿದ್ದರೆ, ಅದನ್ನು ಕಷ್ಟವೆಂದು ಭಾವಿಸಬೇಡಿ. ಬದಲಿಗೆ ಈ ಗಣಿತವು ಬದುಕಿನಲ್ಲಿ ಬರುವ ಹಲವು ಸಮಸ್ಯೆಗಳು. ಬದುಕಿನಲ್ಲಿರುವ ಸಮಸ್ಯೆಗಳನ್ನು ಹೇಗೆ ಉಳಿಯಲು ಬಿಡುವುದಿಲ್ಲವೋ, ಸಮಸ್ಯೆಗಳನ್ನು ಜಾಣತನದಿಂದ ಬಿಡಿಸಲು ಪ್ರಯತ್ನಿಸುತ್ತಿರೋ ಹಾಗೆಯೇ ಗಣಿತ ಎನ್ನುವ ವಿಷಯಕ್ಕೆ ಆದ್ಯತೆ ಕೊಟ್ಟು, ಬಿಡಿಸಲು ಪ್ರಯತ್ನಿಸಿ. ತಂತ್ರಗಾರಿಕೆಯ ಅಳವಡಿಕೆ, ಕಲಿಯುವ ವಿಧಾನದಿಂದ ಗಣಿತ ಬಹಳ ಸರಳ ಸಂಗತಿಯಾಗಬಲ್ಲದು ಎಂಬುದನ್ನು ನೆನಪಿಡಿ.

> ಪರೀಕ್ಷೆಗೂ ಮುಂಚಿನ ಮೂರು ತಿಂಗಳು ಯೋಜನಾಬದ್ಧವಾಗಿ ಪರಿಶ್ರಮ ಹಾಕಿದರೆ ಎಂಥ ಕಠಿಣ ಪರೀಕ್ಷೆಯನ್ನಾದರೂ ಸುಲಭವಾಗಿ ಎದುರಿಸಬಹುದು ಮತ್ತು ಅನಾಯಾಸವಾಗಿ ಅಂಕ ಗಳಿಸಬಹುದು

ಪಠ್ಯವನ್ನು ವಿಭಜಿಸಿ: ಒಂದೇ ಸಲಕ್ಕೆ ಎಲ್ಲ ಪಠ್ಯವನ್ನು ಹಾಕಿಕೊಂಡು ಓದಲು ಕೂರಬೇಡಿ. ವಾರದಲ್ಲಿ ಎಲ್ಲ ವಿಷಯಗಳ ಎರಡೆರಡು ಪಾಠಗಳನ್ನು ಕಲಿಯಿರಿ. ವಾರದಲ್ಲಿ ಎರಡು ದಿನ ಕಲಿತಿದ್ದನ್ನು ಪುನರ್ ಮನನ ಮಾಡಿಕೊಳ್ಳಲು ಸಮಯ ಮೀಸಲಿಡಿ. ಯಾವ ವಿಷಯ ಕಷ್ಟವೋ ಅದಕ್ಕೆ ಸ್ವಲ್ಪ ಪರಿಶ್ರಮ ಬೇಕು.

ಯೋಜನಾಬದ್ಧರಾಗಿ ಪರಿಶ್ರಮ ಹಾಕಿ: ಎಷ್ಟೇ ಚುರುಕುಬುದ್ಧಿಯವರಾದರೂ ಒಂದು ತಾಸಿನ ನಂತರ ಓದಿನ ಕಡೆಗೆ ಗಮನ ಕೊಡುವುದು ಕಷ್ಟವಾಗುತ್ತದೆ. ಒಂದು ತಾಸು ಓದು, ಹದಿನೈದು ನಿಮಿಷ ವಿರಾಮ. ಮತ್ತೆ ಒಂದು ತಾಸು ಓದುವುದು ಉಪಯುಕ್ತವಾದ ಮಾರ್ಗ.

ಬರೆದು ಕಲಿಯಿರಿ: ಯಾವುದು ಕಷ್ಟವೋ ಅದನ್ನು ಬರೆದು ಕಲಿಯಿರಿ. ಯಾವುದೇ ವಿಷಯವಿರಲಿ, ಅದನ್ನು ಸಾಧ್ಯವಾದಷ್ಟು ಕಲ್ಪಿಸಿಕೊಳ್ಳಲು ಪ್ರಯತ್ನಿಸಿ. ಕಲ್ಪಿಸಿಕೊಂಡಷ್ಟು ನೆನಪಿನಲ್ಲಿ ಉಳಿಯುತ್ತದೆ. ಲೆಕ್ಕ ಮಾಡುವುದಕ್ಕೆ ಒಂದು ತಾಸು ಮೀಸಲಿಟ್ಟರೆ, ಓದಿಗೆ ಒಂದು ತಾಸು ಮೀಸಲಿಡಿ.

ಶಿಸ್ತು ಇರಲಿ: ಓದುವ ಸಮಯ ಶಿಸ್ತುಬದ್ಧವಾಗಿರಲಿ. ಗಮನವನ್ನು ವಿಮುಖಗೊಳಿಸುವ ಯಾವುದೇ ವಸ್ತುಗಳು ಕೈಗೆ ಎಟುಕದಂತೆ ಇರಲಿ. ವಿರಾಮಕ್ಕೆ ಹದಿನೈದು ನಿಮಿಷಗಳಿದ್ದರೆ, ಅಷ್ಟೆ ಅವಧಿ ತೆಗೆದುಕೊಂಡು ಮತ್ತೆ ಓದಲು ಕುಳಿತುಕೊಳ್ಳಿ.

ಉಪಯುಕ್ತ ವಿಧಾನ ಅನುಸರಿಸಿ: ಕೆಲವರು ಲೆಕ್ಕವನ್ನು ಓದುತ್ತಾರೆ. ಅವರಿಗೆ ಹಾಗೆ ಓದಿದಾಗ ಎಲ್ಲ ಹಂತಗಳೂ ಚೆನ್ನಾಗಿ ಅರ್ಥವಾಗುತ್ತವೆ. ಆದರೆ ನೆನಪುಳಿಯುವುದಿಲ್ಲ. ಲೆಕ್ಕಗಳನ್ನು ಬಿಡಿಸುತ್ತಾ ಹೋದರೆ ಮಾತ್ರ ನೆನಪಿರುವುದು. ಒಂದು ಸಲ ಮಾದರಿ ಲೆಕ್ಕಗಳನ್ನೂ ಬಿಡಿಸುತ್ತಾ ಹೋದಂತೆ ಪ್ರತಿ ಘಟ್ಟಕ್ಕೂ ಗಮನ ಕೊಡಬೇಕು. ಪೂರ್ಣವಾಗಿ ಬಿಡಿಸಿದ ನಂತರ ಪ್ರಶ್ನೆಯಿಂದ ಉತ್ತರದವರೆಗೆ ಪ್ರತಿ ಘಟ್ಟವನ್ನು ಗಮನಿಸಿ. ಉತ್ತರದಿಂದ ಹಿಮ್ಮುಖವಾಗಿ ಪ್ರಶ್ನೆಯ ತನಕ ಪ್ರತಿ ಘಟ್ಟವನ್ನು ಗಮನಿಸುತ್ತಾ ಹೋದರೆ ಲೆಕ್ಕ ಬಿಡಿಸುವ ಕ್ರಮ ಚೆನ್ನಾಗಿ ಮನದಟ್ಟಾಗುತ್ತದೆ. ಅನಂತರ ಅದೇ ರೀತಿಯ ಹಲವು ಲೆಕ್ಕಗಳನ್ನು ಬಿಡಿಸಿದಾಗ ಅದರಲ್ಲಿ ಪರಿಣತಿ ಸಾಧಿಸುವುದು ಸುಲಭವಾಗುತ್ತದೆ. ವಿಜ್ಞಾನಕ್ಕೆ ಸಂಬಂಧಿಸಿದ ವಿಷಯವನ್ನೂ ಚಿತ್ರಗಳ ಸಮೇತ ಓದುವುದು, ಹಾಗೆ ಓದುವಾಗ ಸಣ್ಣ ಸಣ್ಣ ಚಾರ್ಟ್‌ಗಳನ್ನು ಮಾಡುವುದು ಉಪಯುಕ್ತ ವಿಧಾನವೇ. ಚರಿತ್ರೆ ಓದುವಾಗ ಘಟನೆಗಳ ಜೊತೆಗೆ ಇಸವಿಯನ್ನೂ ಸೇರಿಸಿಕೊಂಡು ಹೇಳುವುದು, ಭೂಪಟದಲ್ಲಿ ಸಂಬಂಧಿತ ಜಾಗಗಳನ್ನು ಹುಡುಕಿ ಗುರುತು ಮಾಡಿಕೊಳ್ಳುವುದು ಓದುವುದರಲ್ಲಿ ಆಸಕ್ತಿಯನ್ನು ಬೆಳೆಸುತ್ತದೆ. ಭೂಗೋಳಕ್ಕೂ ಈ ವಿಧಾನ ನೆರವಾಗುತ್ತದೆ.

ಅಯ್ಯೋ ಇಷ್ಟೊಂದು ಪಠ್ಯವಿದೆ. ಹೇಗೆ ಮುಗಿಸುವುದು ಎಂಬ ಆತಂಕಕ್ಕೆ ಒಳಗಾಗಬೇಡಿ.

ಮನುಷ್ಯನ ಮಿದುಳಿಗೆ ಅಪಾರವಾದ ಶಕ್ತಿಯಿದೆ. ಪ್ರತಿಯೊಬ್ಬರೂ ಪ್ರತಿಭಾವಂತರೆ ಎಂಬ ಆತ್ಮವಿಶ್ವಾಸವಿರಲಿ. ಕೆಲವರಿಗೆ ಕೆಲವು ವಿಷಯಗಳು ಕಷ್ಟವಾಗಬಹುದು. ಅದಕ್ಕೆ ಪರಿಶ್ರಮವನ್ನು ನಿಯಮಿತವಾಗಿ ಹಾಕುವುದು ಅನಿವಾರ್ಯ. ❖

ಸಮಾಧಾನ



ಡಾ.ಡಿ.ಎಂ. ಹೆಗಡೆ
ಸಮಾಲೋಚಕರು

ಮಕ್ಕಳ ನಡುವೆ ಸೌಹಾರ್ದ ಮೂಡಿಸುವುದು ಹೇಗೆ?

• ನನಗೆ ಇಬ್ಬರು ಮಕ್ಕಳು. ಮಗ ಎಂಜಿನಿಯರಿಂಗ್ ಓದಿದ್ದಾನೆ. ಮಗಳು ಮೆಡಿಕಲ್ ಓದುತ್ತಿದ್ದಾಳೆ. ಇಬ್ಬರ ನಡುವೆ ಐದಾರು ವರ್ಷಗಳ ಅಂತರವಿದೆ. ಆದರೂ ಅಣ್ಣನಿಗೆ ತನ್ನ ತಂಗಿಯನ್ನು ಕಂಡರೆ ಆಗದಂತೆ ನಡೆದುಕೊಳ್ಳುತ್ತಾನೆ. ಇವರಿಬ್ಬರ ನಡುವೆ ಸೌಹಾರ್ದ ಮೂಡಿಸುವುದು ಹೇಗೆ?

ಇದೇನು ಅಂಥ ಗಂಭೀರವಾದ ಸಮಸ್ಯೆ ಅಲ್ಲ. ಬಹುತೇಕ ಮನೆಗಳಲ್ಲಿ ಇರುವ ಸಾಮಾನ್ಯ ಸಮಸ್ಯೆ. ನಾವಿಬ್ಬರು, ನಮಗಿಬ್ಬರು. ಕೀರುತಿಗೊಬ್ಬ ಮಗ. ಆರತಿಗೊಬ್ಬಳು ಮಗಳು ಎನ್ನುವ ಸಂಸಾರದಲ್ಲಿ ಇರುವ ಸರ್ವೇ ಸಾಧಾರಣವಾದ ಸಮಸ್ಯೆ. ಬಹಳಷ್ಟು ಸಂದರ್ಭಗಳಲ್ಲಿ ಇದಕ್ಕೆ ಪಾಲಕರೇ ಕಾರಣರಾಗಿರುತ್ತಾರೆ. ಆದರೆ ಅವರಿಗೆ ಇದು ಗೊತ್ತಿರುವುದಿಲ್ಲ.

ಮೊದಲು ಈ ಸಮಸ್ಯೆಯ ಮೂಲವನ್ನು ಅರ್ಥಮಾಡಿಕೊಳ್ಳುವುದಕ್ಕೆ ಪ್ರಯತ್ನಿಸೋಣ. ಪಾಲಕರ ಗಮನವನ್ನು ಹೆಚ್ಚಾಗಿ ತನ್ನೆಡೆಗೆ ಸೆಳೆದುಕೊಳ್ಳಬೇಕು ಎನ್ನುವ ಕಾರಣಕ್ಕಾಗಿ ಇಬ್ಬರು ಮಕ್ಕಳ ನಡುವೆ ಎಲ್ಲಾ ವಿಷಯಗಳಲ್ಲಿಯೂ ಸ್ಪರ್ಧೆ ಇರುತ್ತದೆ. ಪಾಲಕರ ಪ್ರತಿಕ್ರಿಯೆಗಳನ್ನು ಗಮನಿಸುತ್ತಾ, ಕಾಲಾಂತರದಲ್ಲಿ ಅವರು ತಮಗೆ ಬೇಕಾದಂತೆ ತಮ್ಮನ್ನು ರೂಪಿಸಿಕೊಳ್ಳುತ್ತಾರೆ. ತಂದೆಗೆ ಮಗಳು ಪ್ರಿಯವಾದರೆ, ತಾಯಿಗೆ ಮಗ ಅಚ್ಚುಮೆಚ್ಚು. ಇದು ಸರ್ವೇ ಸಾಮಾನ್ಯ. ಮುದ್ದು ಹೆಚ್ಚಾಗಿ ಬೆಳೆದ ಮಗ, ತಂಗಿಯನ್ನು ಕೀಳಾಗಿ ಕಾಣುವುದಿದೆ. ಅವನಿಗೆ ತಾನು ಶ್ರೇಷ್ಠ ಎನ್ನುವ ಭಾವನೆ ಇರುತ್ತದೆ.

ನಿಮ್ಮ ಮಕ್ಕಳ ವಿಷಯದಲ್ಲಿ, ಅಣ್ಣನಿಗೆ ತಂಗಿಯನ್ನು ಕಂಡರೆ ಅಸೂಯೆ ಇರಬಹುದು. ಆಕೆ ಮೆಡಿಕಲ್ ಓದುವಷ್ಟು ಜಾಣೆ ಎಂತಲೂ ಅಥವಾ ಅವಳಿಗೆ ಡೊನೇಷನ್ ಕೊಟ್ಟು ನೀವು ಮೆಡಿಕಲ್ ಓದಿಸುತ್ತಿದ್ದೀರಿ ಎಂತಲೋ ಅವನಿಗೆ ಅಸಮಾಧಾನ ಇರಬಹುದು. ತಾನೂ ಮೆಡಿಕಲ್ ಓದುತ್ತಿದ್ದೆ ಎಂದು ಅವನಿಗೆ ಅನ್ನಿಸಿರಬಹುದು. ಯಾರಾದರೂ ತಂಗಿಯನ್ನು ಹೊಗಳುವಾಗ, ಅವನಿಗೆ ಕೀಳರಿಮೆಯಾಗಿರಬಹುದು. ಎಳವೆಯಿಂದಲೂ ನೀವು ಮಗಳನ್ನು ಹೆಚ್ಚು ಮುದ್ದಿನಿಂದ ಬೆಳೆಸಿರಬಹುದು. ಆವಾಗಿನಿಂದಲೇ ಅವನಿಗೆ ಅವಳ ಮೇಲೆ ಮತ್ಸರ ಇರಬಹುದು. ಅವರಿಬ್ಬರಲ್ಲಿ ಮೊದಲಿನಿಂದಲೂ ಹೊಂದಾಣಿಕೆ ಕಡಿಮೆ ಇದ್ದಿರಬಹುದು. ತಂಗಿ ರೂಪಸಿಯಾಗಿದ್ದಿರಬಹುದು. ಅವನು ಸಾಧಾರಣ ಮೈಕಟ್ಟಿನವನಾಗಿರಬಹುದು. ಅವಳ ಉತ್ಸಾಹಪೂರ್ಣ ವ್ಯಕ್ತಿತ್ವದಿಂದ ಅವನಿಗೆ ಕಿರಿಕಿರಿಯಾಗಬಹುದು. ಅವರಿಬ್ಬರ ಬೇಕು-ಬೇಡಗಳ ಬಗ್ಗೆ ಇಬ್ಬರಿಗೂ ಅಸಮಾಧಾನ ಇರಬಹುದು. ಮೊದಲಿನಿಂದಲೂ ಪರಸ್ಪರ ಇಬ್ಬರೂ ಜಗಳವಾಡುತ್ತಿರಬಹುದು. ಇಬ್ಬರೂ ಭಿನ್ನ ವ್ಯಕ್ತಿತ್ವದವರಾಗಿರಬಹುದು. ಅವನೂ ಕೂಡ ಅವನ ಜೀವನದಲ್ಲಿ, ಸೋಲು, ತಿರಸ್ಕಾರ, ಅವಮಾನ, ಮೋಸ ಇತ್ಯಾದಿ ಸಮಸ್ಯೆಗಳನ್ನು ಎದುರಿಸುತ್ತಿರಬಹುದು. ಅವಳ ವೈಯಕ್ತಿಕ ವಿಚಾರಗಳು, ಬದುಕಿನ ರೀತಿ ಅವನಿಗೆ ಇಷ್ಟ ಇಲ್ಲದಿರಬಹುದು. ತಮ್ಮ ಕೊನೆಗಾಲದಲ್ಲಿ ಮಗನೇ ತಾನೆ, ತಮ್ಮನ್ನು ನೋಡಿಕೊಳ್ಳುವುದು ಎನ್ನುವ ಪಾಲಕರ ಸುಪ್ತ ಆಲೋಚನೆಯೂ ಇಲ್ಲಿ ಪ್ರಭಾವವನ್ನು ಬೀರಿರುತ್ತದೆ. ತಂಗಿ ಹೇಗಿದ್ದರೂ ಬೇರೆ ಹೋಗುತ್ತಾಳೆ ಎನ್ನುವ ಅಂತರಂಗದೊಳಗಿನ ವಿಷಯವೂ ಅವನು ಅವಳನ್ನು ಕೆಟ್ಟದ್ದಾಗಿ ನಡೆಸಿಕೊಳ್ಳುವುದಕ್ಕೆ ಒಂದು ಕಾರಣವಿರಲೂಬಹುದು. ಇನ್ನು, ಪಾಲಕರಲ್ಲಿ ಪರಸ್ಪರ ಹೊಂದಾಣಿಕೆ ಕಡಿಮೆ ಇದ್ದೂ, ಅದನ್ನು ಗಮನಿಸಿದ ಮಕ್ಕಳೂ ಹಾಗೆಯೇ ಆಗಿರಬಹುದು.

ನಿಮ್ಮಿಬ್ಬರಲ್ಲಿ ಮಗನು ಯಾರ ಮಾತನ್ನು ಕೇಳುತ್ತಾನೋ ಅವರು ಅವನಿಗೆ ಸಂಸಾರದಲ್ಲಿ ಎಲ್ಲರ ಮಹತ್ವದ ಬಗ್ಗೆ, ತಂಗಿಯನ್ನು ನಡೆಸಿಕೊಳ್ಳಬೇಕಾದ ಸರಿಯಾದ ರೀತಿಯ ಬಗ್ಗೆ ಹೇಳಿ. ಅವನ ಮನಸ್ಸಿನೊಳಗಿನ ಸಮಸ್ಯೆಗಳನ್ನು ಕೇಳಿ ತಿಳಿದುಕೊಳ್ಳಿ. ಅವನು ನಿಮ್ಮ ಬಗ್ಗೆ ಅಸಹನೆಯಿಂದ ಮಾತನಾಡಿದರೆ ಅವನ ದೂರುಗಳನ್ನು ಸಮಾಧಾನದಿಂದ ಕೇಳಿಸಿಕೊಳ್ಳಿರಿ. ನಿಮ್ಮಿಂದ ತಪ್ಪಾಗಿದ್ದರೆ ಅದನ್ನು ಒಪ್ಪಿಕೊಳ್ಳಿರಿ. ಇಬ್ಬರೂ ಮಕ್ಕಳನ್ನು ಒಟ್ಟಿಗೆ ಕೂರಿಸಿ ಮಾತನಾಡಿರಿ. ಎಲ್ಲರೂ ಒಂದು ವಾರದ ಮಟ್ಟಿಗೆ ಬೇರೆ ಊರಿಗೆ ಹೋಗಿ ಬನ್ನಿರಿ.

ಸಂಸಾರದಲ್ಲಿ ಬಗೆಹರಿಯಲಾರದ ಸಮಸ್ಯೆಗಳು ಇಲ್ಲ! ಜೀವನದಲ್ಲಿ ನಮ್ಮ ಮಾತು ಮತ್ತು ವರ್ತನೆಗಳಿಂದ ಸಮಸ್ಯೆಗಳು ಹುಟ್ಟುತ್ತವೆ. ಹಾಗೆಯೇ ಅವುಗಳಿಗೂ ಪರಿಹಾರವೂ ಇದ್ದೇ ಇರುತ್ತದೆ. ❖

ವಿದ್ಯಾರ್ಥಿ ವೇತನ ಕೈಪಿಡಿ

ಲೊರಿಯಾಲ್ ಇಂಡಿಯಾ ಫಾರ್ ಯಂಗ್ ವಿಮೆನ್

ವಿಜ್ಞಾನ ಕ್ಷೇತ್ರದಲ್ಲಿ ಉನ್ನತ ಶಿಕ್ಷಣ ಪಡೆಯಲು ಇಚ್ಛಿಸುವ ವಿದ್ಯಾರ್ಥಿನಿಯರಿಂದ ಲೊರಿಯಾಲ್ ಇಂಡಿಯಾವು ಅರ್ಜಿಗಳನ್ನು ಆಹ್ವಾನಿಸುತ್ತದೆ.

ಅರ್ಹತೆ: ವಿದ್ಯಾರ್ಥಿನಿಯರಿಗೆ ಮಾತ್ರ ಅವಕಾಶ. ತಂತ್ರಜ್ಞಾನ, ವಿಜ್ಞಾನ, ಅರೆವೈದ್ಯಕೀಯ, ಬಯೋಟೆಕ್ನಾಲಜಿ ಸೇರಿದಂತೆ ವಿಜ್ಞಾನ ಕ್ಷೇತ್ರದಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಅಥವಾ ಪಿಎಚ್.ಡಿ ಅಧ್ಯಯನ ಮಾಡುತ್ತಿರಬೇಕು.

ಪದವಿ ಅಭ್ಯರ್ಥಿಗಳು: ಅರ್ಜಿದಾರರು ಕನಿಷ್ಠ ಶೇ 85ರಷ್ಟು ಅಂಕಗಳೊಂದಿಗೆ 12ನೇ ತರಗತಿ ಉತ್ತೀರ್ಣರಾಗಿರಬೇಕು (ಪಿಸಿಎಂ/ಪಿಸಿಬಿ/ಪಿಸಿಎಂಬಿ).

ಸ್ನಾತಕೋತ್ತರ ಮತ್ತು ಪಿಎಚ್.ಡಿ: ಅರ್ಜಿದಾರರು ಸಂಬಂಧಿತ ಕ್ಷೇತ್ರಗಳಲ್ಲಿ ಸ್ನಾತಕೋತ್ತರ ಅಥವಾ ಪಿಎಚ್‌ಡಿ ಅಧ್ಯಯನ ಮಾಡುತ್ತಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹ 6,00,000ಕ್ಕಿಂತ ಕಡಿಮೆ ಇರಬೇಕು. ಭಾರತದಾದ್ಯಂತದ ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ಆರ್ಥಿಕ ಸಹಾಯ: ಪದವಿ ವಿದ್ಯಾರ್ಥಿಗಳಿಗೆ: ₹ 62,500,
ಸ್ನಾತಕೋತ್ತರ ಮತ್ತು ಪಿಎಚ್‌ಡಿ ವಿದ್ಯಾರ್ಥಿಗಳಿಗೆ: ₹1,00,000

ಅರ್ಜಿ ಸಲ್ಲಿಸಲು ಕೊನೆ ದಿನ:31-01-2025
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.
ಹೆಚ್ಚಿನ ಮಾಹಿತಿಗೆ: Short Url:www.b4s.in/praja/LIF10

ಜೆ. ಎನ್. ಟಾಟಾ ಎಂಡೋಮೆಂಟ್ ಲೋನ್ ಸ್ಕಾಲರ್‌ಶಿಪ್

ವಿದೇಶದಲ್ಲಿ ಕಲಿಯಲು ಇಚ್ಛಿಸುವ ಭಾರತೀಯ ವಿದ್ಯಾರ್ಥಿಗಳಿಗೆ ಜೆ.ಎನ್.ಟಾಟಾ ಎಂಡೋಮೆಂಟ್ 'ಲೋನ್ ಸ್ಕಾಲರ್‌ಶಿಪ್ ನೀಡುತ್ತಿದೆ.

ಅರ್ಹತೆ: ಮಾನ್ಯತೆ ಪಡೆದ ವಿಶ್ವವಿದ್ಯಾಲಯ/ಕಾಲೇಜು/ಸಂಸ್ಥೆಯಲ್ಲಿ ಪದವಿಯ ಕೊನೆಯ ವರ್ಷ ಕಲಿಯುತ್ತಿರಬೇಕು. ಅಭ್ಯರ್ಥಿಗಳು ವಿದೇಶದಲ್ಲಿ ಸ್ನಾತಕೋತ್ತರ/ಡಾಕ್ಟರಲ್/ಪೋಸ್ಟ್ ಡಾಕ್ಟರಲ್ ಅಧ್ಯಯನ ಮುಂದುವರಿಸಲು ಯೋಜನೆ ಹಾಕಿರಬೇಕು.
ಈ ಮೊದಲು ಈ ಸ್ಕಾಲರ್‌ಷಿಪ್ ಪಡೆದವರೂ ಹೊಸದಾಗಿ ಅರ್ಜಿ ಸಲ್ಲಿಸಲು ಅವಕಾಶವಿದೆ. ಅಭ್ಯರ್ಥಿಗಳು ಪದವಿ ಮತ್ತು ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ಶೇ 60ರಷ್ಟು ಅಂಕ ಗಳಿಸಿರಬೇಕು. ಅಭ್ಯರ್ಥಿಗಳ ಗರಿಷ್ಠ ವಯೋಮಿತಿ 45.

ಆರ್ಥಿಕ ಸಹಾಯ: ₹ 10 ಲಕ್ಷದವರೆಗೆ ಲೋನ್ ಸ್ಕಾಲರ್‌ಷಿಪ್
ಅರ್ಜಿ ಸಲ್ಲಿಸಲು ಕೊನೆ ದಿನ: 07-03-2025
ಅರ್ಜಿ ಸಲ್ಲಿಸುವ ವಿಧಾನ:ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
ಹೆಚ್ಚಿನ ಮಾಹಿತಿಗೆ: Short Url:www.b4s.in/praja/JNT9 ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

ಎಸ್ಸೆಸ್ಸೆಲ್ಸಿ- ಸಮಾಜವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

37) ಬ್ಯಾಂಕು ಖಾತೆಯನ್ನು ತೆಗೆಯುವುದರಿಂದ ಆಗುವ ಅನುಕೂಲಗಳು ಯಾವುವು?

ಉತ್ತರ:– ಬ್ಯಾಂಕು ಖಾತೆಯನ್ನು ತೆಗೆಯುವುದರಿಂದ ಆಗುವ ಅನುಕೂಲಗಳು ಹೀಗಿವೆ

* ಬ್ಯಾಂಕು ಖಾತೆಯು ಹಣದ ಭದ್ರತೆ ಕಾಪಾಡುತ್ತದೆ.
* ಬ್ಯಾಂಕು ಖಾತೆಯು ಹಣದ ಪಾವತಿಗಳನ್ನು ಮಾಡಲು ಸಹಾಯ ಮಾಡುತ್ತದೆ.
* ಬ್ಯಾಂಕು ಖಾತೆಯು ಹಣವನ್ನು ವಸೂಲು ಮಾಡಲು ಸಹಾಯ ಮಾಡುತ್ತದೆ.
* ಬ್ಯಾಂಕು ಖಾತೆಯನ್ನು ಹೊಂದಿರುವವರು ಸಾಲ ಪಡೆಯಲು ಸಾಧ್ಯವಾಗುತ್ತದೆ.
* ಬ್ಯಾಂಕು ಖಾತೆಯು ವ್ಯವಹಾರಗಳನ್ನು ಸುಗಮವಾಗಿ ನಡೆಸಲು ಸಾಧ್ಯ ಮಾಡಿಕೊಡುತ್ತದೆ.
* ಬ್ಯಾಂಕು ಖಾತೆದಾರರು ಭದ್ರತಾ ಕಪಾಟುಗಳನ್ನು ಪಡೆಯಬಹುದು

38) ಭಾರತದಲ್ಲಿ ರೂಢಿಯಲ್ಲಿರುವ ವಿವಿಧ ಕೃಷಿ ವಿಧಾನಗಳು ಯಾವುವು?

ಉತ್ತರ:– ವಿವಿಧ ಭೌಗೋಳಿಕ, ಆರ್ಥಿಕ ಮತ್ತು ಸಾಮಾಜಿಕ ಅಂಶಗಳಿಂದಾಗಿ ಭಾರತದಲ್ಲಿ ವಿವಿಧ ಕೃಷಿ ವಿಧಾನಗಳು ರೂಢಿಯಲ್ಲಿವೆ. ಅವು ಹೀಗಿವೆ:– (1) ಜೀವನಾಧಾರಿತ ಬೇಸಾಯ (2) ಸಾಂದ್ರ ಬೇಸಾಯ (3) ವಾಣಿಜ್ಯ ಬೇಸಾಯ (4) ಮಿಶ್ರಬೇಸಾಯ (5) ತೋಟಗಾರಿಕಾ ಬೇಸಾಯ

39) ಭಾಷಾವಾರು ಪ್ರಾಂತ್ಯಗಳ ವಿಂಗಡಣೆಯ ಕುರಿತು ಬರೆಯಿರಿ.

ಉತ್ತರ : ಸ್ವಾತಂತ್ರ್ಯ ಬಂದ ಹೊಸದರಲ್ಲಿ ಜನರಿಗೆ ಉತ್ತಮವಾದ ಆಡಳಿತ ನೀಡಲು ಜನರಾಡುವ ಭಾಷೆಯನ್ನು ಆಧರಿಸಿ ಪ್ರಾಂತ್ಯಗಳ ರಚನೆ ಆಗಬೇಕೆಂಬ ಕೂಗು ತೀವ್ರವಾಗಿತ್ತು. ಕೇಂದ್ರ ಸರ್ಕಾರವು 1953ರಲ್ಲಿ ಸರ್ಕಾರ ನ್ಯಾಯಮೂರ್ತಿ ಫಜಲ್ ಆಲಿ ಆಯೋಗ ರಚಿಸಿತು. ಇದರಲ್ಲಿ ಫಜಲ್ ಆಲಿ ಅಧ್ಯಕ್ಷರಾಗಿದ್ದರೆ ಕೆ. ಎಂ. ಫಣಿಕ್ಕರ್ ಮತ್ತು ಎಚ್. ಎನ್. ಕುಂಜ್ರು ಸದಸ್ಯರಾಗಿದ್ದರು.

ಮೊದಲ ಭಾಷಾವಾರು ರಾಜ್ಯವಾಗಿ 1953ರಲ್ಲಿ ಆಂಧ್ರ ಪ್ರದೇಶ ರಚನೆಯಾಯಿತು. ಈ ಆಯೋಗದ ವರದಿಯಂತೆ 1956ರಲ್ಲಿ ರಾಜ್ಯ ವಿಂಗಡಣಾ ಕಾನೂನು ಜಾರಿಗೆ ಬಂತು. ಈ ಕಾನೂನಿನ ಪ್ರಕಾರ ದೇಶದಲ್ಲಿ 14 ರಾಜ್ಯಗಳು ಮತ್ತು 6 ಕೇಂದ್ರಾಡಳಿತ ಪ್ರದೇಶಗಳು ರಚನೆಯಾದವು.

40) ಉದ್ಯಮಶೀಲತೆಯ/ಉದ್ಯಮಿಯ ಗುಣಲಕ್ಷಣಗಳನ್ನು ಬರೆಯಿರಿ

ಉತ್ತರ:– ಉದ್ಯಮಶೀಲತೆಯ/ಉದ್ಯಮಿಯ ಗುಣಲಕ್ಷಣಗಳು :

* ಸೃಜನಾತ್ಮಕ – ಹೊಸ ಪದ್ಧತಿಯನ್ನು ರೂಢಿಸಿತರುವುದು.
* ಕ್ರಿಯಾತ್ಮಕ
* ನಾಯಕತ್ವ
* ಗುಂಪುಕಟ್ಟುವುದು.
* ಪ್ರಚೋದನೆಯ ಸಾಧನೆ
* ಸಮಸ್ಯೆಯ ಪರಿಹಾರ
* ಗುರಿಮುಟ್ಟುವಿಕೆ
* ನಷ್ಟಭರಿತಕ್ಕೆ ಸಿದ್ಧ
* ನಿರ್ಧಾರಗಳನ್ನು ಕೈಗೆತ್ತಿಕೊಳ್ಳುವುದು.
* ವಚನಬದ್ಧತೆ.

41) ಭಾರತದಲ್ಲಿ ಕಾಲುವೆ ನೀರಾವರಿಯನ್ನು ವ್ಯಾಪಕವಾಗಿ ಬಳಸಿಕೊಂಡ ರಾಜ್ಯಗಳಾವುವು?

ಉತ್ತರ:– ಭಾರತದಲ್ಲಿ ಕಾಲುವೆ ನೀರಾವರಿ ವ್ಯವಸ್ಥೆಯು ವ್ಯಾಪಕವಾಗಿ ಉತ್ತರ ಪ್ರದೇಶ, ಪಂಜಾಬ್, ಹರಿಯಾಣ, ಬಿಹಾರ, ಮಧ್ಯಪ್ರದೇಶ, ರಾಜಸ್ತಾನ, ಆಂಧ್ರಪ್ರದೇಶ, ಗುಜರಾತ್, ತಮಿಳುನಾಡು, ಒಡಿಶಾ, ಪಶ್ಚಿಮ ಬಂಗಾಳ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಅಭಿವೃದ್ಧಿಗೊಂಡಿದೆ.

42) ಭಾರತದ ವ್ಯವಸಾಯವು 'ಮಾನ್ಸೂನ್ ಮಾರುತಗಳೊಡನೆ ಆಡುವ ಜೂಜಾಟವಾಗಿದೆ' ಚರ್ಚಿಸಿರಿ.

ಉತ್ತರ. ನೈರುತ್ಯ ಮಾನ್ಸೂನ್ ಮಾರುತಗಳು ಒಂದು ವಿಧದಲ್ಲಿ ದೇಶದ ವ್ಯವಸಾಯವನ್ನು ನಿಯಂತ್ರಿಸುತ್ತವೆ. ಈ ಮಳೆ ವಿಫಲವಾದರೆ ಬರಗಾಲ ಬರುವುದು. ಅತಿ ಹೆಚ್ಚಾದಾಗ ಪ್ರವಾಹ ಉಂಟಾಗಿ ಪ್ರಾಣ ಹಾನಿ ಮತ್ತು ಆಸ್ತಿಗಳಿಗೆ ಹಾನಿ ಉಂಟಾಗುತ್ತದೆ. ಆದ್ದರಿಂದ ಭಾರತದ ವ್ಯವಸಾಯವು ಮಾನ್ಸೂನ್ ಮಾರುತಗಳೊಡನೆ ಆಡುವ ಜೂಜಾಟವಾಗಿದೆ

43) ಬೇರೆಲ್ಲಾ ಸಂಸ್ಥಾನಗಳ ವಿಲೀನಕ್ಕಿಂತ ಕಾಶ್ಮೀರದ ವಿಲೀನವು ವಿಶಿಷ್ಟವಾಗಿದೆ. ಹೇಗೆ?

ಉತ್ತರ:– ಜಮ್ಮು ಕಾಶ್ಮೀರಿನ ರಾಜನಾಗಿದ್ದ ಹರಿಸಿಂಗ್‌ನು ಸ್ವತಂತ್ರವಾಗುಳಿಯಲು ನಿರ್ಧರಿಸಿದ್ದನು, ಜಮ್ಮು ಕಾಶ್ಮೀರವು ಭಾರತಕ್ಕೆ ಸೇರಿ ಬಿಡಬಹುದೆಂಬ ಆತಂಕದಿಂದ ಪಾಕಿಸ್ತಾನವು ಕಾಶ್ಮೀರ ಕಣಿವೆಯ ಮುಸ್ಲಿಂ ಬುಡಕಟ್ಟು ಜನರಿಗೆ ದಾಳಿ ಮಾಡುವಂತೆ ಪ್ರಚೋದಿಸಿತು. ಕಾಶ್ಮೀರದ ಸ್ವಾತಂತ್ರ್ಯಕ್ಕಾಗಿ ದುಡಿದ ಷೇಕ್ ಅಬ್ದುಲ್ಲಾನ ನ್ಯಾಷನಲ್ ಕಾನ್ಫರೆನ್ಸ್ ಪಕ್ಷವು ಧಾರ್ಮಿಕ ಸಂವಿಧಾನವನ್ನು ಹೊಂದಿರುವ ಪಾಕಿಸ್ತಾನಕ್ಕಿಂತ ಪ್ರಜಾಪ್ರಭುತ್ವ ಗಣರಾಜ್ಯ ಸಂವಿಧಾನವನ್ನು ಹೊಂದಿರುವ ಭಾರತದೊಂದಿಗೆ ಗುರುತಿಸಿಕೊಳ್ಳುವುದೇ ಉತ್ತಮವೆಂದು ಹೋರಾಟ ನಡೆಸಿತು. ಇಂತಹದೊಂದು ಒತ್ತಡದಿಂದಾಗಿ ರಾಜಾ ಹರಿಸಿಂಗನು ಭಾರತ ಸರ್ಕಾರದ ಸಹಾಯವನ್ನು ಕೋರಿದನು. ಪಾಕಿಸ್ತಾನದ ಉದ್ದೇಶ ವಿಫಲವಾಗಿ ಕಾಶ್ಮೀರ ಕೆಲವು ಷರತ್ತುಗಳೊಂದಿಗೆ ಭಾರತದೊಂದಿಗೆ ವಿಲೀನವಾಯಿತು ಆದರೆ ಕಾಶ್ಮೀರದ ಒಂದು ಭಾಗ ಪಾಕಿಸ್ತಾನದ ವಶದಲ್ಲಿ ಉಳಿಯಿತು. ಇದರ ವಿರುದ್ಧ ಭಾರತವು ವಿಶ್ವಸಂಸ್ಥೆಗೆ ದೂರು ಸಲ್ಲಿಸಿತು. ವಿಶ್ವಸಂಸ್ಥೆ ಕದನ ವಿರಾಮದ ಆದೇಶವನ್ನು ಜನವರಿ 1, 1949ರಂದು ನೀಡಿತು. ಪಾಕಿಸ್ತಾನ ಆಕ್ರಮಿಸಿರುವ ಕಾಶ್ಮೀರದ ವಾಯುವ್ಯ ಪ್ರದೇಶವನ್ನು 'ಪಾಕ್ ಆಕ್ರಮಿತ ಪ್ರದೇಶ'ವೆಂದು ಈಗಲೂ ಕರೆಯಲಾಗುತ್ತದೆ. ಬೇರೆಲ್ಲಾ ಸಂಸ್ಥಾನಗಳ ವಿಲೀನಕ್ಕಿಂತ ಕಾಶ್ಮೀರದ ವಿಲೀನವು ವಿಶಿಷ್ಟವಾಗಿದೆ.

46) ಅನಕ್ಷರತೆಯನ್ನು ನಿವಾರಿಸಲು ಭಾರತ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?

ಉತ್ತರ: (1) ಸರ್ವೋನ್ನತ ನ್ಯಾಯಾಲಯವು ತನ್ನ ತೀರ್ಪಿನಲ್ಲಿ "ಶಿಕ್ಷಣದ ಹಕ್ಕು 21(ಎ)ನೇ ವಿಧಿಯನ್ವಯ ಮೂಲಭೂತ ಹಕ್ಕು ಎನಿಸಿದ್ದು, ಅದು ಜೀವಿಸುವ ಹಕ್ಕಿನಿಂದ ನೇರವಾಗಿ ಹರಿದು ಬರುವಂತಹುದು" ಎಂದು ಘೋಷಿಸಿದೆ.
(2) 2009ನೇ ಮಕ್ಕಳ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಕಾನೂನು 2010ನೇ ಏಪ್ರಿಲ್ 1ರಿಂದ ಜಾರಿಗೆ ಬಂದಿದೆ. ಇದು ಭಾರತದ ಅನಕ್ಷರತೆಯನ್ನು ಹೋಗಲಾಡಿಸುವಲ್ಲಿ ಒಂದು ಪ್ರಮುಖ ಹೆಜ್ಜೆ ಎನಿಸಿದೆ. ಈಗ ಶಿಕ್ಷಣ ನೀಡುವುದು ಮಕ್ಕಳ ಹೆತ್ತವರಿಗೆ ಹಾಗೂ ಸರ್ಕಾರಕ್ಕೆ ಸಂಯುಕ್ತ ಜವಾಬ್ದಾರಿಯಾಗಿದೆ.

47) ಪ್ಲಾಸಿ ಕದನದ ಕುರಿತು ಸಂಕ್ಷಿಪ್ತವಾಗಿ ಬರೆಯಿರಿ

ಉತ್ತರ:– ಬಂಗಾಳದ ನವಾಬನಾದ ಅಲಿವರ್ದಿ ಖಾನನು 1756ರಲ್ಲಿ ನಿಧನನಾದನು. ನಂತರ ಅವನ ಮೊಮ್ಮಗನಾದ ಸಿರಾಜ್-ಉದ್-ದೌಲನು ಅಧಿಕಾರಕ್ಕೆ ಬಂದನು. ಯುವ ನವಾಬನಾದ ಸಿರಾಜ್-ಉದ್-ದೌಲನಿಗೂ ಮತ್ತು ಬ್ರಿಟಿಷರಿಗೂ 1757ರಲ್ಲಿ ಇತಿಹಾಸ ಪ್ರಸಿದ್ಧ ಪ್ಲಾಸಿ ಕದನ ನಡೆಯಿತು.

ಮೊದಲು ನವಾಬನ ವಿರೋಧಿಗಳಾದ ಮಾಣಿಕ್‌ಚಂದ್, ನೇಮಿಚಂದ್, ಜಗತ್‌ಸೇಠ್ (ಬಂಗಾಳದ ಲೇವಾದೇವಿಗಾರ) ಮೊದಲಾದ ಶ್ರೀಮಂತರನ್ನು ತನ್ನತ್ತ ಸೆಳೆದುಕೊಂಡನು. ನಂತರ ಸಿರಾಜನ ಸೇನಾಪತಿಯಾದ ಮೀರ್ ಜಾಫರನಿಗೆ ನವಾಬನನ್ನಾಗಿ ಮಾಡುವ ಆಮಿಷವೊಡ್ಡಿ ಯುದ್ಧದಲ್ಲಿ ತಟಸ್ಥವಾಗಿರಲು ರಾಜ್ಯವನ್ನು ಒಪ್ಪಿಸಿದನು. ಇದರಿಂದ ಧೈರ್ಯಗೊಂಡ ರಾಬರ್ಟ್ ಕ್ಲೈವನು 1757 ಜೂನ್ 23ರಂದು ಸಿರಾಜ್-ಉದ್-ದೌಲನ ಮೇಲೆ ಕದನ ಸಾರಿದನು. ಪ್ಲಾಸಿ ಎಂಬಲ್ಲಿ ನಡೆದ ಕದನದಲ್ಲಿ ಕ್ಲೈವನು ಯೋಜಿಸಿದಂತೆಯೇ ಎಲ್ಲವೂ ನಡೆಯಿತು. ಯುದ್ಧ ಭೂಮಿಯಿಂದ ತಪ್ಪಿಸಿಕೊಂಡ ಸಿರಾಜ್-ಉದ್-ದೌಲನನ್ನು ಸೆರೆಹಿಡಿದು ಕೊಲ್ಲಲಾಯಿತು

(ಮುಂದುವರಿಯುವುದು)

II PUC -PHYSICS

REVISION: MODEL QUESTIONS

14. Using Brewster's law, to show that reflected and refracted rays are mutually perpendicular to each other at Brewster's angle.

Ans:- (……..Contd)

When light is incident at polarising angle p on a refracting medium of refractive index μ, let r be the angle of refraction. Then, according to Snell's law,

$$\mu = \frac{\sin p}{\sin r} \quad \text{..............(2)}$$

From the equations (1) and (2), we have

$$\frac{\sin p}{\sin r} = \tan p$$

$$(\text{or}) \quad \frac{\sin p}{\sin r} = \frac{\sin p}{\cos p}$$

$$(\text{or}) \ \sin r = \cos p \quad (\text{or}) \ \sin r = \sin(90^\circ - p)$$

$$(\text{or}) \ r = 90^\circ - p \quad (\text{or}) \ r + p = 90^\circ$$

Now, angle of reflection i.e., $\angle NBC = p$, the angle of incidence. Since $r + p = 90^\circ$, it follows that $\angle CBD = 90^\circ$ i.e. reflected ray BC is perpendicular to refracted ray BD.


Hence, when a ray of light is incident at polarizing angle, the reflected ray is at right angle to the refracted ray.

15. When are the resistors said to be in parallel? Obtain an expression for effective resistance of three resistors in parallel.

Ans:-(a) Two or more resistors are said to be connected in parallel if one end of a resistor is connected to one end of the other resistor and the second end of the first resistor is connected to second end of the other resistor such that the potential difference across each resistor is equal to the applied potential difference across the combination.

b) Obtain an expression for effective resistance of three resistors in parallel –

Consider three resistors of resistances R_1, R_2 and R_3 respectively connected in parallel.



Let V be the potential difference across each resistor. The current I drawn from the cell divides into three parts(i.e., I_1, I_2 and I_3) at junction point A. Let current I_1, I_2 and I_3 flow through the resistors R_1, R_2 and R_3 respectively,

Then $I = I_1 + I_2 + I_3$

Here $I_1 = \frac{V}{R_1}, I_2 = \frac{V}{R_2}$ and $I_3 = \frac{V}{R_3}$

$$\therefore \ I = \frac{V}{R_1} + \frac{V}{R_2} + \frac{V}{R_3} = V\left(\frac{1}{R_1} + \frac{1}{R_2} + \frac{1}{R_3}\right)$$

If R_P is the effective or equivalent resistance of the parallel combination, then

$$I = \frac{V}{R_P}$$

Hence eqn.(ii) becomes $\frac{V}{R_P} = V\left(\frac{1}{R_1} + \frac{1}{R_2} + \frac{1}{R_3}\right)$


$$\therefore \ \frac{1}{R_P} = \frac{1}{R_1} + \frac{1}{R_2} + \frac{1}{R_3}$$

16. Derive an expression for impedance and current in LCR series circuit using phasor diagram.

Ans:- An expression for impedance and current in LCR series circuit using phasor diagram.

L, C AND R IN SERIES ACROSS AN ALTERNATING SUPPLY

A circuit containing inductor of pure inductance (L), capacitor of pure capacitance (C) and resistor of resistance, (R), all jointed in series across an a.c. supply, is shown in figure (a). Let V be the r.m.s. value of the applied alternating e.m.f. to the LCR circuit.



Phasor-diagram Solution of Series LCR circuit

Let I be the r.m.s. value of current flowing through all the circuit elements.

The potential difference across inductor, $V_L = I X_L$

This potential difference or voltage leads current I by an angle of $\pi/2$.


This potential difference across C, $V_C = I X_C$

This potential difference or voltage lags behind the current I by an angle of $\pi/2$.

This potential difference across R, $V_R = IR$

This potential difference or voltage is in phase with the current).

Since V_R and I are in phase, so V_R is represented by OA in the direction of I fig.



(Contd)

ಪೊಲೀಸರಿಂದ ಪ್ರಾಥಮಿಕ ತನಿಖೆ, ವಾರದೊಳಗೆ ಸಭೆ: ಸಚಿವ ಸತೀಶ ಜಾರಕಿಹೊಳಿ ಹೇಳಿಕೆ

‘ಫೈನಾನ್ಸ್ ಕಂಪನಿ ಹಾವಳಿ: ಸಿಐಡಿ ತನಿಖೆ ಸೂಕ್ತ’

ಪ್ರಜಾವಾಣಿ ವಾರ್ತೆ


ಬೆಳಗಾವಿ: ‘ಜಿಲ್ಲೆಯಲ್ಲಿ ಮೈಕ್ರೊ ಫೈನಾನ್ಸ್ ಕಂಪನಿಗಳ ಹಾವಳಿ ಪ್ರಕರಣ ದಿನಗಳು ಕಳೆದಂತೆ ಜಟಿಲವಾಗುತ್ತಿವೆ. ಇದರ ತನಿಖೆಯನ್ನು ಸಿಐಡಿಗೆ ವಹಿಸುವುದು ಸೂಕ್ತ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.



ಸತೀಶ ಜಾರಕಿಹೊಳಿ

‘ಗೋಕಾಕ, ಬೆಳಗಾವಿ, ಹುಕ್ಕೇರಿ, ಸವದತ್ತಿ, ಬೈಲಹೊಂಗಲ ಸೇರಿ ಜಿಲ್ಲೆಯ ವಿವಿಧೆಡೆ ಮೈಕ್ರೊ ಫೈನಾನ್ಸ್‌ನವರು ಜನರಿಗೆ ಕಿರುಕುಳ ಕೊಡುತ್ತಿರುವುದು ಗೊತ್ತಾಗಿದೆ. ಈ ಎಲ್ಲದರ ಬಗ್ಗೆ ಪೊಲೀಸರು ಪ್ರಾಥಮಿಕ ತನಿಖೆ ನಡೆಸುತ್ತಿದ್ದು, ಇದಕ್ಕೆ ಪೂರಕವಾಗಿ ವಾರದೊಳಗೆ ಸಭೆಯನ್ನೂ ಮಾಡಲಾಗುವುದು’ ಎಂದು ಅವರು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

‘ಮೈಕ್ರೊ ಫೈನಾನ್ಸ್‌ನವರು ಜನರಿಗೆ ತೊಂದರೆ ಕೊಟ್ಟರೆ, ಪ್ರಕರಣ ದಾಖಲಿಸುವ ಬಗ್ಗೆ ಮುಖ್ಯಮಂತ್ರಿಯವರು ಎಚ್ಚರಿಕೆ ಕೊಟ್ಟಿದ್ದಾರೆ. ಕಿರುಕುಳ, ಅನ್ಯಾಯದ ಬಗ್ಗೆ ಜನರು ಪೊಲೀಸ್ ಠಾಣೆಗೆ ದೂರು ನೀಡಬೇಕು’ ಎಂದು ಅವರು ತಿಳಿಸಿದರು.



ಸುಗ್ರೀವಾಜ್ಞೆಯಿಂದ ಪ್ರಯೋಜನ ಆಗದು. ಕಂಪನಿಗಳ ನಿಯಂತ್ರಣಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್‌ನ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು

ಬಸವರಾಜ ಬೊಮ್ಮಾಯಿ, ಸಂಸದ

ಈ ಬಗ್ಗೆ 6 ತಿಂಗಳ ಹಿಂದೆಯೇ ಪೊಲೀಸ್ ಕಮಿಷನರ್‌ಗೆ ತಿಳಿಸಿದ್ದೆ. ಯಮಕನಮರಡಿಯಲ್ಲಿ ಮೈಕ್ರೊ ಫೈನಾನ್ಸ್ ಹಾವಳಿಗೆ ಕಡಿವಾಣ ಹಾಕಲು ಸೂಚಿಸಿದ್ದೆ

ಲಕ್ಷ್ಮೀ ಹೆಬ್ಬಾಳಕರ, ಸಚಿವೆ

ದೂರು ನೀಡಿದರೆ ಕಾನೂನು ಕ್ರಮ: ಸಿ.ಎಂ

ಬೆಂಗಳೂರು: ‘ಖಾಸಗಿ ಹಣಕಾಸು ಸಂಸ್ಥೆಗಳ ಕಿರುಕುಳ ಹೆಚ್ಚುತ್ತಿದ್ದು, ಅಂಥವರ ವಿರುದ್ಧ ಜನರು ದೂರು ನೀಡಿದರೆ ತಕ್ಷಣ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.



ಸಿದ್ದರಾಮಯ್ಯ

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಮೈಕ್ರೊ ಫೈನಾನ್ಸ್ ಕಂಪನಿಗಳು ಅಥವಾ ಲೇವಾದೇವಿಗಾರರು ನೀಡುವ ತೊಂದರೆಗಳ ವಿರುದ್ಧ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ತೆರೆಯಲಾದ ಸಹಾಯವಾಣಿಗೆ ದೂರು ನೀಡಬಹುದು’ ಎಂದರು.

ಕೇಂದ್ರಕ್ಕೆ ಪತ್ರ: ‘ಅನುದಾನ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇನೆ. ಪ್ರಧಾನಿ ಮೋದಿ, ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್ ಮತ್ತು ವಿ. ಸೋಮಣ್ಣ ಅವರಿಗೆ ಈ ಬಗ್ಗೆ ಪತ್ರ ಬರೆದಿದ್ದೇನೆ’ ಎಂದು ತಿಳಿಸಿದರು.

ದೋಸೆ ತಿಂದ ಸಿಎಂ: ಭಾನುವಾರ ಬೆಳಿಗ್ಗೆ ಶಿವಾನಂದ ವೃತ್ತದಲ್ಲಿರುವ ಜನಾರ್ದನ ಹೋಟೆಲ್‌ನಲ್ಲಿ ಮುಖ್ಯಮಂತ್ರಿ ದೋಸೆ ತಿಂದರು. ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿಗಳಾದ ಕೆ. ಗೋವಿಂದರಾಜು, ನಜೀರ್ ಅಹಮ್ಮದ್, ಮಾಜಿ ಸಚಿವ ಎಚ್.ಎಂ. ರೇವಣ್ಣ ಜೊತೆಗಿದ್ದರು.

‘ಜಿಲ್ಲೆಯಲ್ಲಿ ಆರ್‌ಬಿಐ ಅಧಿಕಾರಿಗಳು ಇಲ್ಲ’

ಹಾವೇರಿ: ‘ಜಿಲ್ಲೆಯಲ್ಲಿ ಮೈಕ್ರೊ ಫೈನಾನ್ಸ್ ಕಂಪನಿಗಳಿಂದ ಜನರು ಕಿರುಕುಳ ಅನುಭವಿಸುತ್ತಿರುವ ಪ್ರಕರಣಗಳು ವರದಿಯಾಗುತ್ತಿವೆ. ಇಂಥ ಕಂಪನಿಗಳನ್ನು ನಿಯಂತ್ರಿಸಲು ಭಾರತೀಯ ರಿಸರ್ವ್ ಬ್ಯಾಂಕ್ ಅಧಿಕಾರಿಗಳು ಜಿಲ್ಲೆಯಲ್ಲಿಲ್ಲ. ಈ ಬಗ್ಗೆ ಸಂಸದರನ್ನು ಕೇಳಿ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಹೇಳಿದರು.

ಆರ್‌ಬಿಐ ರೂಪಿಸಿದ ನಿಯಮಗಳ ಅನ್ವಯ ಮೈಕ್ರೊ ಫೈನಾನ್ಸ್ ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳ ಉಸ್ತುವಾರಿಗೆ ಆರ್‌ಬಿಐ ಅಧಿಕಾರಿ ಅಗತ್ಯವಿದೆ. ಇದು ಕೇಂದ್ರ ಸರ್ಕಾರದ ವಿಚಾರ’ ಎಂದು ಅವರು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

‘ಫೈನಾನ್ಸ್ ಕಂಪನಿಗಳಿಂದ ಜನರ ಹಕ್ಕುಗಳಿಗೆ ಧಕ್ಕೆಯಾದರೆ, ತಪ್ಪಿತಸ್ಥರ ವಿರುದ್ಧ ಪ್ರಕರಣ ದಾಖಲಿಸಿ ಕ್ರಮ ಜರುಗಿಸಲು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಸೂಚಿಸಲಾಗಿದೆ’ ಎಂದರು.

‘30ಕ್ಕೆ ಕರಡು ಪ್ರತಿ ಸಲ್ಲಿಕೆಗೆ ಪ್ರಯತ್ನ’

ಗದಗ: ‘ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಕಾಯ್ದೆ–2024 (ಕೆಪಿಐಡಿ ಅಧಿನಿಯಮ) ಮತ್ತು 2019ರ ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಕಾಯ್ದೆಗೆ (ಬಡ್ಸ್ ಆ್ಯಕ್ಟ್) ಇನ್ನಷ್ಟು ಬಲ ತುಂಬುವ ಅಗತ್ಯವಿದೆ’ ಎಂದು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

‘ಕರಡು ಪ್ರತಿ ಸಿದ್ಧಪಡಿಸಲಾಗಿದ್ದು, ಪರಿಶೀಲಿಸಲು ಪೊಲೀಸ್ ಅಧಿಕಾರಿಗಳಿಗೆ ಕೊಡಲಾಗಿದೆ. ಮುಂದಿನ 3–4 ದಿನಗಳಲ್ಲಿ ಕಾನೂನಿನ ಸ್ವರೂಪ ಬರಲಿದ್ದು, ಜನವರಿ 30ರಂದು ಕರಡು ಪ್ರತಿಯನ್ನು ಸಚಿವ ಸಂಪುಟದಲ್ಲಿ ಮಂಡಿಸಲು ಪ್ರಯತ್ನಿಸಲಾಗುವುದು. ಗೃಹ ಸಚಿವ, ಕಂದಾಯ ಸಚಿವ ಹಾಗೂ ಉಪ ಮುಖ್ಯಮಂತ್ರಿ ಜತೆಗೆ ಸಮಾಲೋಚಿಸಲಾಗುವುದು ಎಂದರು.

ಫೈನಾನ್ಸ್ ಕಂಪನಿ ಒತ್ತಡ: ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ರೈತನ ವಿಡಿಯೊ

ಪ್ರಜಾವಾಣಿ ವಾರ್ತೆ

ಎಚ್.ಡಿ.ಕೋಟೆ (ಮೈಸೂರು ಜಿಲ್ಲೆ): ‘ಟ್ರ್ಯಾಕ್ಟರ್ ಸಾಲ ಪಾವತಿಸುವಂತೆ ಫೈನಾನ್ಸ್ ಕಂಪನಿ ನೀಡುತ್ತಿರುವ ಒತ್ತಡದಿಂದ ನೊಂದಿದ್ದು, ಆತ್ಮಹತ್ಯೆ ಮಾಡಿಕೊಳ್ಳಬೇಕಾಗುತ್ತದೆ’ ಎಂದು ತಾಲ್ಲೂಕಿನ ಎನ್.ಬೆಳತ್ತೂರು ಗ್ರಾಮದ ರೈತ ನಂಜಪ್ಪ ವಿಡಿಯೊ ಮಾಡಿದ್ದಾರೆ. ಅದು, ಭಾನುವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

‘ನಾನು ₹5 ಲಕ್ಷ ಟ್ರ್ಯಾಕ್ಟರ್ ಸಾಲ ಪಡೆದಿದ್ದು, ₹3 ಲಕ್ಷ ಮರುಪಾವತಿಸಿದ್ದೇನೆ. ಟ್ರ್ಯಾಕ್ಟರ್ ಕೆಟ್ಟುಹೋದ ಕಾರಣ, ರಿಪೇರಿಗೆ ಬಿಡಿಭಾಗ ಸಿಕ್ಕಿಲ್ಲ. ಪರಿಣಾಮ ಗ್ಯಾರೇಜ್‌ನಲ್ಲೇ ನಿಂತಿದೆ. ಇದರಲ್ಲಿ ಬಾಡಿಗೆ ಕೆಲಸ ಮಾಡಲಾಗದ ಕಾರಣ ವರಮಾನವಿಲ್ಲದೇ ಸಾಲ ಮರುಪಾವತಿಸಲಾಗಿಲ್ಲ. ಇದನ್ನು ಪರಿಗಣಿಸದ ಕಂಪನಿಯವರು ಟ್ರ್ಯಾಕ್ಟರ್ ವಶಪಡಿಸಿಕೊಂಡು, ತಮಿಳುನಾಡಿನ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸಿ ತೀವ್ರ ತೊಂದರೆ ನೀಡುತ್ತಿದ್ದಾರೆ’ ಎಂದು ನಂಜಪ್ಪ ದೂರಿದ್ದಾರೆ.

‘ಟ್ರ್ಯಾಕ್ಟರ್ ಹರಾಜಿಗೆ ಹಾಕಿ ಕಿರುಕುಳ ನೀಡುತ್ತಿರುವುದರಿಂದ ಬೇಸತ್ತಿದ್ದೇನೆ. ಈ ಸಮಸ್ಯೆ ಬಗೆಹರಿಯದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳದೆ ಬೇರೆ ದಾರಿ ಇಲ್ಲದಂತಾಗಿದೆ’ ಎಂದಿರುವುದು ವಿಡಿಯೊದಲ್ಲಿದೆ.

‘ಹಾವಳಿ ನಿಯಂತ್ರಿಸುವಲ್ಲಿ ಕೇಂದ್ರ ವಿಫಲ’

ಪ್ರಜಾವಾಣಿ ವಾರ್ತೆ

ಉಡುಪಿ: ‘ಮೈಕ್ರೋ ಫೈನಾನ್ಸ್ ಕಂಪನಿಗಳು ಆರ್‌ಬಿಐನ ಅಧೀನದಲ್ಲಿ ಬರುತ್ತಿದ್ದು, ಅವುಗಳನ್ನು ನಿಯಂತ್ರಿಸುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ‘ಈ ವಿಚಾರದಲ್ಲಿ ಕೇಂದ್ರ ಸರ್ಕಾರ ಎಚ್ಚರ ತಪ್ಪಿದೆ. ಈ ಕಾರಣಕ್ಕೆ ತಪ್ಪು ಕೆಲಸದ ವಿರುದ್ಧ ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಲು ಮುಂದಾಗಿದೆ’ ಎಂದು ಹೇಳಿದರು.

ಮೈಕ್ರೋ ಫೈನಾನ್ಸ್ ಕಂಪನಿಗಳು ಆರ್‌ಬಿಐ ನಿಯಮ ಉಲ್ಲಂಘಿಸುತ್ತಿವೆ. ಕಂಪನಿಗಳ ಪ್ರತಿನಿಧಿಗಳನ್ನು ಕರೆದು ಶಿಸ್ತು ಕ್ರಮದ ಸೂಚನೆಯನ್ನು ಮುಖ್ಯಮಂತ್ರಿ ನೀಡಿದ್ದಾರೆ. ನಿಯಮ ಉಲ್ಲಂಘನೆ ಮಾಡಿದರೆ ಪ್ರಕರಣ ದಾಖಲಿಸುತ್ತೇವೆ ಎಂದು ಅವರು ಎಚ್ಚರಿಕೆ ನೀಡಿರುವುದಾಗಿ ಕೃಷ್ಣ ಬೈರೇಗೌಡ ತಿಳಿಸಿದರು.

ತಾಯ್ನಾಡಿಗೆ ಮರಳಿದ ಶಿವಣ್ಣ



ಬೆಂಗಳೂರಿನ ತಮ್ಮ ನಿವಾಸದಲ್ಲಿ ಸುದ್ದಿಗಾರರೊಂದಿಗೆ ನಟ ಶಿವರಾಜ್‌ಕುಮಾರ್ ಮಾತನಾಡಿದರು. ಪತ್ನಿ ಗೀತಾ ಶಿವರಾಜ್‌ಕುಮಾರ್, ಶಿರಸಿ ಶಾಸಕ ಭೀಮಣ್ಣ ನಾಯ್ಕ್ ಉಪಸ್ಥಿತರಿದ್ದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂತ್ರಕೋಶ (ಬ್ಲಾಡರ್) ಕ್ಯಾನ್ಸರ್‌ನಿಂದ ಬಳಲುತ್ತಿದ್ದ ನಟ ಶಿವರಾಜ್‌ಕುಮಾರ್ ಅಮೆರಿಕದಲ್ಲಿ ಯಶಸ್ವಿಯಾಗಿ ಶಸ್ತ್ರ ಚಿಕಿತ್ಸೆ ಪೂರೈಸಿಕೊಂಡು ತಾಯ್ನಾಡಿಗೆ ಭಾನುವಾರ ಮರಳಿದರು.

ಬಳಿಕ ಹೆಬ್ಬಾಳದ ಸ್ವಗೃಹದಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಅವರು, ‘ಚಿಕಿತ್ಸೆಗೆ ಹೋಗುವಾಗ ಬಹಳ ಭಯವಿತ್ತು. ಆದರೆ ವೈದ್ಯರು, ಪತ್ನಿ ಗೀತಾ, ಕುಟುಂಬದವರು ಧೈರ್ಯ ತುಂಬಿದರು. ಶಸ್ತ್ರಚಿಕಿತ್ಸೆ ಯಶಸ್ವಿಯಾಗಿದ್ದು, ಈಗ ಆರಾಮವಾಗಿದ್ದೇನೆ. ‘ಕಿಂಗ್ ಈಸ್ ಬ್ಯಾಕ್’ ಎಂದು ಸಿನಿಮಾ ಶೈಲಿಯಲ್ಲಿಯೇ ಡೈಲಾಗ್ ಹೇಳಿದರು.

‘ಶಸ್ತ್ರ ಚಿಕಿತ್ಸೆ ಬಳಿಕ ಸಮಯ ತೆಗೆದುಕೊಂಡು ವಾಕಿಂಗ್ ಪ್ರಾರಂಭಿಸಿದೆ. ನಿಧಾನಕ್ಕೆ ಆರೋಗ್ಯ ಸರಿ ಹೋಯಿತು. ಗೀತಾ ಅಷ್ಟೂ ದಿನ ಜೊತೆಗಿದ್ದು ನನ್ನನ್ನು ತಾಯಿ ರೀತಿ ನೋಡಿಕೊಂಡಿದ್ದಾರೆ. ನಾನು ಅದೃಷ್ಟವಂತ ಅನಿಸುತ್ತಿದೆ. ಈಗ ತುಂಬಾ ಸ್ಟ್ರಾಂಗ್ ಆಗಿದ್ದೇನೆ. ಎಲ್ಲರ ಆಶೀರ್ವಾದ ನನಗೆ ಸಿಕ್ಕಿದೆ. ಕೆಲ ಸಮಯ ವಿಶ್ರಾಂತಿ ಪಡೆದು ಸಿನಿಮಾ ಚಟುವಟಿಕೆ ಪ್ರಾರಂಭಿಸುವೆ’ ಎಂದರು.

ವಿಮಾನ ನಿಲ್ದಾಣದ ಬಳಿಯೇ ಕುಟುಂಬ ವರ್ಗದವರು, ಆಪ್ತರು, ಅಭಿಮಾನಿಗಳು ಶಿವಣ್ಣ ಆಗಮನಕ್ಕಾಗಿ ಕಾದು ನಿಂತಿದ್ದರು. ಮಾರ್ಗ ಮಧ್ಯದಲ್ಲಿ ಅಭಿಮಾನಿಗಳು ಸೇಬಿನ ಹಾರ ಹಾಕಿ ಅವರನ್ನು ಸ್ವಾಗತಿಸಿದರು.

ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರೆಗೆ ಅದ್ದೂರಿ ಆರಂಭ

ಸುತ್ತೂರು ಜಾತ್ರೆಗೆ ಹರಿದುಬಂದ ಭಕ್ತರು

ಪ್ರಜಾವಾಣಿ ವಾರ್ತೆ

ಸುತ್ತೂರು (ಮೈಸೂರು ಜಿಲ್ಲೆ): ಸುತ್ತೂರು ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವಕ್ಕೆ ಭಾನುವಾರ ಅದ್ದೂರಿ ಚಾಲನೆ ದೊರೆಯಿತು.

ಎಲ್ಲರ ಮನೆ ಮುಂದೆಯೂ ರಂಗೋಲಿ ಸ್ವಾಗತ ನೀಡಲಾಗಿತ್ತು. ದಿನವಿಡೀ ಧಾರ್ಮಿಕ ಕಾರ್ಯಗಳು ನಡೆದವು. ಜಾತ್ರೆಗೆ ರಾಜ್ಯದ ವಿವಿಧೆಡೆಯಿಂದ ಹರಿದು ಬಂದಿದ್ದ ಭಕ್ತರು, ಕೃಷಿಮೇಳ, ವಸ್ತುಪ್ರದರ್ಶನದ ಅರಿವಿನ ಹೂರಣ ಸವಿದರು. ಚಿತ್ರಕಲಾ ಪ್ರದರ್ಶನ ಮೇಳವು ಈ ಬಾರಿಯ ವಿಶೇಷ.

ಗ್ರಾಮದ ಮಠದ ಆವರಣದಿಂದ ಶಿವರಾತ್ರೀಶ್ವರ ಶಿವಯೋಗಿಗಳ ಉತ್ಸವಮೂರ್ತಿಯನ್ನು ಜಾನಪದ ಕಲಾತಂಡಗಳೊಂದಿಗೆ ಕತೃಗದ್ದುಗೆಗೆ ಕರೆತರುವ ಮೂಲಕ ಸಂಜೆ ಜಾತ್ರಾ ಮಹೋತ್ಸವ ಆರಂಭವಾಯಿತು.

ವಸ್ತುಪ್ರದರ್ಶನಕ್ಕೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಚಾಲನೆ ನೀಡಿದರೆ, ಕೃಷಿಮೇಳ, ಆರೋಗ್ಯ ತಪಾಸಣಾ ಶಿಬಿರಕ್ಕೆ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ, ಸಾಂಸ್ಕೃತಿಕ ಮೇಳಕ್ಕೆ ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಉದ್ಘಾಟಿಸಿದರು. ದೋಣಿವಿಹಾರಕ್ಕೆ ‘ಸೆಸ್ಕ್’ ಅಧ್ಯಕ್ಷ ಎ.ಬಿ. ರಮೇಶ್ ಬಂಡಿಸಿದ್ದೇಗೌಡ ಚಾಲನೆ ನೀಡಿದರು.



ಮೈಸೂರು ಜಿಲ್ಲೆಯ ಸುತ್ತೂರಿನಲ್ಲಿ ಭಾನುವಾರ ಆರಂಭವಾದ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ‘ಪ್ರಸಾದ’ದೊಂದಿಗೆ ಬಡಿಸಲು ಖಾರಬೂಂದಿ ತಯಾರಿಯಲ್ಲಿ ಸ್ವಯಂಸೇವಕರು ತೊಡಗಿದ್ದರು

ಚಿತ್ರ: ವಾಟಾಳ್ ಆನಂದ್

ಕಡಿಮೆ ನೀರು, ಗೊಬ್ಬರ ಬಳಸಿ ವೈವಿಧ್ಯಮಯ ಬೆಳೆ ಬೆಳೆಯುವ ‘ಸುಸ್ಥಿರ ಕೃಷಿ’ ಮಾರ್ಗವನ್ನು ಕೃಷಿಮೇಳ ತೆರೆದಿಟ್ಟರೆ, ಮೀನು ಹಾಗೂ ಜೇನು ಕೃಷಿಯ ಬಗ್ಗೆಯೂ ‘ಕೃಷಿ ಬ್ರಹ್ಮಾಂಡ’ ಬೆಳಕು ಚೆಲ್ಲಿತು. 250ಕ್ಕೂ ಹೆಚ್ಚು ತರಕಾರಿ, ಸೊಪ್ಪು, ಹೂವು, ಕಿರುಧಾನ್ಯ, ಸುಗಂಧದ್ರವ್ಯ, ಔಷಧೀಯ ಹಾಗೂ ಚಿಯಾ, ಕಿನ್ವಾ ಮೊದಲಾದ ಬೆಳೆಗಳ ಪ್ರಾತ್ಯಕ್ಷಿಕೆ ಗಮನಸೆಳೆಯಿತು.

ನಿತ್ಯ ಸುಮಾರು ಮೂರೂವರೆ ಲಕ್ಷ ಮಂದಿಗೆ ದಾಸೋಹ ವ್ಯವಸ್ಥೆ ಮಾಡಲಾಗಿದ್ದು, ಸ್ವಯಂಸೇವಕರು, ಮಠ ಮತ್ತು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಸಿಬ್ಬಂದಿ ಹಾಗೂ ಭಕ್ತರು ವಿವಿಧ ಕೆಲಸಗಳಲ್ಲಿ ನಿರತರಾಗಿದ್ದರು.

ಕರ್ತೃ ಗದ್ದುಗೆ ಸಮೀಪ ನಡೆದ ಸಭಾ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಮಾತನಾಡಿ, ‘ಅಸಂಘಟಿತ ವಲಯದವರೊಂದಿಗೆ ಕೃಷಿ ಕಾರ್ಮಿಕರಿಗೂ ಇಎಸ್‌ಐ, ಇಪಿಎಫ್ ವ್ಯವಸ್ಥೆ ನೀಡಲು ಪ್ರಧಾನ ಮಂತ್ರಿ ಶ್ರಮ್ ಯೋಗಿ ಮಾನ್‌ಧನ್ ಯೋಜನೆ ಅನುಷ್ಠಾನಗೊಳಿಸಲಾಗಿದ್ದು, ಇ-ಶ್ರಮ್ ಕಾರ್ಡ್ ನೀಡಲಾಗುತ್ತಿದೆ. ದೇಶದ 55 ಕೋಟಿ ಜನರು ಈ ಸೌಲಭ್ಯದ ವ್ಯಾಪ್ತಿಗೆ ಬರಲಿದ್ದಾರೆ’ ಎಂದರು.

ಸಾಮೂಹಿಕ ವಿವಾಹ ಇಂದು

ಉಚಿತ ಸಾಮೂಹಿಕ ವಿವಾಹ ಸೋಮವಾರ ಬೆಳಿಗ್ಗೆ 10ಕ್ಕೆ ನಡೆಯಲಿದ್ದು, 24 ಅಂತರ್ಜಾತಿ, ಒಂದು ಅಂತರಧರ್ಮೀಯ ಸೇರಿದಂತೆ 155 ಜೋಡಿ ವೈವಾಹಿಕ ಜೀವನಕ್ಕೆ ಕಾಲಿಡಲಿದ್ದಾರೆ.

ವಧುವಿಗೆ ಸೀರೆ, ಕುಪ್ಪಸ, ಮಾಂಗಲ್ಯ ಹಾಗೂ ಕಾಲುಂಗುರ, ವರನಿಗೆ ಪಂಚೆ, ವಲ್ಲಿ, ಅಂಗಿ ನೀಡಲಾಗುತ್ತದೆ. ಉಡುಪಿ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಗದಗದ ವೀರೇಶ್ವರ ಪುಣ್ಯಾಶ್ರಮದ ಕಲ್ಲಯ್ಯಜ್ಜರ ಉಪಸ್ಥಿತಿ ಇರಲಿದೆ .

‘ಬದುಕಿದ್ದು ಪುನರ್ಜನ್ಮ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕಾರು ಅಪಘಾತದಲ್ಲಿ ಗಾಯಗೊಂಡು ಇಲ್ಲಿ ವಿಜಯಾ ಆಸ್ಪತ್ರೆಯಲ್ಲಿ 13 ದಿನಗಳಿಂದ ಚಿಕಿತ್ಸೆ ಪಡೆಯುತ್ತಿದ್ದ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಭಾನುವಾರ ಮನೆಗೆ ಮರಳಿದರು. ಅವರು ಕೊಂಚ ಚೇತರಿಸಿಕೊಂಡಿದ್ದಾರೆ.

‘ಈ ಅಪಘಾತದಲ್ಲಿ ಬದುಕಿ ಬಂದಿದ್ದರಿಂದ ನನಗೆ ಪುನರ್ಜನ್ಮ ಸಿಕ್ಕಂತಾಗಿದೆ. ವೈದ್ಯರು ಮೂರು ವಾರ ವಿಶ್ರಾಂತಿಗೆ ಸೂಚಿಸಿದ್ದಾರೆ. ಆದರೆ, ಸಚಿವೆಯಾದ ನನಗೆ ಹಲವು ಜವಾಬ್ದಾರಿ ಇವೆ. ಮಾರ್ಚ್‌ನಲ್ಲಿ ಬಜೆಟ್ ಮಂಡನೆ ಆಗಲಿದೆ. ವೈದ್ಯರ ಸಲಹೆಯಂತೆ ವಿಶ್ರಾಂತಿ ಪಡೆದು, ಸಾರ್ವಜನಿಕ ಜೀವನಕ್ಕೆ ಮರಳುವೆ’ ಎಂದು ಸುದ್ದಿಗಾರರಿಗೆ ತಿಳಿಸಿದರು.

‘ವೈದ್ಯರು ಹಾಗೂ ಸಿಬ್ಬಂದಿ ಉತ್ತಮ ಆರೈಕೆ ಮಾಡಿ, ಕಾಳಜಿ ತೋರಿದರು. ಧೈರ್ಯ ತುಂಬಿದರು. ಕಳೆದ 13 ದಿನ ಇದು ಆಸ್ಪತ್ರೆ ಎನ್ನುವುದಕ್ಕಿಂತ, ಮನೆಯಂತೆ ಭಾಸವಾಯಿತು. ಅವರ ಕಾಳಜಿಯಿಂದ ಗುಣಮುಖಳಾದೆ’ ಎಂದರು.

‘ಮಠಾಧೀಶರ ಆಶೀರ್ವಾದ ನನಗೆ ಶಕ್ತಿನೀಡಿತು.ಮುಖ್ಯಮಂತ್ರಿ,ಉಪಮುಖ್ಯಮಂತ್ರಿ, ಸಚಿವರು, ಶಾಸಕರು ಮತ್ತಿತರ ನಾಯಕರು ಆರೋಗ್ಯ ವಿಚಾರಿಸಿ ಧೈರ್ಯ ತುಂಬಿದರು. ನನ್ನ ಆರೋಗ್ಯ ಚೇತರಿಕೆಗೆ ಜನ ಪೂಜೆ ಸಲ್ಲಿಸಿದರು. ಎಲ್ಲರಿಗೂ ಕೃತಜ್ಞಳಾಗಿದ್ದೇನೆ’ ಎಂದು ಅವರು ತಿಳಿಸಿದರು. ತಮಗೆ ಚಿಕಿತ್ಸೆ ನೀಡಿದ ವಿಜಯಾ ಆಸ್ಪತ್ರೆ ಮುಖ್ಯಸ್ಥ ಡಾ.ರವಿ ಪಾಟೀಲ ಅವರಿಗೆ ಸಚಿವೆ ಪತ್ರ ಬರೆದು, ಕೃತಜ್ಞತೆ ಸಲ್ಲಿಸಿದ್ದಾರೆ.

‘ಕಲ್ಲು ಹೃದಯದವರಿಗೆ ಉತ್ತರ ಕೊಡಲ್ಲ’: ಅಪಘಾತದ ವೇಳೆ ತಾವು ಪ್ರಯಾಣಿಸುತ್ತಿದ್ದ ಕಾರಿನಲ್ಲಿ ಹಣವಿತ್ತು ಎಂಬ ಬಿಜೆಪಿ ನಾಯಕರ ಆರೋಪಕ್ಕೆ ಪ್ರತಿಕ್ರಿಯಿಸಿದ ಲಕ್ಷ್ಮೀ ಹೆಬ್ಬಾಳಕರ, ‘ಕಲ್ಲು ಹೃದಯದವರಿಗೆ ನಾನು ಉತ್ತರಿಸಲ್ಲ. ನೋವಿನಲ್ಲೂ ರಾಜಕೀಯ ಮಾಡುವವರಿಗೆ ಉತ್ತರ ಕೊಡುವ ಅಗತ್ಯವೂ ಇಲ್ಲ’ ಎಂದರು.

‘ಸಂಕ್ರಾಂತಿಯಂದು ಬೆಳಿಗ್ಗೆ 7ರ ಒಳಗೆ ಮಲಪ್ರಭಾ ನದಿಯಲ್ಲಿ ಪುಣ್ಯಸ್ನಾನ ಮಾಡಲು ಜ.13ರ ರಾತ್ರಿ 10ಕ್ಕೆ ನಿರ್ಧರಿಸಿ ಬೆಂಗಳೂರಿನಿಂದ ಹೊರಟೆವು. ಬೆಳಗಾವಿಯಿಂದ ಕುಟುಂಬವರೊಂದಿಗೆ ಹಿರೇಹಟ್ಟಿಹೊಳಿಗೆ ಹೋಗಲು ತೀರ್ಮಾನಿಸಿದ್ದೆವು. ಪ್ರವಾಸ ದಿಢೀರ್ ನಿಶ್ಚಯವಾಗಿದ್ದರಿಂದ ಬೆಂಗಾವಲು ಪಡೆ ತೆಗೆದುಕೊಂಡಿರಲಿಲ್ಲ’ ಎಂದರು.

‘ನನ್ನ ವಿರುದ್ಧ ಆರೋಪಿಸಿದವರಿಗೆ ಬುದ್ಧಿಭ್ರಮಣೆ ಆಗಿರಬೇಕು’ ಎಂದರು.



ಬೆಳಗಾವಿಯ ವಿಜಯಾ ಆಸ್ಪತ್ರೆಯಿಂದ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಮನೆಗೆ ಮರಳಿದರು

ಅಂಗೈನಲ್ಲೇ ಆನೆಗಳ ಚಲನವಲನ

ಒಂದನೇ ಪುಟದಿಂದ...

ಮುನ್ಸೂಚನೆ ಹೇಗೆ?: ಆನೆಗಳ ಹಾವಳಿ ನಿರಂತರವಾಗಿರುವ ಪ್ರದೇಶಗಳಲ್ಲಿ ಅಧ್ಯಯನ ನಡೆಸಿದ ತಂಡವು, ಬದಲಾಗಿರುವ ಆನೆಗಳ ಕಾರಿಡಾರ್‌ಗಳನ್ನು ಮೊದಲ ಹಂತದಲ್ಲಿ ಗುರುತಿಸಿದೆ. ನಿರಂತರವಾಗಿ ಹಾವಳಿ ಮಾಡುವ ಗ್ರಾಮಗಳು, ಜಮೀನುಗಳನ್ನು ಎರಡನೇ ಹಂತದಲ್ಲಿ ಪಟ್ಟಿ ಮಾಡಿಕೊಂಡಿದೆ. ಎಲ್ಲಿಂದ ಬಂದು ಎಲ್ಲಿಗೆ ಮರಳುತ್ತವೆ ಎನ್ನುವ ಸಂಪೂರ್ಣ ದಾರಿಗಳನ್ನು ಗುರುತಿಸಿದ ನಂತರ ಅಂತಹ ಸ್ಥಳಗಳಲ್ಲಿ ಅತ್ಯಾಧುನಿಕ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಿದೆ. ಆ ಮಾರ್ಗದಲ್ಲಿ ಆನೆಗಳು ಬಂದ ತಕ್ಷಣ ಆ ಸ್ಥಳದ ಹೆಸರು, ಎಷ್ಟು ಆನೆಗಳಿವೆ ಎಂಬ ಸಂದೇಶ ಆ್ಯಪ್ ಅಳವಡಿಸಿಕೊಂಡ ಎಲ್ಲರ ಮೊಬೈಲ್‌ಗೂ ರವಾನೆಯಾಗುತ್ತದೆ. ಆನೆಗಳು ಬರುತ್ತಿರುವ ಮುನ್ಸೂಚನೆ ಸಿಕ್ಕ ತಕ್ಷಣ ಸ್ಥಳೀಯರು ಜಾಗೃತರಾಗುತ್ತಾರೆ. ತಂಡವಾಗಿ ಅವುಗಳನ್ನು ಮರಳಿ ಕಾಡಿ ನತ್ತ ಓಡಿಸಲು ಸಿದ್ಧತೆ ಮಾಡಿಕೊಳ್ಳುತ್ತಾರೆ.

ಕರ್ನಾಟಕದಲ್ಲೂ ನಿಯಂತ್ರಣಕ್ಕೆ ಹರಸಾಹಸ: ಕರ್ನಾಟಕದ ಮಲೆನಾಡಿನ ಭಾಗದಲ್ಲೂ ಆನೆ–ಮಾನವ ಸಂಘರ್ಷ ತಡೆಗೆ ಮೊದಲು ಕಂದಕಗಳನ್ನು ನಿರ್ಮಿಸಲಾಗಿತ್ತು. ಆರಂಭದಲ್ಲಿ ಸ್ವಲ್ಪ ನಿಯಂತ್ರಣಕ್ಕೆ ಬಂದಿದ್ದ ಆನೆಗಳು ನಂತರ ಆ ಕಂದಕಗಳನ್ನೇ ದಾಟಿ ಬರುವ ಮಾರ್ಗವನ್ನೂ ಕಂಡುಕೊಂಡಿದ್ದವು. ನಂತರ ರೈಲ್ವೆ ಹಳಿಗಳ ಬ್ಯಾರಿಕೇಡ್ ಅಳವಡಿಸುವ ಕಾರ್ಯಕ್ಕೆ ಚಾಲನೆ ನೀಡಲಾಗಿತ್ತು.

ಅರಣ್ಯದಂಚಿನ ಗ್ರಾಮಗಳಲ್ಲಿ ಜೀವ ಮತ್ತು ಬೆಳೆ ಹಾನಿ ಉಂಟು ಮಾಡುತ್ತಿರುವ ಕಾಡಾನೆ– ಕಾಡೆಮ್ಮೆಗಳ ಹಾವಳಿತಡೆಗೆ ಪರ್ಯಾಯ ಮಾರ್ಗೋಪಾಯ ಗಳ ಬಗ್ಗೆ ಅಧ್ಯಯನ ನಡೆಸಲಾಗುತ್ತಿದೆ. ರೈಲ್ವೆ ಬ್ಯಾರಿಕೇಡ್ ಅಳವಡಿಕೆಗೆ ಪ್ರತಿ ಕಿ.ಮೀಗೆ ₹1.50 ಕೋಟಿ ವೆಚ್ಚವಾಗುತ್ತಿದೆ. ಅಗತ್ಯದಷ್ಟು ರೈಲ್ವೆ ಹಳಿಗಳೂ ಸಿಗುವುದಿಲ್ಲ. ತಮಿಳುನಾಡು ಅಳವಡಿಸಿರುವ ಉಕ್ಕಿನ ಹಗ್ಗದ ತಡೆಗಳಿಗೆ (ಸ್ಟೀಲ್ ರೋಪ್) ಪ್ರತಿ ಕಿ.ಮೀ ₹45 ಲಕ್ಷ ವೆಚ್ಚವಾಗುತ್ತದೆ. ಈ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಬೇಕು. ರಾಜ್ಯದಲ್ಲಿ ಈಗಾಗಲೇ 312 ಕಿ.ಮೀ ರೈಲ್ವೆ ಬ್ಯಾರಿಕೇಡ್ ಅಳವಡಿಸಲಾಗಿದೆ. ರೈಲ್ವೆ ಬ್ಯಾರಿಕೇಡ್ ಅಳವಡಿಕೆಗೆ ಮುನ್ನ ಮತ್ತು ಅಳವಡಿಕೆ ನಂತರದ ಜೀವಹಾನಿ ಮತ್ತು ಬೆಳೆಹಾನಿ ಕುರಿತು ತುಲನಾತ್ಮಕ ವರದಿ ಸಲ್ಲಿಸಬೇಕು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

(ಸಂಸ್ಥೆಯ ಆಹ್ವಾನದ ಮೇರೆಗೆ ಪ್ರತಿನಿಧಿಯು ಭೇಟಿ ನೀಡಿದ್ದರು)

ಮದ್ದೂರು: ರೇಣುಕಾ ಎಲ್ಲಮ್ಮ ದೇವಿ ಜಾತ್ರೆ ಫೆ.11ರಿಂದ

ಪ್ರಜಾವಾಣಿ ವಾರ್ತೆ

ಮದ್ದೂರು (ಮಂಡ್ಯ ಜಿಲ್ಲೆ): ಪಟ್ಟಣದ ಹೊಳೆ ಬೀದಿಯಲ್ಲಿರುವ ಚಿಕ್ಕಸವದತ್ತಿ ಕ್ಷೇತ್ರದ ರೇಣುಕಾ ಎಲ್ಲಮ್ಮ ದೇವಿಯವರ 53ನೇ ವರ್ಷದ ಜಾತ್ರಾ ಮಹೋತ್ಸವವು ಫೆ.11ರಿಂದ 13ರ ವರೆಗೆ ವಿಜೃಂಭಣೆಯಿಂದ ನಡೆಯಲಿದೆ.

ಫೆ.11ರ ಸಂಜೆ 6.30ಕ್ಕೆ ಮೂಲ ದೇವರಿಗೆ ಅನುಜ್ಞೆ ಹಾಗೂ ಗಣಪತಿ ಪೂಜೆ ಸಲ್ಲಿಸುವ ಮೂಲಕ ಜಾತ್ರಾ ಮಹೋತ್ಸವಕ್ಕೆ ಚಾಲನೆ ಸಿಗಲಿದ್ದು, ಕಳಶ ಪ್ರತಿಷ್ಠಾಪನೆ ನಡೆಯಲಿದೆ.

ಫೆ.12ರಂದು ಬೆಳಿಗ್ಗೆ 9ರಿಂದ 26ನೇ ವರ್ಷದ ಮಹಾಚಂಡಿಕಾ ಯಾಗ ನಡೆಯಲಿದ್ದು, ಮಧ್ಯಾಹ್ನ 12.45ಕ್ಕೆ ಮಹಾಪೂರ್ಣಾಹುತಿ ಜರುಗಲಿದೆ. ನಂತರ ಮುತ್ತೈದೆಯರಿಂದ ತಂಬಿಟ್ಟಿನ ಆರತಿ ಏರ್ಪಡಿಸಲಾಗಿದ್ದು, ಅನ್ನಸಂತರ್ಪಣೆ ನಡೆಯಲಿದೆ.



ಮದ್ದೂರಿನ ರೇಣುಕಾ ಎಲ್ಲಮ್ಮ ದೇವಿ

ಸಂಜೆ 4.15ರಿಂದ ಸಂಜೆ 5.30ರವರೆಗೆ ನಿಂಬೆಹಣ್ಣಿನ ದೀಪದ ಆರತಿ ಮತ್ತು ಉಯ್ಯಾಲೋತ್ಸವವನ್ನು ದೇವಸ್ಥಾನದ ಟ್ರಸ್ಟ್ ವತಿಯಿಂದ ಏರ್ಪಡಿಸಲಾಗಿದೆ. ರಾತ್ರಿ 7ಕ್ಕೆ ಹೊಳೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಆರಂಭಿಸಿ ರೇಣುಕಾ ದೇವಿಯ ಮುತ್ತಿನ ಪಲ್ಲಕ್ಕಿ ಉತ್ಸವ ನಡೆಯಲಿದೆ.

ಈ ವೇಳೆ ತಿರುಪತಿ ತಿರುಮಲ ದೇವಸ್ಥಾನದ ಮಂಜು ಬಾಲಾಜಿ ಅವರ ವಾದ್ಯಗೋಷ್ಠಿ, ಮಂಗಳೂರಿನ ಯಕ್ಷಗಾನ, ಕೇರಳದ ಚಂಡೆ ಮೇಳ, ತಮಿಳುನಾಡಿನ ಬ್ಯಾಂಡ್‌ಸೆಟ್ ಸೇರಿದಂತೆ ಮದ್ದೂರಮ್ಮನ ಪೂಜಾ ಕುಣಿತ, ದಂಡಿನಮಾರಮ್ಮನ ಪೂಜಾ ಕುಣಿತ, ಕಲಾವಿದರಿಂದ ತಮಟೆ, ನಗಾರಿ, ಜಾನಪದ ಮೇಳ ಮೆರವಣಿಗೆಗೆ ಮೆರುಗು ನೀಡಲಿವೆ.

ಫೆ.13ರ ಬೆಳಿಗ್ಗೆ 6ಕ್ಕೆ ರೇಣುಕಾ ದೇವಿಯು ದೇವಸ್ಥಾನದ ಮೂಲಸ್ಥಾನ ತಲುಪಲಿದ್ದು, ಭಕ್ತರು ದೇವಿಯ ದರ್ಶನ ಪಡೆಯಬೇಕೆಂದು ದೇವಸ್ಥಾನದ ಕಾರ್ಯದರ್ಶಿ ಶ್ರೀನಿವಾಸ್ ತಿಳಿಸಿದ್ದಾರೆ.

ಮುಖ್ಯಮಂತ್ರಿ ಸ್ವಕ್ಷೇತ್ರದ ಚೋರನಹಳ್ಳಿಯಲ್ಲಿ ಉದ್ಘಾಟನೆಗೆ ಸಿದ್ಧತೆ

ಮೈಸೂರಲ್ಲಿ ಬಹುಕೌಶಲ ಅಭಿವೃದ್ಧಿ ಕೇಂದ್ರ

• ಎಂ. ಮಹೇಶ್

ಮೈಸೂರು: ಔದ್ಯೋಗಿಕ ಜಗತ್ತಿನ ಅಗತ್ಯಗಳಿಗೆ ತಕ್ಕಂತೆ ಯುವಜನರಿಗೆ ಕೌಶಲಗಳ ತರಬೇತಿ ನೀಡುವ ಉದ್ದೇಶದಿಂದ ತಾಲ್ಲೂಕಿನ ಚೋರನ ಹಳ್ಳಿಯಲ್ಲಿ ‘ಬಹು ಕೌಶಲ ಅಭಿವೃದ್ಧಿ ಕೇಂದ್ರ’ (ಎಂಎಸ್‌ಡಿಸಿ) ಸ್ಥಾಪಿಸಲಾಗಿದ್ದು, ಉದ್ಘಾಟನೆಗೆ ಸಜ್ಜಾಗುತ್ತಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿನಿಧಿಸುವ ವರುಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ರಾಜ್ಯ ಕೌಶಲ ಅಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಿಂದ ಕೇಂದ್ರವನ್ನು ನಡೆಸಲಾಗುವುದು. ತರಬೇತಿ ಕಾರ್ಯಕ್ರಮಗಳಿಗೆ ಅಗತ್ಯವಾದ ಉಪಕರಣಗಳನ್ನು ಅಳವಡಿಸಲಾಗುತ್ತಿದೆ. ₹135 ಕೋಟಿ ವೆಚ್ಚದಲ್ಲಿ ಕಟ್ಟಡವನ್ನು ನಿರ್ಮಿಸಲಾಗಿದ್ದು, ಮುಖ್ಯಮಂತ್ರಿಯಿಂದಲೇ ಉದ್ಘಾಟನೆ ನೆರವೇರಿಸಲು ಯೋಜಿಸಲಾಗಿದೆ.

ಪದವಿ ಮೊದಲಾದ ಶೈಕ್ಷಣಿಕ ಅರ್ಹತೆಗಳಿದ್ದರೂ ಹಲವರಿಗೆ ಕೌಶಲಗಳಿಲ್ಲದೆ ಉದ್ಯೋಗ ಸಿಗುವುದಿಲ್ಲ. ಈ ಕೊರತೆಯನ್ನು ನೀಗಿಸಲೆಂದೇ ಒಂದೇ ಸೂರಿನಡಿ ಬಹುಕೌಶಲದ ತರಬೇತಿ ನೀಡಲು ಕೇಂದ್ರ ಸ್ಥಾಪಿಸಲಾಗುತ್ತಿದ್ದು, ಸಾವಿರಾರು ಮಂದಿಗೆ ಪ್ರಯೋಜನ ಆಗುವ ನಿರೀಕ್ಷೆ ಇದೆ. ಇದು ‘ಕಾವು ಗೂಡು’ (ಇನ್‌ಕ್ಯುಬೇಷನ್ ಸೆಂಟರ್) ರೀತಿ ಕಾರ್ಯನಿರ್ವಹಿಸಲಿದೆ.

ಮುಖ್ಯಾಂಶಗಳು

- ₹ 135 ಕೋಟಿ ವೆಚ್ಚದಲ್ಲಿ ಕಟ್ಟಡ ನಿರ್ಮಾಣ
- ಕೌಶಲವುಳ್ಳ ಮಾನವ ಸಂಪನ್ಮೂಲ ತಯಾರಿಗೆ ಕ್ರಮ
- ಕೌಶಲ ಅಭಿವೃದ್ಧಿ ಇಲಾಖೆಯಿಂದ ಯೋಜನೆ

ಈ ಕೇಂದ್ರದಲ್ಲಿ ಉದ್ಯೋಗದಾತರು ಅಥವಾ ಉದ್ಯಮದ ಪರಿಣತರ ಅನುಭವವನ್ನೂ ಬಳಸಿಕೊಳ್ಳಲು ಯೋಜಿಸಲಾಗಿದೆ

ಎನ್.ನಾರಾಯಣಮೂರ್ತಿ ಜಿಲ್ಲಾ ಕೌಶಲಾಭಿವೃದ್ಧಿ ಅಧಿಕಾರಿ, ಮೈಸೂರು

8ನೇ ತರಗತಿಯಿಂದ ಪದವಿಯವರೆಗೆ: ‘ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವ ವಿದ್ಯಾಲಯದ(ವಿಟಿಯು) ಕಟ್ಟಡವನ್ನು ಇಲಾಖೆಗೆ ಒದಗಿಸಲಾಗಿದೆ. ತರಬೇತಿಯನ್ನು ಮೈಸೂರಿನ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ) ಮತ್ತು ವಿಟಿಯು ಸಹಯೋಗದಲ್ಲಿ ಒದಗಿಸಲಾಗುತ್ತದೆ.



ಮೈಸೂರು ತಾಲ್ಲೂಕು ವರುಣ ಹೋಬಳಿಯ ಚೋರನಹಳ್ಳಿಯಲ್ಲಿ ನಿರ್ಮಿಸಿರುವ ‘ಬಹು ಕೌಶಲ ಅಭಿವೃದ್ಧಿ ಕೇಂದ್ರ’

8ನೇ ತರಗತಿಯಿಂದ ಪದವಿವರೆಗೆ ವ್ಯಾಸಂಗ ಮಾಡಿದವರೆಲ್ಲರೂ ತರಬೇತಿ ಪಡೆಯಬಹುದು. ಉದ್ಘಾಟನೆ ಬಳಿಕ ಅಭ್ಯರ್ಥಿಗಳ ದಾಖಲಾತಿ ಶುರುವಾಗಲಿದೆ’ ಎಂದು ಜಿಲ್ಲಾ ಕೌಶಲಾಭಿವೃದ್ಧಿ ಅಧಿಕಾರಿ ಎನ್. ನಾರಾಯಣಮೂರ್ತಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಖಾಸಗಿ ಕೈಗಾರಿಕೆ ಅಥವಾ ಉದ್ಯಮಗಳಲ್ಲಿ ಉದ್ಯೋಗ ಪಡೆದುಕೊಳ್ಳಲು ಅನುವಾಗುವಂತೆ ಕೌಶಲಗಳನ್ನು ಕಲಿಸಲಾಗುವುದು. ಏವಿಯೇಷನ್ ಟೆಕ್ನಾಲಜಿ, ಸಾಫ್ಟ್‌ವೇರ್ ಟೆಕ್ನಾಲಜಿ ಮೊದಲಾದ ‘ಭವಿಷ್ಯದ ಕೌಶಲಗಳ’ ಬಗ್ಗೆ ತಿಳಿಸಿಕೊಡಲಾಗುತ್ತದೆ’ ಎಂದು ಮಾಹಿತಿ ನೀಡಿದರು.

‘ಕೇಂದ್ರಕ್ಕೆ ದಾಖಲಾದವರಿಗೆ ಉದ್ಯೋಗ ಖಚಿತವಾಗಿ ಸಿಗುವ ರೀತಿಯಲ್ಲಿ ತರಬೇತಿ ನೀಡಲಾಗುವುದು. ತರಬೇತುದಾರರನ್ನು ರೂಪಿಸುವ ಕಾರ್ಯವೂ ನಡೆಯಲಿದೆ. ಅಭ್ಯರ್ಥಿಗಳ ವಿದ್ಯಾರ್ಹತೆ ಹಾಗೂ ಆಸಕ್ತಿಗೆ ತಕ್ಕಂತೆ ತರಬೇತಿ ಪಡೆಯಬಹುದು. ಖಾಸಗಿ ಕಂಪನಿಗಳೂ ತರಬೇತಿ ಕೊಟ್ಟು, ಉದ್ಯೋಗಕ್ಕೆ ಆಯ್ಕೆಯನ್ನೂ ಮಾಡಿಕೊಳ್ಳುತ್ತಾರೆ’ ಎಂದು ತಿಳಿಸಿದರು.

‘ರಾಜ್ಯದ ಯಾರು ಬೇಕಾದರೂ ಕೇಂದ್ರದಲ್ಲಿ ತರಬೇತಿ ಪಡೆಯಬಹುದು. ಅತ್ಯಾಧುನಿಕ ಕೇಂದ್ರ ಇದಾಗಲಿದ್ದು, ತರಬೇತಿಗೆ ಬರುವವರಿಗೆ ಹಾಗೂ ತರಬೇತುದಾರರಿಗೆ ಉಚಿತ ಊಟ ಹಾಗೂ ವಸತಿ ನೀಡಲಾಗುವುದು. ಕುಡಿಯುವ ನೀರು, ವಿದ್ಯುತ್ ವ್ಯವಸ್ಥೆ ಕಲ್ಪಿಸಲಾಗಿದೆ. ಇದು ರಾಜ್ಯದಲ್ಲೇ ಮೊದಲ ತರಬೇತಿ ಕೇಂದ್ರವಾಗಲಿದೆ’ ಎಂದರು.

ವೆಲ್ಡಿಂಗ್, ಪ್ಲಂಬಿಂಗ್, ಮರಗೆಲಸ, ಎಲೆಕ್ಟ್ರೀಷಿಯನ್, ಎಲೆಕ್ಟ್ರಾನಿಕ್ಸ್, ಆಟೊಮೊಬೈಲ್ಸ್, ಕಂಪ್ಯೂಟರ್ ತರಬೇತಿ, ಚಿನ್ನಾಭರಣ ತಯಾರಿಕೆ, ಆಟಿಕೆಗಳನ್ನು ಸಿದ್ಧಪಡಿಸುವುದು, ವಾಹನ ರಿಪೇರಿ, ಹೊಲಿಗೆ ಸೇರಿದಂತೆ ಹಲವು ಕೌಶಲ ತರಬೇತಿ ದೊರೆಯಲಿವೆ. ತರಬೇತಿಯ ರೂಪರೇಷೆ ಸಿದ್ಧಪಡಿಸುವ ಪ್ರಕ್ರಿಯೆ ನಡೆದಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಬಯಸಿದ್ದೆಲ್ಲಾ ಸಿಗುವಂತಿದ್ದರೆ ಬಯಕೆಗೆ ಬೆಲೆ ಇರುತ್ತಿರಲಿಲ್ಲ. ಅನಿಸಿದ್ದೆಲ್ಲಾ ಹೇಳುವಂತಿದ್ದರೆ ಮೌನಕ್ಕೆ ಅರ್ಥ ಇರುತ್ತಿರಲಿಲ್ಲ.

– ಶಿವಕುಮಾರ ಸ್ವಾಮೀಜಿ

ಡಬ್ಲ್ಯುಎಚ್‌ಒ: ಹಣಕಾಸು ಕೊರತೆಯಾದರೆ ಜಗತ್ತಿನ ಆರೋಗ್ಯದ ಮೇಲೆ ದುಷ್ಪರಿಣಾಮ

ವಿಶ್ವ ಆರೋಗ್ಯ ಸಂಸ್ಥೆಯಿಂದ (ಡಬ್ಲ್ಯುಎಚ್‌ಒ) ಹೊರಬರುವ ನಿರ್ಧಾರವನ್ನು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರಕಟಿಸಿದ್ದಾರೆ. ಇದು ಸಂಸ್ಥೆಗೆ ಬಿದ್ದ ಗಂಭೀರವಾದ ಹೊಡೆತವಾಗಿದೆ. ಅಮೆರಿಕವೂ ಸೇರಿದಂತೆ ಎಲ್ಲ ದೇಶಗಳ ಆರೋಗ್ಯ ಸ್ಥಿತಿಯ ಮೇಲೆ ಇದು ಪ್ರತಿಕೂಲ ಪರಿಣಾಮವನ್ನು ಬೀರಲಿದೆ. ಟ್ರಂಪ್ ಅವರ ಈ ನಿರ್ಧಾರವು ನಿರೀಕ್ಷಿತ. ಡಬ್ಲ್ಯುಎಚ್‌ಒದಿಂದ ಹೊರಕ್ಕೆ ಬರುವ ಪ್ರಕ್ರಿಯೆಯನ್ನು ಟ್ರಂಪ್ ಅವರು ಮೊದಲ ಅವಧಿಗೆ ಅಧ್ಯಕ್ಷರಾಗಿದ್ದಾಗಲೇ ಆರಂಭಿಸಿದ್ದರು. ಜೋ ಬೈಡನ್ ಅಧ್ಯಕ್ಷರಾದ ಬಳಿಕ ಈ ನಿರ್ಧಾರವನ್ನು ಬದಲಿಸಿದ್ದರು. ಡಬ್ಲ್ಯುಎಚ್‌ಒಗೆ ಇನ್ನು ಮುಂದೆ ಅಮೆರಿಕ ಸರ್ಕಾರದಿಂದ ಯಾವುದೇ ದೇಣಿಗೆ ಇರುವುದಿಲ್ಲ. ಹಾಗೆಯೇ ಒಂದು ವರ್ಷದೊಳಗೆ ಸಂಬಂಧವನ್ನು ಸಂಪೂರ್ಣವಾಗಿ ಅಮೆರಿಕ ಕಡಿದುಕೊಳ್ಳಲಿದೆ. 'ಅಮೆರಿಕಕ್ಕೆ ಡಬ್ಲ್ಯುಎಚ್‌ಒ ವಂಚನೆ ಮಾಡಿದೆ, ಕೋವಿಡ್ ಸಾಂಕ್ರಾಮಿಕ ಮತ್ತು ಇತರ ಆರೋಗ್ಯ ಬಿಕ್ಕಟ್ಟುಗಳನ್ನು ಸರಿಯಾಗಿ ನಿಭಾಯಿಸಿಲ್ಲ, ಸುಧಾರಣೆಗಳನ್ನು ಜಾರಿಗೆ ತರುವಲ್ಲಿ ವಿಫಲವಾಗಿದೆ, ಸ್ವಾಯತ್ತವಾಗಿಲ್ಲ ಮತ್ತು ಚೀನಾದ ಪರವಾಗಿ ಇದೆ' ಎಂಬ ಆರೋಪಗಳನ್ನು ಟ್ರಂಪ್ ಮಾಡಿದ್ದಾರೆ. ವಿಶ್ವ ಆರೋಗ್ಯ ಸಂಸ್ಥೆಗೆ ಅತಿಹೆಚ್ಚು ದೇಣಿಗೆ ನೀಡುತ್ತಿದ್ದ ದೇಶ ಅಮೆರಿಕ. ಈ ಸಂಸ್ಥೆಯು ಪಡೆಯುತ್ತಿದ್ದ ಒಟ್ಟು ದೇಣಿಗೆಯಲ್ಲಿ ಐದನೇ ಒಂದು ಭಾಗವನ್ನು ಅಮೆರಿಕ ಪಾವತಿಸುತ್ತಿತ್ತು. ಈ ಮೊತ್ತ ನಿಂತುಹೋದರೆ ಸಂಸ್ಥೆಯ ಕಾರ್ಯಚಟುವಟಿಕೆಗಳಿಗೆ ದೊಡ್ಡ ಹೊಡೆತ ಬೀಳುತ್ತದೆ.



ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯಚಟುವಟಿಕೆಗಳು ಕುಂಠಿತವಾದರೆ ಅದರಿಂದ ಇಡೀ ಜಗತ್ತು ಸಂಕಷ್ಟಕ್ಕೆ ಈಡಾಗಬೇಕಾಗುತ್ತದೆ

ಜಗತ್ತಿನಲ್ಲಿ ನಡೆಯುವ ಅನಾರೋಗ್ಯ ತಡೆ ಚಟುವಟಿಕೆಗಳಿಗೆ ಡಬ್ಲ್ಯುಎಚ್‌ಒ ಮಾರ್ಗದರ್ಶಿಯಾಗಿದೆ. ಮಲೇರಿಯಾ, ಎಚ್‌ಐವಿ, ಕ್ಷಯ ಮತ್ತು ಇತರ ಸೋಂಕುಗಳ ತಡೆಗೆ ಬೇಕಾದ ಕಾರ್ಯಕ್ರಮಗಳನ್ನು ರೂಪಿಸಿ, ಅನುಷ್ಠಾನಕ್ಕೆ ಬೆಂಬಲ ನೀಡುವ ಕೆಲಸವನ್ನು ಡಬ್ಲ್ಯುಎಚ್‌ಒ ಮಾಡುತ್ತದೆ. ಸಾಂಕ್ರಾಮಿಕಗಳ ಮೇಲೆ ನಿಗಾ ಇರಿಸಿ, ಅವು ಹರಡುವುದನ್ನು ತಡೆಯುವ ಕಾರ್ಯತಂತ್ರಗಳನ್ನು ರೂಪಿಸಿ, ಎಲ್ಲ ದೇಶಗಳಿಗೆ ಮುನ್ನೆಚ್ಚರಿಕೆ ನೀಡುವ ಕೆಲಸವನ್ನು ಮಾಡುತ್ತದೆ. ಲಸಿಕೆ ಕಾರ್ಯಕ್ರಮಗಳನ್ನು ಯೋಜಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಬಡ ಮತ್ತು ಹಿಂದುಳಿದ ದೇಶಗಳಿಗೆ ಲಸಿಕೆ ಮತ್ತು ಜೀವರಕ್ಷಕ ಔಷಧಗಳು ಲಭ್ಯವಾಗುವುದನ್ನು ಖಾತರಿಪಡಿಸುತ್ತದೆ. ಆರೋಗ್ಯಕ್ಕೆ ಸಂಬಂಧಿಸಿದ ಎಲ್ಲ ರೀತಿಯ ವಿಚಾರಗಳಲ್ಲಿ ಅಧ್ಯಯನಗಳು ಮತ್ತು ಸಂಶೋಧನೆಗಳನ್ನು ನಡೆಸಿ ಅದರ ಫಲಿತಾಂಶಗಳನ್ನು ಸರ್ಕಾರಗಳು ಮತ್ತು ಆರೋಗ್ಯ ಸಂಸ್ಥೆಗಳ ಜೊತೆ ಹಂಚಿಕೊಳ್ಳುತ್ತದೆ. ತಳಮಟ್ಟದಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಇದರಿಂದಾಗಿ ಸಾಧ್ಯವಾಗುತ್ತದೆ. ಈ ಸಂಸ್ಥೆ ಕೈಗೊಂಡ ಕ್ರಮಗಳೇ ಸಿಡುಬು ನಿರ್ಮೂಲನೆಗೆ ಕಾರಣವಾಗಿವೆ. ಜಗತ್ತಿನ ಬಹುಭಾಗವು ಪೋಲಿಯೊ ಮುಕ್ತವಾಗಿದ್ದರಲ್ಲಿ ಡಬ್ಲ್ಯುಎಚ್‌ಒ ಪಾತ್ರ ಮಹತ್ವವಾದುದು. ಏಡ್ಸ್ ಸಂಬಂಧಿ ಸಾವು ಶೇ 70ರಷ್ಟು ಇಳಿಕೆಯಾಗಿದೆ. ಡಬ್ಲ್ಯುಎಚ್‌ಒ ಹೊಂದಿರುವ ಮಾಹಿತಿ, ಪರಿಣತಿ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಎಲ್ಲ ಸಂಸ್ಥೆಗಳ ಜೊತೆಗಿನ ಸಂಪರ್ಕವು ಈ ಸಂಸ್ಥೆಗೆ ಮಹತ್ವದ ಸ್ಥಾನವನ್ನು ಒದಗಿಸಿದೆ. ಆರೋಗ್ಯಕ್ಕೆ ಸಂಬಂಧಿಸಿದ ಎಲ್ಲ ಚಟುವಟಿಕೆಗಳಲ್ಲಿ ಈ ಸಂಸ್ಥೆಯ ಪಾತ್ರ ಮಹತ್ವದ್ದಾಗಿದೆ.

ಜಗತ್ತಿನ ದೇಶಗಳೆಲ್ಲವೂ ಪರಸ್ಪರ ಬೆಸೆದುಕೊಂಡಿವೆ. ಜನರು ಒಂದೆಡೆಯಿಂದ ಇನ್ನೊಂದೆಡೆಗೆ ಹೋಗುತ್ತಲೇ ಇರುತ್ತಾರೆ. ಈ ಜನರ ಜೊತೆಗೆ ರೋಗಗಳು ಮತ್ತು ಸೋಂಕುಗಳು ಕೂಡ ಸಂಚರಿಸುತ್ತವೆ. ಹಾಗಾಗಿಯೇ ಜಾಗತಿಕ ಮಟ್ಟದಲ್ಲಿ ಆರೋಗ್ಯ ಚಟುವಟಿಕೆಗಳಿಗೆ ಮಾರ್ಗದರ್ಶನ ಮಾಡಲು ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯೊಂದರ ಅಗತ್ಯ ಇದೆ. 194 ದೇಶಗಳ ಸದಸ್ಯತ್ವ ಹೊಂದಿರುವ ಡಬ್ಲ್ಯುಎಚ್‌ಒ ಎಲ್ಲ ದೇಶಗಳಲ್ಲಿಯೂ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿದೆ. ತನ್ನ ಪಾತ್ರವನ್ನು ಪರಿಣಾಮಕಾರಿಯಾಗಿಯೇ ನಿಭಾಯಿಸಿದೆ. ಪ್ರತಿಯೊಬ್ಬರ ಸುರಕ್ಷತೆಯನ್ನು ಖಾತರಿಪಡಿಸುವವರೆಗೆ ಯಾರೊಬ್ಬರೂ ಸುರಕ್ಷಿತರಲ್ಲ ಎಂಬ ಮಾತು ಹಿಂದೆಂದಿಗಿಂತಲೂ ಈಗಿನ ಕಾಲಕ್ಕೆ ಹೆಚ್ಚು ಅನ್ವಯ ಆಗುತ್ತದೆ. ಡಬ್ಲ್ಯುಎಚ್‌ಒ ವಿವಿಧ ವಿಚಾರಗಳಿಗೆ ಸಂಬಂಧಿಸಿ ಟೀಕೆಗಳನ್ನು ಹಿಂದೆ ಎದುರಿಸಿದೆ. ಈ ಸಂಸ್ಥೆಯಲ್ಲಿ ಸುಧಾರಣೆಯ ಅಗತ್ಯವೂ ಇದೆ. ಆದರೆ, ಈ ಸಂಸ್ಥೆಯ ಕಾರ್ಯಚಟುವಟಿಕೆಗಳು ಕುಂಠಿತವಾದರೆ ಅದರಿಂದ ಇಡೀ ಜಗತ್ತು ಸಂಕಷ್ಟ ಪಡಬೇಕಾಗುತ್ತದೆ. ಸೋಂಕು ರೋಗಗಳ ಹೆಚ್ಚಿನ ಅಪಾಯ ಎದುರಿಸುತ್ತಿರುವ ಅಮೆರಿಕ ಕೂಡ ಸಂಕಷ್ಟದಿಂದ ತಪ್ಪಿಸಿಕೊಳ್ಳಲಾಗದು. ಹಣಕಾಸಿನ ಕೊರತೆಯಿಂದಾಗಿ ವೆಚ್ಚಗಳನ್ನು ಕಡಿತ ಮಾಡಲು ಮತ್ತು ಆದ್ಯತೆಗಳನ್ನು ಮರುರೂಪಿಸಲು ಡಬ್ಲ್ಯುಎಚ್‌ಒ ನಿರ್ಧರಿಸಿದೆ. ಹೊರಬರುವ ನಿರ್ಧಾರವನ್ನು ಮರುಪರಿಶೀಲಿಸುವಂತೆ ಅಮೆರಿಕವನ್ನು ಕೋರಿದೆ. ಆದರೆ, ಟ್ರಂಪ್ ಅವರು ಈ ಕೋರಿಕೆಗೆ ಮನ್ನಣೆ ನೀಡುವ ಸಾಧ್ಯತೆ ಬಹಳ ಕ್ಷೀಣ.

ದಿನದ ಟ್ವೀಟ್

ಒತ್ತಡ ಹೇರೋಣ



ಅಣ್ಣಾವ್ರು, ವಿಷ್ಣುವರ್ಧನ್ ಮತ್ತು ಅನಂತನಾಗ್ ಕನ್ನಡ ಚಿತ್ರರಂಗದ ಬಹಳ ಶ್ರೇಷ್ಠ ನಟರು. ಇವರನ್ನು ಭಾರತ ಸರ್ಕಾರ ಗೌರವಿಸಿರುವುದು ಕಡಿಮೆಯೇ. ಅನಂತನಾಗ್ ಅವರಿಗೆ ಬಹಳ ಹಿಂದೆಯೇ ಸಿಗಬೇಕಿದ್ದ ಪದ್ಮಭೂಷಣ ಈಗ ಬಂದಿದೆ. ಅಣ್ಣಾವ್ರಿಗೆ ಭಾರತರತ್ನ ಮತ್ತು ವಿಷ್ಣುವರ್ಧನ್ ಅವರಿಗೆ ಪದ್ಮಭೂಷಣ ಸಿಗುವಂತೆ ಕರ್ನಾಟಕದ ರಾಜಕಾರಣಿಗಳು ಒತ್ತಡ ಹಾಕಲಿ.

ಅಮರನಾಥ ಶಿವಶಂಕರ್, ಐ.ಟಿ. ತಜ್ಞ

ಕಿಡಿನುಡಿ



ರಾಜ್ಯದಲ್ಲಿ ಮೈಕ್ರೊ ಫೈನಾನ್ಸ್ ಕಂಪನಿಗಳಿಗೆ ಪೊಲೀಸರ ಬೆಂಬಲವಿದೆ. ಆ ಕಂಪನಿಗಳ ಮಾಲೀಕರು ನೀಡುವ ಹಣದಿಂದ ಪೊಲೀಸ್ ಇಲಾಖೆ ಭ್ರಷ್ಟವಾಗಿದೆ. ಇಂಥ ಪರಿಸ್ಥಿತಿಯಲ್ಲಿ ಕಂಪನಿಗಳ ಹಾವಳಿಯನ್ನು ಯಾರು ನಿಯಂತ್ರಿಸಬಲ್ಲರು? ಮುಖ್ಯಮಂತ್ರಿಯವರು ಅಧಿಕಾರಿಗಳ ಸಭೆ ನಡೆಸುವುದಕ್ಕೂ ಮುನ್ನ ಇಂತಹ ಫೈನಾನ್ಸ್ ಕಂಪನಿಗಳನ್ನು ಬೆಂಬಲಿಸುವ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳಬೇಕಿತ್ತು.

ಬಸವರಾಜ ಬೊಮ್ಮಾಯಿ, ಸಂಸದ, ಬಿಜೆಪಿ ಮುಖಂಡ



ಪ್ರಯಾಗರಾಜ್‌ನಲ್ಲಿ ನಡೆದಿರುವ ಮಹಾಕುಂಭಮೇಳದಲ್ಲಿ ಅಖಂಡ ಹಿಂದೂ ರಾಷ್ಟ್ರಕ್ಕಾಗಿ ಹೊಸ ಸಂವಿಧಾನ ಬಿಡುಗಡೆಗೆ ಸಿದ್ಧತೆ ನಡೆದಿದೆ. ಮನುಸ್ಮೃತಿ ಆರಾಧಕರಿಗೆ ಅಂಬೇಡ್ಕರ್ ರಚಿಸಿದ ಸಂವಿಧಾನ ಬೇಕಾಗಿಲ್ಲ. ಸಮಾನತೆ ಬಯಸದ ಅವರು, ಸಂವಿಧಾನ ಪ್ರತಿಯನ್ನು ಸುಟ್ಟ ಉದಾಹರಣೆ ಇದೆ. ಅಂಬೇಡ್ಕರ್ ಸಂವಿಧಾನವೇ ಅಂತಿಮ. ಅದಕ್ಕಿಂತ ಶ್ರೇಷ್ಠವಾದುದು ಇನ್ನೊಂದಿಲ್ಲ.

ಎಂ.ಬಿ.ಪಾಟೀಲ, ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ

25 ವರ್ಷಗಳ ಹಿಂದೆ

ಗುರುವಾರ, 27-1-2000

• ರಾಷ್ಟ್ರೀಯ ಏಕತೆ ಮೂಡಿಸಿದ ಗಣರಾಜ್ಯೋತ್ಸವ

ನವದೆಹಲಿ, ಜ. 26– ಸೇನಾ ಶಕ್ತಿಯ ಸಾರ್ವಭೌಮತ್ವ, ವಿವಿಧ ಕ್ಷೇತ್ರಗಳಲ್ಲಿನ ಅಭ್ಯುದಯ ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ಮೆರೆಸುವ ಮೂಲಕ ರಾಷ್ಟ್ರದ ರಾಜಧಾನಿಯಲ್ಲಿ ಇಂದು ನಡೆದ ಇಪ್ಪತ್ತೊಂದನೇ ಶತಮಾನದ ಪ್ರಥಮ ಗಣತಂತ್ರದ ಮಹೋತ್ಸವದ ಅತ್ಯಾಕರ್ಷಕ ಪರೇಡ್, ಜನಮನದಲ್ಲಿ ರಾಷ್ಟ್ರೀಯ ಏಕತೆಯನ್ನು ಉಂಟು ಮಾಡುವಲ್ಲಿ ಯಶಸ್ವಿಯಾಯಿತು.

• ಮೂಲಭೂತ ಸೌಲಭ್ಯಗಳಿಗೆ ಆದ್ಯತೆ: ರಾಜ್ಯಪಾಲರ ಕರೆ

ಬೆಂಗಳೂರು, ಜ. 26– ಸಾಕ್ಷರತೆ, ನೈರ್ಮಲ್ಯ, ವಸತಿ, ವಿದ್ಯುತ್ ಮತ್ತು ಸಾರಿಗೆ ವ್ಯವಸ್ಥೆಯಂಥ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದಕ್ಕೆ ಆದ್ಯತೆ ನೀಡಬೇಕು ಮತ್ತು ಸಮಾಜದ ಕಡುಬಡವರನ್ನು ಮುಖ್ಯವಾಹಿನಿಗೆ ತರಲು ವಿಶೇಷ ಪ್ರಯತ್ನ ನಡೆಸಬೇಕು ಎಂದು ರಾಜ್ಯಪಾಲರಾದ ವಿ.ಎಸ್.ರಮಾದೇವಿ ಕರೆ ನೀಡಿದರು.

ಇಂದು ಇಲ್ಲಿಯ ಫೀಲ್ಡ್ ಮಾರ್ಷಲ್ ಮಾಣೆಕ್ ಶಾ ಪರೇಡ್ ಮೈದಾನದಲ್ಲಿ ಗಣರಾಜ್ಯೋತ್ಸವದ ಸ್ವರ್ಣ ಜಯಂತಿ ಅಂಗವಾಗಿ ರಾಷ್ಟ್ರಧ್ವಜಾರೋಹಣ ಮಾಡಿ ಮಾತನಾಡುತ್ತಿದ್ದ ಅವರು, ರಾಜ್ಯವು ಅನೇಕ ಕ್ಷೇತ್ರಗಳಲ್ಲಿ ಮುನ್ನಡೆದಿದ್ದರೂ ಕೆಲವು ಕ್ಷೇತ್ರಗಳಲ್ಲಿ ಆತಂಕ ಪಡಬೇಕಾದ ಪರಿಸ್ಥಿತಿಯಿದೆ. ನಾವು ಎಷ್ಟೇ ಶಕ್ತಿಮೀರಿ ಕೆಲಸ ಮಾಡಿದರೂ ಮಹಿಳಾ ಸಾಕ್ಷರತೆಯ ಪ್ರಮಾಣವನ್ನು ಮೇಲೆತ್ತಲಾಗಿಲ್ಲ ಎಂದು ವಿಷಾದಿಸಿದರು.

ರಮಾದೇವಿ ಅವರು ಅಚ್ಚ ಕನ್ನಡದಲ್ಲಿಯೇ ತಮ್ಮ ಭಾಷಣವನ್ನು ನಿರರ್ಗಳವಾಗಿ ಮುಗಿಸಿದ್ದು ಗಮನಾರ್ಹವಾಗಿತ್ತು.

• ಸಿಟಿಬಿಟಿ: ಪೂರ್ವಷರತ್ತು ಬೇಡ– ಭಾರತ

ನವದೆಹಲಿ, ಜ. 26 (ಪಿಟಿಐ)– ಸಮಗ್ರ ಅಣ್ವಸ್ತ್ರ ಪರೀಕ್ಷೆ ನಿಷೇಧ ಒಪ್ಪಂದ (ಸಿಟಿಬಿಟಿ) ಜಾರಿಗೆ ಬರುವ ನಿಟ್ಟಿನಲ್ಲಿ ಎಲ್ಲಾ ರಾಷ್ಟ್ರಗಳೂ ಯಾವುದೇ ಪೂರ್ವ ಷರತ್ತು ಒಡ್ಡದೆ ಅದರಲ್ಲಿ ಸೇರಿಕೊಳ್ಳಬೇಕೆಂಬುದನ್ನು ಭಾರತ ಬಯಸುತ್ತದೆ ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಸ್ಪಷ್ಟಪಡಿಸಿದ್ದಾರೆ.

'ಸಿಟಿಬಿಟಿ ಅನುಷ್ಠಾನಕ್ಕೆ ಬರುವುದಕ್ಕೆ ಯಾವುದೇ ರೀತಿಯಲ್ಲಿ ಅಡ್ಡಿ ತರುವುದಿಲ್ಲ ಎಂದು ನಾವು ಹೇಳಿದ್ದೇವೆ. ಇದರ ಅನುಷ್ಠಾನಕ್ಕೆ ಇತರ ರಾಷ್ಟ್ರಗಳು ಸಹ ಪಾಲ್ಗೊಳ್ಳುವುದು ಅಗತ್ಯವಾಗಿದೆ' ಎಂದು ಅವರು ತಿಳಿಸಿದ್ದಾರೆ.

ಆರ್ಥಿಕ ಪುನಶ್ಚೇತನಕ್ಕೆ ಪಿವಿಎನ್ ಕೊಡುಗೆ ಗುರುತಿಸುವ ಕೋಟ್ಯಂತರ ಮಂದಿ ಇದ್ದಾರೆ

ಸಿಂಗ್‌ಗೆ ವಜ್ರಕವಚ ಆಗಿದ್ದವರು ರಾವ್



ಸೂರ್ಯ-ನಮಸ್ಕಾರ

ಎ. ಸೂರ್ಯ ಪ್ರಕಾಶ್

ಸತತ ಎರಡು ಅವಧಿಗೆ ಪ್ರಧಾನಿಯಾಗಿದ್ದ ಮನಮೋಹನ ಸಿಂಗ್ ಅವರು ಕಳೆದ ತಿಂಗಳು ನಿಧನರಾದ ನಂತರದಲ್ಲಿ ಅವರ ನಾಯಕತ್ವ ಹಾಗೂ ಅವರಲ್ಲಿದ್ದ ಜಾಣತನದ ಬಗ್ಗೆ ಮೆಚ್ಚುಗೆ ಸೂಚಿಸುವ ಬಹಳಷ್ಟು ಮಾತುಗಳು ದಾಖಲಾಗಿವೆ. ಅವರು 1991ರಲ್ಲಿ ದೇಶದ ಅರ್ಥವ್ಯವಸ್ಥೆಯನ್ನು ಮುಕ್ತಗೊಳಿಸಿದರು, ತಾನು ವಿಶ್ವದ ಇತರ ರಾಷ್ಟ್ರಗಳ ಜೊತೆ ಸ್ಪರ್ಧೆಗೆ ಇಳಿಯಬಲ್ಲೆ ಎಂಬ ವಿಶ್ವಾಸವನ್ನು ಭಾರತಕ್ಕೆ ಅವರು ನೀಡಿದರು ಎಂದು ಮೆಚ್ಚುಗೆ ವ್ಯಕ್ತಪಡಿಸಲಾಗಿದೆ.

ಸಿಂಗ್ ಅವರ ಬುದ್ಧಿಶಕ್ತಿಯ ಬಗ್ಗೆ ಮತ್ತು ಅವರ ಸಾಧನೆಗಳ ಬಗ್ಗೆ ಪಕ್ಷಭೇದ ಮರೆತು ಎಲ್ಲರೂ ಪ್ರಶಂಸಿಸುತ್ತಿದ್ದಾರೆ. ಆದರೆ ನೆಹರೂ-ಗಾಂಧಿ ಕುಟುಂಬದವರು ಮಾತ್ರ, ಸಿಂಗ್ ಅವರ ಅಂತ್ಯಸಂಸ್ಕಾರಕ್ಕೆ ಸಂಬಂಧಿಸಿದ ವಿಷಯಗಳನ್ನು ಪ್ರಸ್ತಾಪಿಸುವ ಮೂಲಕ ದುಃಖದ ವಾತಾವರಣವನ್ನೂ ಕೆಡಿಸುವಂತಹ ಕೆಲಸ ಮಾಡಿದ್ದಾರೆ.

ಸಿಂಗ್ ಅವರ ಅಂತ್ಯಸಂಸ್ಕಾರಕ್ಕೆ ಸೂಕ್ತವಾದ ಸ್ಥಳವನ್ನು ಒದಗಿಸದೇ ಇರುವ ಮೂಲಕ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಸಣ್ಣ ಮನಸ್ಸನ್ನು ತೋರಿಸಿದೆ ಎಂದು ಪ್ರಿಯಾಂಕಾ ಗಾಂಧಿ ವಾದ್ರಾ ಆರೋಪಿಸಿದ್ದಾರೆ. ಹಿಂದೆ ಎಲ್ಲ ಮಾಜಿ ಪ್ರಧಾನಿಗಳಿಗೆ ಅತ್ಯುನ್ನತ ಮಟ್ಟದ ಗೌರವವನ್ನು ನೀಡಲಾಗಿತ್ತು ಎಂದಿದ್ದಾರೆ. ನಿಗಮಬೋಧ ಘಾಟ್‌ನಲ್ಲಿ ಅಂತ್ಯಸಂಸ್ಕಾರ ನಡೆಸುವ ಮೂಲಕ ಸಿಂಗ್ ಅವರಿಗೆ ಕೇಂದ್ರ ಸರ್ಕಾರವು ಸಂಪೂರ್ಣವಾಗಿ ಅವಮಾನ ಮಾಡಿದೆ ಎಂದು ಪ್ರಿಯಾಂಕಾ ಅವರ ಸಹೋದರ ರಾಹುಲ್ ಗಾಂಧಿ ಅವರು ಹೇಳಿದ್ದಾರೆ.


ಸಿಂಗ್ ಅವರು ಆಧುನಿಕ ಭಾರತದ, ಉದಾರೀಕರಣ ನೀತಿಯ ಶಿಲ್ಪಿಯಾಗಿದ್ದರು ಮತ್ತು ಇದುವರೆಗೆ ಪ್ರಧಾನಿಗಳಾಗಿ ಸೇವೆ ಸಲ್ಲಿಸಿದ ಎಲ್ಲರ ಅಂತಿಮ ಸಂಸ್ಕಾರವನ್ನು 'ಅಧಿಕೃತ ಸ್ಥಳ'ಗಳಲ್ಲಿ ಮಾತ್ರ ನಡೆಸಲಾಗಿದೆ ಎಂದು ಕೂಡ ರಾಹುಲ್ ಅವರು ಹೇಳಿದ್ದಾರೆ. ಸಿಂಗ್ ಅವರ ಸ್ಮಾರಕ ನಿರ್ಮಿಸಲು ಸೂಕ್ತವಾದ ಸ್ಥಳವನ್ನು ನೀಡಲಾಗುತ್ತದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಭರವಸೆ ನೀಡಿದ ನಂತರವೂ ಇವೆಲ್ಲ ಆಗಿವೆ.

ಪ್ರಿಯಾಂಕಾ ಮತ್ತು ರಾಹುಲ್ ಗಾಂಧಿ ಅವರ ಪ್ರತಿಕ್ರಿಯೆಗಳನ್ನು ಗಮನಿಸಿದಾಗ ಅಪ್ರಾಮಾಣಿಕತೆಗೆ ಮಿತಿ ಇಲ್ಲವೇ ಎಂಬ ಪ್ರಶ್ನೆಯೊಂದು ಎದುರಾಗುತ್ತದೆ. ಪಿ.ವಿ. ನರಸಿಂಹ ರಾವ್ ಅವರು 2004ರ ಡಿಸೆಂಬರ್‌ನಲ್ಲಿ ಮೃತಪಟ್ಟಾಗ, ಸಿಂಗ್ ಅವರು ಪ್ರಧಾನಿಯಾಗಿದ್ದರೂ ಅಧಿಕಾರದ ಲಗಾಮು ಸೋನಿಯಾ ಗಾಂಧಿ ಅವರ ಬಳಿ ಇತ್ತು. ರಾವ್ ಅವರ ಅಂತ್ಯಸಂಸ್ಕಾರವು ದೆಹಲಿಯಲ್ಲಿ ನಡೆಯದಂತೆ ನೋಡಿಕೊಳ್ಳುವುದು ಮೊದಲ ತೀರ್ಮಾನವಾಗಿತ್ತು. ರಾವ್ ಅವರ ಪಾರ್ಥಿವ ಶರೀರವನ್ನು ಅಂತ್ಯ ಸಂಸ್ಕಾರಕ್ಕೆ ಹೈದರಾಬಾದ್‌ಗೆ ಒಯ್ಯುವುದನ್ನು ನೆಹರೂ-ಗಾಂಧಿ ಕುಟುಂಬವು ಖಾತರಿಪಡಿಸಿಕೊಂಡಿತು.

ಅಷ್ಟೇ ಅಲ್ಲ, ಅಂತ್ಯ ಸಂಸ್ಕಾರದ ಮಾತು ಬದಿಗಿರಲಿ, ದೆಹಲಿಯ ಕಾಂಗ್ರೆಸ್ ಕಚೇರಿಯ ಆವರಣಕ್ಕೆ ರಾವ್ ಅವರ ಪಾರ್ಥಿವ ಶರೀರವು ಪ್ರವೇಶಿಸದಂತೆ ಮಾಡಿ ಸೋನಿಯಾ ಗಾಂಧಿ ಮತ್ತು ಅವರ ಕುಟುಂಬವು ರಾವ್ ಅವರಿಗೆ ಇನ್ನಷ್ಟು ಅವಮಾನ ಮಾಡಿತು. ರಾವ್ ಅವರು 1991ರಿಂದ 1996ರವರೆಗೆ ಐದು ವರ್ಷಗಳ ಕಾಲ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದರೂ ಈ ರೀತಿ ಮಾಡಲಾಯಿತು. ಪಾರ್ಥಿವ ಶರೀರ ಹೊತ್ತಿದ್ದ ವಾಹನವು ಕಾಂಗ್ರೆಸ್ ಕಚೇರಿಯ ಬಳಿಗೆ ಬಂದಾಗ ಭದ್ರತಾ ಸಿಬ್ಬಂದಿ ಗೇಟುಗಳನ್ನು ಮುಚ್ಚಿದರು, ರಾವ್ ಅವರ ಪಾರ್ಥಿವ ಶರೀರವು ಹೊರಗಡೆಯೇ ಉಳಿಯಿತು. ಪಕ್ಷವನ್ನು ಅಧ್ಯಕ್ಷರಾಗಿ ಮುನ್ನಡೆಸಿದ್ದ ಇವರಿಗೆ ಗೌರವ ಸಲ್ಲಿಸಲು ಪಕ್ಷದ ಕಾರ್ಯಕರ್ತರನ್ನು ಒಗ್ಗೂಡಿಸುವ ಕೆಲಸ ಕೂಡ ಆಗಲಿಲ್ಲ.

ಕಾಂಗ್ರೆಸ್ ಪಕ್ಷದ ಮಾಲೀಕತ್ವ ಹೊಂದಿರುವ ಹಾಗೂ ಪಕ್ಷವನ್ನು ನಿಯಂತ್ರಿಸುವ ಕುಟುಂಬವು ರಾವ್ ಅವರಿಗೆ ಎಸಗಿದ ಅವಮಾನವು ಆಘಾತ ಮೂಡಿಸುವಂತಿತ್ತು. ಆಗ ಆಂಧ್ರಪ್ರದೇಶದ ಮುಖ್ಯಮಂತ್ರಿ ಆಗಿದ್ದ ವೈ.ಎಸ್. ರಾಜಶೇಖರ ರೆಡ್ಡಿ ಅವರು ಹೈದರಾಬಾದ್‌ನಲ್ಲಿ ಭಾರಿ ದೊಡ್ಡ ಮಟ್ಟದಲ್ಲಿ ಅಂತ್ಯ ಸಂಸ್ಕಾರವನ್ನು ನಡೆಸುವಂತೆ ನೆಹರೂ-ಗಾಂಧಿ ಕುಟುಂಬವು ನೋಡಿಕೊಂಡಿತು. ಪಾರ್ಥಿವ ಶರೀರವನ್ನು ಹೈದರಾಬಾದ್‌ಗೆ ಒಯ್ಯುವಂತೆ ರಾವ್ ಅವರ ಕುಟುಂಬದ ಮನವೊಲಿಸುವ ಕೆಲಸವನ್ನು ರೆಡ್ಡಿ ಹಾಗೂ ಪಕ್ಷದ ಇತರ ಕೆಲವು ಪ್ರಮುಖ ನಾಯಕರಿಗೆ ವಹಿಸಲಾಯಿತು. ಅಂತ್ಯ ಸಂಸ್ಕಾರವನ್ನು ಹೈದರಾಬಾದ್‌ನಲ್ಲಿ ನಡೆಸುವುದಕ್ಕೆ ಅವರನ್ನು ಬಲವಂತದಿಂದ ಒಪ್ಪಿಸಲಾಯಿತು. ಭಾರತ ಕಂಡ ಮಹಾನ್ ಪ್ರಧಾನಿಗಳಲ್ಲಿ ಒಬ್ಬರಾದ ರಾವ್ ಅವರ ಕುರುಹು ಕೂಡ ದೆಹಲಿಯಲ್ಲಿ ಇರದಂತೆ ನೋಡಿಕೊಳ್ಳುವುದನ್ನು ನೆಹರೂ-ಗಾಂಧಿಗಳು ಈ ಮೂಲಕ ಖಾತರಿಪಡಿಸಲು ಬಯಸಿದ್ದರು.

ಹೀಗಿರುವಾಗ, 'ಮಾಜಿ ಪ್ರಧಾನಿಗಳೆಲ್ಲರಿಗೂ ಅತ್ಯುನ್ನತ ಮಟ್ಟದ ಗೌರವ ನೀಡಲಾಗಿತ್ತು' ಎಂದು ಪ್ರಿಯಾಂಕಾ ಅವರು ಹೇಳಿರುವ ಮಾತಿನ ಅರ್ಥವೇನು? 'ಎಲ್ಲ' ಮಾಜಿ ಪ್ರಧಾನಿಗಳ ಅಂತ್ಯ ಸಂಸ್ಕಾರವು 'ಅಧಿಕೃತ ಸ್ಥಳ'ಗಳಲ್ಲಿ ನಡೆಯಿತು, ಸಿಂಗ್ ಅವರಿಗೆ ಅವಮಾನ ಮಾಡಲಾಯಿತು ಎಂದು ರಾಹುಲ್ ಆಡಿರುವ ಮಾತಿನ ಅರ್ಥ ಏನು? ನರಸಿಂಹ ರಾವ್ ಪ್ರಕರಣವು ಅಂದಿನ ಪ್ರಧಾನಿಯಾಗಿದ್ದ ಸಿಂಗ್ ಅವರ ಅಧಿಕಾರ ಹಾಗೂ ಅವರ ಸ್ಥಾನದ ಬಗ್ಗೆ ಸೂಚ್ಯವಾಗಿ ಒಂದಿಷ್ಟು ಮಾತು ಹೇಳುವಂತಿದೆ. ರಾಷ್ಟ್ರ ರಾಜಧಾನಿಯಲ್ಲಿ ರಾವ್ ಅವರ ಅಂತ್ಯ ಸಂಸ್ಕಾರ ನಡೆಯುವಂತೆ ಮಾಡುವ ಸಾಮರ್ಥ್ಯವು ಸಿಂಗ್ ಅವರಿಗೆ ಇರಲಿಲ್ಲ. ನೆಹರೂ-ಗಾಂಧಿ ಕುಟುಂಬ ಮಾಡಿದ ಕಿಡಿಗೇಡಿತನದ ಕೃತ್ಯವನ್ನು ಸರಿಪಡಿಸಿದ್ದು ನರೇಂದ್ರ ಮೋದಿ ನೇತೃತ್ವದ ಸರ್ಕಾರ. ರಾವ್ ಅವರಿಗೆ ದೆಹಲಿಯ ಏಕತಾ ಸ್ಥಳದಲ್ಲಿ ಸೂಕ್ತವಾದ ಸ್ಮಾರಕ ನಿರ್ಮಾಣವಾಗುವಂತೆ ಮೋದಿ ನೋಡಿಕೊಂಡರು, ಅವರಿಗೆ ಅರ್ಹವಾಗಿಯೇ ದೊರಕಬೇಕಿದ್ದ ಭಾರತರತ್ನ ಪುರಸ್ಕಾರ ಸಿಗುವಂತೆ ಮಾಡಿದರು.




1990ರ ದಶಕದ ಆರ್ಥಿಕ ಪರಿವರ್ತನೆಯ ಶ್ರೇಯಸ್ಸನ್ನು ಸಿಂಗ್ ಅವರಿಗೆ ನೀಡಲು ನೆಹರೂ-ಗಾಂಧಿ ಕುಟುಂಬದವರು ಯತ್ನಿಸುತ್ತ ಇರುತ್ತಾರಾದರೂ, ದೇಶದ ಆರ್ಥಿಕ ಪುನಶ್ಚೇತನದ ಹಿಂದೆ ಇದ್ದ ರಾವ್ ಅವರ ಕೊಡುಗೆಯನ್ನು ಗುರುತಿಸುವ ಕೋಟ್ಯಂತರ ಮಂದಿ ಭಾರತೀಯರು ಇದ್ದಾರೆ. ರಾವ್ ಅವರು 1991ರ ಜೂನ್‌ನಲ್ಲಿ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಾಗ ಭಾರತವು ಕೇವಲ 200 ದಶಲಕ್ಷ ಅಮೆರಿಕನ್ ಡಾಲರ್‌ಗಾಗಿ ಬ್ಯಾಂಕ್ ಆಫ್ ಇಂಗ್ಲೆಂಡ್ ಬಳಿ ಚಿನ್ನವನ್ನು ಅಡಮಾನವಾಗಿ ಇರಿಸಿತ್ತು. ಏಕೆಂದರೆ ಭಾರತದ ಬಳಿ ಪೆಟ್ರೋಲ್ ಖರೀದಿಗೆ ಸಾಕಾಗುವಷ್ಟು ವಿದೇಶಿ ವಿನಿಮಯ ಸಂಗ್ರಹ ಇರಲಿಲ್ಲ. ರಾವ್ ಅವರು 1996ರ ಮೇ ತಿಂಗಳಲ್ಲಿ ಅಧಿಕಾರದಿಂದ ಇಳಿದಾಗ ದೇಶದ ವಿದೇಶಿ ವಿನಿಮಯ ಸಂಗ್ರಹವು 50 ಶತಕೋಟಿ ಅಮೆರಿಕನ್ ಡಾಲರ್ ಆಗಿತ್ತು. ರಾವ್ ಅವರ ಹಲವು ಸಾಧನೆಗಳಲ್ಲಿ ಇದು ಒಂದು. ನೆಹರೂ ಮತ್ತು ಇಂದಿರಾ ಗಾಂಧಿ ಅಳವಡಿಸಿಕೊಂಡಿದ್ದ 'ನೆಹರೂ ಪ್ರಣೀತ ಸಮಾಜವಾದವು' ದೇಶವನ್ನು ಬೇಡುವ ಹಂತಕ್ಕೆ ತಂದಿರಿಸಿತ್ತು. ಆ ಸಮಾಜವಾದದ ಹಿಡಿತದಿಂದ ದೇಶವನ್ನು ಹೊರತರಲು ರಾವ್ ಜಾಣತನದಿಂದ ನೆರವಾದರು.

ಭಾರತದ ಮಾರುಕಟ್ಟೆಯನ್ನು ಮುಕ್ತಗೊಳಿಸಬೇಕು ಎಂಬ ತೀರ್ಮಾನವನ್ನು ರಾವ್ ತೆಗೆದುಕೊಂಡರು. ಅರ್ಥ ಸಚಿವರನ್ನಾಗಿ ಐ.ಜಿ. ಪಟೇಲ್ ಅವರನ್ನು ನೇಮಿಸುವುದು ರಾವ್ ಅವರ ಮೊದಲ ಆಯ್ಕೆಯಾಗಿತ್ತು. ಆದರೆ ಪಟೇಲ್ ಒಲ್ಲೆ ಎಂದಾಗ ರಾವ್ ಅವರು ಸಿಂಗ್ ಅವರ ಕಡೆ ಮುಖ ಮಾಡಿದರು. ಸಾಧ್ಯವಿರುವ ಎಲ್ಲ ಬಗೆಯ ಬೆಂಬಲ ನೀಡುವುದಾಗಿ ರಾವ್ ಅವರು ಸಿಂಗ್ ಅವರಿಗೆ ಭರವಸೆ ನೀಡಿದರು. ಕಮ್ಯುನಿಸ್ಟರು ಹಾಗೂ ಕಾಂಗ್ರೆಸ್ಸಿನಲ್ಲಿದ್ದ ಸಮಾಜವಾದಿಗಳು ಸಿಂಗ್ ಅವರನ್ನು ನಿರಂತರವಾಗಿ ಟೀಕಿಸುತ್ತಿದ್ದರು. ಆದರೆ ಅವರಿಗೆ ವಜ್ರ ಕವಚ ನೀಡಿ ರಕ್ಷಿಸಿದ್ದು ರಾವ್ ಅವರು, ಸಿಂಗ್ ಅವರನ್ನು ಪೂರ್ತಿ ಐದು ವರ್ಷಗಳವರೆಗೆ ಹಣಕಾಸು ಸಚಿವರನ್ನಾಗಿ ಇರಿಸಿಕೊಂಡರು. ರಾವ್ ಅವರು ರಕ್ಷಣೆ ಕೊಟ್ಟಿರದಿದ್ದರೆ ಸಿಂಗ್ ಅವರಿಗೆ ಆರ್ಥಿಕ ಸುಧಾರಣೆಗಳನ್ನು ತರಲು ಆಗುತ್ತಿರಲಿಲ್ಲ.

ಹೀಗಿದ್ದರೂ ನೆಹರೂ-ಗಾಂಧಿ ಕುಟುಂಬದವರು ರಾವ್ ಅವರನ್ನು ಸಣ್ಣವರನ್ನಾಗಿ ತೋರಿಸಲು ಯತ್ನಿಸುತ್ತಿರುತ್ತಾರೆ. ರಾವ್ ಅವರು ಮೃತಪಟ್ಟಾಗ ಅವರಿಗೆ ತಾವು ಅವಮಾನ ಎಸಗಲಿಲ್ಲ ಎಂದು ಸೋಗುಹಾಕಲು ಕೂಡ ಯತ್ನಿಸುತ್ತಿರುತ್ತಾರೆ. ಬಹಳಷ್ಟು ಜನರಿಗೆ ಸತ್ಯ ಗೊತ್ತಿರುವ ಕಾರಣ ಇಂತಹ ಕೆಲಸಗಳು ಪ್ರಯೋಜನಕ್ಕೆ ಬರುವುದಿಲ್ಲ.

ಚುರುಮುರಿ



ಅನುದಾನ ಸಂತಾನ!

• ಚಂದ್ರಕಾಂತ ವಡ್ಡು

ಬೈಟೂ ಕಾಫಿ ಟೇಬಲ್ಲು ಅದ್ಯಾಕೋ ವಿಚಾರಸಂಕಿರಣ ಆಗಿ ಮಾರ್ಪಟ್ಟಿತ್ತು.

'ನಮ್ಮ ರಾಜ್ಯದ ಜನಸಂಖ್ಯೆ ಕಡಿಮೆಯಾಗಿ ಕೇಂದ್ರದ ಅನುದಾನ ಕಡಿತವಾಗಿದೆ. ಹೆಚ್ಚಿನ ಜನಸಂಖ್ಯೆಯ ರಾಜ್ಯಗಳ ಕಣ್ಣಿಗೆ ಬೆಣ್ಣೆ, ಕಡಿಮೆ ಜನಸಂಖ್ಯೆಯ ರಾಜ್ಯಗಳ ಕಣ್ಣಿಗೆ ಸುಣ್ಣ ಎಂಬಂತೆ ಆಗಿದೆ. ಜನಸಂಖ್ಯೆ ನಿಯಂತ್ರಣ ಮಾಡಿದ್ದಕ್ಕೇ ನಮಗೆ ಹೊಡೆತ...' ತಿಂಗಳೇಶನ ದಿಕ್ಸೂಚಿ ಮಾತಿನಿಂದ ಸಭೆಯಲ್ಲಿ ಚಿಂತೆ ಆವರಿಸಿತು.

'ಅಂದ್ರೆ... ಹೆಚ್ಚಿನ ಅನುದಾನಕ್ಕೆ ಜನಸಂಖ್ಯೆ ಹೆಚ್ಚಿಸಿಕೊಳ್ಳಬೇಕು, ಜನಸಂಖ್ಯೆ ಹೆಚ್ಚಳಕ್ಕೆ ಶಿಕ್ಷಣದ ಪ್ರಮಾಣ ಕಡಿಮೆ ಮಾಡಬೇಕು' ಬದ್ರಿ ಎಂದಿನಂತೆ ದಿಕ್ಕು ತಪ್ಪಿಸಿದ.

'ಅದಕ್ಕೆಂದೇ ಕನ್ನಡ ಶಾಲೆಗಳನ್ನು ಮುಚ್ಚಲು ಸರ್ಕಾರ ಮುಂದಾಗಿದೆ' ಆಡಳಿತ ಪಕ್ಷದ ಅಂಜಿನಿಯ ಸಮರ್ಥನೆ.

'ವೇದಿಕೆಯಲ್ಲಿ ಹಚ್ಚೇವು ಕನ್ನಡದ ದೀಪ... ಆದೇಶಗಳಲ್ಲಿ ಮುಚ್ಚೇವು ಕನ್ನಡದ ಶಾಲೆ...' ಚನ್ನಬಸಣ್ಣನ ಬಾಯಲ್ಲಿ ವಿಷಾದಗೀತೆ.

'ಇತ್ತೀಚೆಗೆ ಕನ್ನಡ ಓದುಗರ ಸಂಖ್ಯೆಯೂ ಕುಸಿಯುತ್ತಿದೆ. ಓದುಗರಿಗಿಂತ ಲೇಖಕರ ಸಂಖ್ಯೆಯೇ ಹೆಚ್ಚಾಗಿದೆಯಂತೆ, ಸಾಹಿತಿಗಳಿಗಿಂತ ಪ್ರಶಸ್ತಿಗಳೇ ಹೆಚ್ಚಾಗಿವೆಯಂತೆ...!' ಸಾಹಿತಿ ಕೊಟ್ರೇಶಿಯನ್ನು ಕೆಣಕಿದ ರಾಜಣ್ಣ.

'ಜನಗಣತಿಯಲ್ಲಿ ಓದುಗರ, ಲೇಖಕರ ಮತ್ತು ಪ್ರಶಸ್ತಿಗಳ ಗಣತಿಯೂ ಸೇರ್ಪಡೆಯಾಗಲಿ. ಅಲ್ಲಿಯವರೆಗೆ ಆಯೋಗದ ವರದಿಯ ಅಂಗೀಕಾರ ಬೇಡ' ಯಾರೋ ಸಿದ್ದರಾಮಣ್ಣ ಸಂಪುಟದ ನೆರವಿಗೆ ಧಾವಿಸಿದರು!

'ಕೆಲವರ್ಷ ಪುಸ್ತಕಗಳ ಪ್ರಕಟಣೆ ನಿಲ್ಲಿಸಬೇಕೆಂಬ ಸಲಹೆಯೂ ಕೇಳಿಬಂದಿದೆ' ಮತ್ತೊಂದು ದನಿ.

'ಪುಸ್ತಕಗಳ ಬದಲು ಸಾಹಿತಿಗಳು ಮಕ್ಕಳನ್ನು ಹೆತ್ತರೆ ಎಲ್ಲಾ ಸರಿಹೋಗಬಹುದು ಅಂತೀರಾ?' ಕೊಟ್ರೇಶಿಯ ವ್ಯಂಗ್ಯವನ್ನು ಸಭೆ ಗಂಭೀರವಾಗಿಯೇ ಪರಿಗಣಿಸಿತು.

ವಿಚಾರ 'ಸಂಕೀರ್ಣ' ಆಗುವುದನ್ನು ತಪ್ಪಿಸಲು ತಿಂಗಳೇಶ, 'ಅಷ್ಟೇ ಅಲ್ಲ, 'ಆರತಿಗೊಬ್ಬ ಮಗಳು ಕೀರ್ತಿಗೊಬ್ಬ ಮಗ' ಘೋಷಣೆಯನ್ನು 'ಕತೆಗೊಬ್ಬ ಮಗ, ಕವಿತೆಗೊಬ್ಬ ಮಗಳು, ಅನುದಾನಕ್ಕೆ ಹತ್ತು ಸಂತಾನ' ಎಂದು ಬದಲಿಸೋಣ' ಎಂದು ಮುಗಿಸಿದ.

ಸಂಗತ

ಹಸಿರು ಜಲಜನಕ: ದಾರಿ ದೂರ

ಬಂಡವಾಳ ಆಕರ್ಷಿಸಲು ಉದ್ಯಮಸ್ನೇಹಿ ನಿಯಮ ರೂಪಿಸಬೇಕಿದೆ

• ಗುರುರಾಜ್ ಎಸ್. ದಾವಣಗೆರೆ

ಬೃಹತ್ ಪ್ರಮಾಣದ ಹಸಿರು ಜಲಜನಕದ ಉತ್ಪಾದನೆಯ ಮೂಲಕ 2070ರ ವೇಳೆಗೆ ನಿವ್ವಳ ಶೂನ್ಯ ಇಂಗಾಲ ಹೊಮ್ಮುವಿಕೆಯ (ನೆಟ್ ಜೀರೊ ಎಮಿಷನ್ಸ್) ಗುರಿಯನ್ನು ಸಾಧಿಸಲು ಹೊರಟಿರುವ ನಮಗೆ ಅಗತ್ಯವಿರುವಷ್ಟು ಆರ್ಥಿಕ ಬಂಡವಾಳ ಸಿಗುತ್ತಿಲ್ಲ. ಖಾಸಗಿ ಕಂಪನಿಗಳು ಈ ಉದ್ಯಮದತ್ತ ಬಂಡವಾಳ ಹೂಡಲು ಒಲವು ತೋರುತ್ತಿಲ್ಲ. ಅಂದುಕೊಂಡ ಗುರಿ ತಲುಪಲು ಆರಂಭಿಕ ಹಂತದಲ್ಲಿ, ಅಂದರೆ 2030ರ ವೇಳೆಗೆ 50 ಲಕ್ಷ ಟನ್ ಹಸಿರು ಜಲಜನಕವನ್ನು ಉತ್ಪಾದಿಸಬೇಕು. ಜಲಜನಕ ಉತ್ಪಾದನೆಯ ಉದ್ಯಮದಲ್ಲಿ ನಾಯಕತ್ವ ವಹಿಸಲು ನಮಗೆ ಸಿಕ್ಕಿರುವ ಈ ಸುವರ್ಣ ಅವಕಾಶವನ್ನು ಕಳೆದುಕೊಳ್ಳದೆ ಮುಂದಿನ ಐದು ವರ್ಷಗಳ ಕಾಲ ಯಶಸ್ವಿಯಾಗಿ ಹಸಿರು ಜಲಜನಕವನ್ನು ಉತ್ಪಾದಿಸಿದರೆ 2070ರ ವೇಳೆಗೆ 'ನೆಟ್ ಜೀರೊ' ಸಾಧನೆ ಸಾಧ್ಯವಾಗಬಹುದು.

ಉತ್ಪಾದನೆಯ ವಿಧಾನಗಳನ್ನು ಆಧರಿಸಿ ಜಲಜನಕವನ್ನು ಹಸಿರು, ನೀಲಿ, ಕಂದು, ಬೂದು, ಗುಲಾಬಿ, ಬಿಳಿ ಎಂಬ ವಿವಿಧ ಬಣ್ಣಗಳಿಂದ ಗುರುತಿಸಲಾಗುತ್ತದೆ. ಹಾಗೆಂದು ಜಲಜನಕವು ಈ ಬಣ್ಣಗಳಿಂದ ಕೂಡಿರುತ್ತದೆ ಎಂದು ಅರ್ಥವಲ್ಲ. ಹಸಿರು ಜಲಜನಕವೆಂದರೆ ಜಲಜನಕದ ಬಣ್ಣ ಹಸಿರಾಗಿರುವುದಿಲ್ಲ. ವಾತಾವರಣಕ್ಕೆ ಶಾಖವರ್ಧಕ ಅನಿಲಗಳನ್ನು ಹೊರಹಾಕದ, ನವೀಕರಿಸಬಲ್ಲ ಇಂಧನಗಳನ್ನು ಬಳಸಿ ಪಡೆಯುವ ಜಲಜನಕಕ್ಕೆ ಹಸಿರು ಜಲಜನಕ ಎನ್ನುತ್ತೇವೆ. ಸೌರ ಅಥವಾ ಗಾಳಿ ವಿದ್ಯುತ್ತಿನಿಂದ ನೀರನ್ನು ವಿಭಜಿಸಿದರೆ (ವಿದ್ಯುದ್ವಿಭಜನೆ) ಜಲಜನಕ ಮತ್ತು ಆಮ್ಲಜನಕ ದೊರಕುತ್ತವೆ. ಈ ಜಲಜನಕವೇ ಹಸಿರು ಜಲಜನಕ. ಇಲ್ಲಿ ದೊರಕುವ ಆಮ್ಲಜನಕ ಮತ್ತು ಜಲಜನಕ ಪ್ರಮಾಣ ಅತ್ಯಂತ ಕಡಿಮೆ ಇರುತ್ತದೆ.

ಇದೇ ವಿಧಾನಕ್ಕೆ ಉದ್ಯಮದ ರೂಪ ನೀಡಿದರೆ ಬೃಹತ್ ಪ್ರಮಾಣದ ಹಸಿರು ಜಲಜನಕ ಮತ್ತು ಆಮ್ಲಜನಕ ಒಟ್ಟೊಟ್ಟಿಗೆ ದೊರಕುತ್ತವೆ. ಒಂದು ಕೆ.ಜಿ. ಜಲಜನಕ ಉತ್ಪಾದನೆಯಾದಾಗ ಎಂಟು ಕೆ.ಜಿ. ಆಮ್ಲಜನಕ ದೊರಕುತ್ತದೆ! ನಮ್ಮ ನಗರಗಳೆಲ್ಲ ಮಾಲಿನ್ಯದ ಗೂಡುಗಳಾಗಿರುವಾಗ ಇಲ್ಲಿ ದೊರಕುವ ಆಮ್ಲಜನಕವು ನಾಗರಿಕರಿಗೆ ಎಷ್ಟೆಲ್ಲಾ ಅನುಕೂಲಗಳನ್ನು ತರಬಹುದು ಎಂಬುದನ್ನು ನೀವೇ ಊಹಿಸಿರಿ.

ಬ್ಲೂಮ್‌ಬರ್ಗ್ ಎನ್‌ಇಎಫ್ ಸಂಸ್ಥೆಯು ಇತ್ತೀಚಿನ ತನ್ನ ವಿಶ್ಲೇಷಣೆಯಲ್ಲಿ ಭಾರತವು ನಿಗದಿತ ಗುರಿಯ ಶೇ 10ರಷ್ಟು ಮಾತ್ರ ಸಾಧಿಸಬಹುದು ಎಂದಿದೆ. ಇದಕ್ಕೆ ಪ್ರಮುಖ ಕಾರಣ ಹಸಿರು ಮತ್ತು ಬೂದು ಜಲಜನಕ ಉತ್ಪಾದನೆಗೆ ತಗಲುವ ಖರ್ಚಿನಲ್ಲಿರುವ ದೊಡ್ಡ ವ್ಯತ್ಯಾಸ. ಒಂದು ಕೆ.ಜಿ. ಹಸಿರು ಜಲಜನಕ ಉತ್ಪಾದಿಸಲು ₹ 450 ರಿಂದ ₹ 700 ಖರ್ಚಾಗುತ್ತದೆ. ನೈಸರ್ಗಿಕ ಅನಿಲಕ್ಕೆ ನೀರಿನ ಆವಿಯನ್ನು ಹಾಯಿಸಿ ಪಡೆಯುವ ಒಂದು ಕೆ.ಜಿ. ಬೂದು ಜಲಜನಕ ಉತ್ಪಾದನೆಗೆ ತಗಲುವ ಖರ್ಚು ₹ 150 ರಿಂದ ₹ 200 ಮಾತ್ರ. ಉತ್ಪಾದನಾ ವೆಚ್ಚದಲ್ಲಿ ಹೀಗೆ ಭಾರಿ ವ್ಯತ್ಯಾಸವಿದೆ. ಆದ್ದರಿಂದ ಉದ್ಯಮಿಗಳು ಬೂದು ಜಲಜನಕ ಉತ್ಪಾದನೆಗೆ ಹೆಚ್ಚು ಉತ್ಸಾಹ ತೋರುತ್ತಾರೆ.

ಕೇಂದ್ರ ಸರ್ಕಾರವು ಉತ್ಪಾದನೆಯ ಖರ್ಚಿನ ಮೇಲೆ ಹೆಚ್ಚಿನ ಸಬ್ಸಿಡಿ ನೀಡಿದರೆ ಮಾತ್ರ ಉದ್ಯಮಿಗಳು ಹಸಿರು ಜಲಜನಕ ಉತ್ಪಾದನೆಯ ಕಡೆ ಗಮನಹರಿಸುತ್ತಾರೆ, ಇಲ್ಲದಿದ್ದರೆ ಇಲ್ಲ ಎಂಬುದು ಮಾರುಕಟ್ಟೆ ತಜ್ಞರ ಅಭಿಪ್ರಾಯ.

ಹಸಿರು ಜಲಜನಕವನ್ನು ಉತ್ಪಾದಿಸಲು ಬೇಕಾಗುವ ಪರಿಕರಗಳು ಬಹಳ ದುಬಾರಿ. ಅವುಗಳನ್ನು ಖರೀದಿಸಿ ಹಸಿರು ಜಲಜನಕ ಉತ್ಪಾದನೆಗೆ ಮುಂದಾಗುವವರು ತುಂಬಾ ಕಡಿಮೆ. ಹಸಿರು ಜಲಜನಕ ಉತ್ಪಾದಿಸಲು ತಗಲುವ ಸರಾಸರಿ ಖರ್ಚು, ತೊಡಗಿಸಿದ ಬಂಡವಾಳಕ್ಕೆ ಲಾಭ ತಂದುಕೊಡುವ ಕುರಿತು ಅನುಮಾನಗಳಿವೆ. ಬಂಡವಾಳ ಹೂಡಿಕೆಯ ಪ್ರಮಾಣ ಶೇ 20ರಷ್ಟು ಹೆಚ್ಚಿದರೂ ಹಸಿರು ಜಲಜನಕ ಉತ್ಪಾದನೆಯ ಖರ್ಚು ಶೇ 70ರಷ್ಟು ಏರಿಕೆಯಾಗುತ್ತದೆ ಎಂಬ ಲೆಕ್ಕಾಚಾರಗಳಿವೆ.



2024ರ ಮೇ ತಿಂಗಳಿನವರೆಗೆ ಹಸಿರು ಜಲಜನಕ ಉತ್ಪಾದನೆಯ 1,572 ಯೋಜನೆಗಳನ್ನು ಸರ್ಕಾರ ಘೋಷಿಸಿತ್ತು. ಇದಕ್ಕಾಗಿ 370 ಶತಕೋಟಿ ಡಾಲರ್‌ಗಳ ಬಂಡವಾಳದ ಅವಶ್ಯಕತೆ ಇತ್ತು. ಘೋಷಿಸಿದ ಯೋಜನೆಗಳ ಪೈಕಿ ಕೇವಲ 432ಕ್ಕೆ ಬಂಡವಾಳ ಹರಿದುಬಂತು. ಈ ಉದ್ಯಮದಲ್ಲಿ ದೊಡ್ಡ ರಿಸ್ಕ್ ಇದೆ ಎಂದು ಅಭಿಪ್ರಾಯಪಡುತ್ತಿರುವ ಉದ್ಯಮಿಗಳು, ಸಾಲ ನೀಡುವ ಬ್ಯಾಂಕುಗಳು ಜಲಜನಕ ಉತ್ಪಾದನೆಯ ಕ್ಷೇತ್ರದಲ್ಲಿರುವ ಸವಾಲುಗಳನ್ನು ಆಧರಿಸಿ ನಿಬಂಧನೆಗಳನ್ನು ಜಾರಿ ಮಾಡಬೇಕು ಎನ್ನುತ್ತಾರೆ. ಉತ್ಪಾದಿಸಿದ ಹಸಿರು ಜಲಜನಕವನ್ನು ಕೊಳ್ಳಲು ಸರ್ಕಾರವು ದೀರ್ಘಕಾಲದ ಒಪ್ಪಂದ ಮಾಡಿಕೊಳ್ಳಬೇಕು ಮತ್ತು ಹೂಡಿದ ಬಂಡವಾಳ ರಕ್ಷಣೆಗೆ ಉದ್ಯಮಸ್ನೇಹಿ ನಿಯಮ ರೂಪಿಸಬೇಕು.

ಆಸ್ಟ್ರೇಲಿಯಾ ಮತ್ತು ಜಪಾನ್ ಹಸಿರು ಜಲಜನಕ ಉತ್ಪಾದನಾ ಯೋಜನೆಗಳಿಗೆ ದೊಡ್ಡಮಟ್ಟದಲ್ಲಿ ಕೈಜೋಡಿಸಿ ಕೆಲಸ ಮಾಡುತ್ತಿವೆ. ಬೇಡಿಕೆಯನ್ನು ಆಧರಿಸಿ ಉದ್ಯಮಗಳನ್ನು ಸ್ಥಾಪಿಸುವ ಸಾಂಪ್ರದಾಯಿಕ ಕ್ರಮಗಳಿಂದ ಹೊರಬಂದು ಉದ್ಯಮ ಸ್ಥಾಪನೆ, ಉತ್ಪಾದನೆ, ನಾವೀನ್ಯ ಮತ್ತು ಬಳಕೆಯನ್ನು ಒಟ್ಟೊಟ್ಟಿಗೆ ಮಾಡುತ್ತಿವೆ. ಯಶಸ್ಸನ್ನು ಗಳಿಸುತ್ತಿವೆ.

ಭಾರತ ಸಹ ಹೊರದೇಶಗಳಿಗೆ ನಮ್ಮ ಹಸಿರು ಜಲಜನಕವನ್ನು ರಫ್ತು ಮಾಡಲು, ಬಂಡವಾಳ ತರಲು ದೀರ್ಘಕಾಲದ ಒಪ್ಪಂದ ಮಾಡಿಕೊಳ್ಳಬೇಕು. ಒಡಿಶಾ, ಮಹಾರಾಷ್ಟ್ರ ಮತ್ತು ಗುಜರಾತ್‌ನಲ್ಲಿ ಈಗಾಗಲೇ ಪ್ರಾರಂಭವಾಗಿರುವ ಹಸಿರು ಜಲಜನಕ ಉತ್ಪಾದನೆಯ ಯೋಜನೆಗಳು ಯಶಸ್ವಿಯಾದಲ್ಲಿ ಉತ್ಪಾದನೆಯಲ್ಲಿ ವಿಶ್ವದಲ್ಲಿ ನಾವೇ ನಂಬರ್ ಒನ್ ಆಗುತ್ತೇವೆ.

ವಾಚಕರ ವಾಣಿ

ಗುಮಾನಿ, ಗೊಂದಲಕ್ಕೆ ಅವಕಾಶ ಬೇಡ

ಅಖಂಡ ಹಿಂದೂ ರಾಷ್ಟ್ರಕ್ಕಾಗಿ 501 ಪುಟಗಳ ಸಂವಿಧಾನ ಸಿದ್ಧಗೊಂಡಿದೆ. ಅದನ್ನು ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭಮೇಳದಲ್ಲಿ ಮುಂದಿನ ತಿಂಗಳು 3ರಂದು ಬಹಿರಂಗ ಮಾಡಲಾಗುತ್ತದೆ. ಶಂಕರಾಚಾರ್ಯರು ಸ್ಥಾಪಿಸಿದ ನಾಲ್ಕು ಪೀಠಗಳ ಪೀಠಾಧಿಪತಿಗಳು ಒಪ್ಪಿಗೆ ನೀಡಿದ ಬಳಿಕ ಸಂವಿಧಾನವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುತ್ತದೆ ಎಂಬ ಸುದ್ದಿ (ಪ್ರ.ವಾ., ಜ. 26) ಜನಸಾಮಾನ್ಯರಲ್ಲಿ ಗೊಂದಲ ಮೂಡಿಸುವಂತಹದು. ಕುಂಭಮೇಳದಲ್ಲಿ ಸಂತರು ಧಾರ್ಮಿಕ ಆಚರಣೆಗಳನ್ನು ಪೂರೈಸುವುದು ರೂಢಿ. ಸಂವಿಧಾನ ರಚಿಸಲು ಅವರನ್ನು ಕೇಳಿಕೊಂಡವರು ಯಾರು? ಅದಕ್ಕೂ ಅವರಿಗೂ ಏನು ಸಂಬಂಧ? ಈಗ ಅದರ ಅಗತ್ಯ ಏನಿದೆ?

ಧರ್ಮನಿರಪೇಕ್ಷ ಸಂವಿಧಾನವನ್ನು ಭಾರತ ಒಪ್ಪಿದೆ. ಅದರ ಆಧಾರದಲ್ಲಿ ದೇಶ ಮುನ್ನಡೆಯುತ್ತಿದೆ. ಹೀಗಿರುವಾಗ ಇಂತಹ ಪ್ರಯತ್ನವು ದೇಶದಲ್ಲಿ ಗುಟ್ಟಾಗಿ ಏನೋ ನಡೆಯುತ್ತಿದೆ ಎಂಬ ಗುಮಾನಿಗಳಿಗೆ ಕಾರಣವಾಗುತ್ತದೆ. ಅದಕ್ಕೆ ಆಸ್ಪದ ಕೊಡಬಾರದು. ಈ ದಿಸೆಯಲ್ಲಿ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಲಿ.

ಚಂದ್ರಪ್ರಭ ಕಠಾರಿ, ಬೆಂಗಳೂರು

ಟ್ರಂಪ್ ನಿರ್ಧಾರ ದುರದೃಷ್ಟಕರ

ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಕೂಡಲೇ ಡೊನಾಲ್ಡ್ ಟ್ರಂಪ್ ಅವರು ಅನೇಕ ವಿವಾದಾಸ್ಪದ ನಿರ್ಧಾರಗಳನ್ನು ಕೈಗೊಂಡಿದ್ದಾರೆ. ವಿಶ್ವ ಆರೋಗ್ಯ ಸಂಸ್ಥೆಯಿಂದ ಹೊರಬರುವುದಾಗಿಯೂ ಪ್ರಕಟಿಸಿದ್ದಾರೆ. ಈ ನಿರ್ಧಾರವು ಜಾಗತಿಕ ನೆಲೆಯಲ್ಲಿ ಗಂಭೀರ ಪರಿಣಾಮ ಬೀರುವಂತಹದು; ತರಾತುರಿಯಲ್ಲಿ ಕೈಗೊಳ್ಳುವಂತಹ ನಿರ್ಧಾರ ಖಂಡಿತ ಆಗಿರಲಿಲ್ಲ.

ಜಗತ್ತಿನಲ್ಲಿ ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಣ ಮಾಡುವಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ಮಹತ್ತರ ಪಾತ್ರ ವಹಿಸುತ್ತಿದೆ. ಹೀಗಿರುವಾಗ ಅಮೆರಿಕ ಹೀಗೆ ದಿಢೀರನೆ ನಿರ್ಧಾರ ಕೈಗೊಂಡು, ಸಂಸ್ಥೆಗೆ ದೇಣಿಗೆ ನಿಲ್ಲಿಸಿದರೆ ಅದರ ದುಷ್ಪರಿಣಾಮಗಳು ಹಿಂದುಳಿದ ದೇಶಗಳ ಬಡ ವರ್ಗಗಳನ್ನು ಬಾಧಿಸುತ್ತವೆ. ಆದಕಾರಣ, ತನ್ನ ನಿರ್ಧಾರದಿಂದ ಹಿಂದೆ ಸರಿಯುವಂತೆ ಅಮೆರಿಕದ ಮೇಲೆ ಒತ್ತಡ ಹೇರುವ ಕೆಲಸವನ್ನು ಜಗತ್ತಿನ ಎಲ್ಲ ರಾಷ್ಟ್ರಗಳು ಮಾಡಬೇಕಿದೆ.

ಮುಳ್ಳೂರು ಪ್ರಕಾಶ್, ಮೈಸೂರು

ಬಾಣಂತಿಯರ ಆರೈಕೆಗೆ ಬೇಕಿದೆ ವಿಶೇಷ ಮುತುವರ್ಜಿ

ಸರ್ಕಾರಿ ಆಸ್ಪತ್ರೆಗಳಲ್ಲಿ ಬಾಣಂತಿಯರ ಆರೈಕೆಗೆ ವಿಶೇಷ ಮುತುವರ್ಜಿ ವಹಿಸಬೇಕಾಗಿದೆ. ಬಾಣಂತಿಯರ ಸಾವಿನ ಸುದ್ದಿಗಳು ಇತ್ತೀಚಿನ ದಿನಗಳಲ್ಲಿ ಪದೇಪದೇ ವರದಿಯಾಗುತ್ತಿರುವುದು ಆತಂಕಕಾರಿ. ಈ ಬೆಳವಣಿಗೆಯು ಸರ್ಕಾರಿ ಆಸ್ಪತ್ರೆಗಳ ಬಗೆಗಿನ ವಿಶ್ವಾಸವನ್ನು ಮತ್ತಷ್ಟು ಕುಗ್ಗಿಸುವಂತಹದು. ಇದಕ್ಕೆ ಅವಕಾಶ ಕೊಡಬಾರದು. ಸರ್ಕಾರಿ ಆಸ್ಪತ್ರೆಗಳಿಗೆ ಸಂಬಂಧಪಟ್ಟ ಸಚಿವರು ಹಾಗೂ ಇಲಾಖೆಯ ಹಿರಿಯ ಅಧಿಕಾರಿಗಳು ಖುದ್ದು ಭೇಟಿ ನೀಡಿ, ಅಲ್ಲಿನ ಕುಂದು-ಕೊರತೆಗಳನ್ನು ಆಲಿಸಬೇಕು ಮತ್ತು ಸರಿಪಡಿಸಲು ತ್ವರಿತ ಕ್ರಮ ಜರುಗಿಸಬೇಕು. ಅಗತ್ಯ ಮೂಲ ಸೌಕರ್ಯ ಕಲ್ಪಿಸುವ ಮೂಲಕ ಸರ್ಕಾರಿ ಆಸ್ಪತ್ರೆಗಳನ್ನು ಬಲಪಡಿಸಬೇಕು.

ಶ್ರುತಿ ಶ್ರೀನಿವಾಸ, ರಾಂಪುರ, ಚನ್ನಪಟ್ಟಣ

ಅಪಘಾತ ನಿಯಂತ್ರಣಕ್ಕೆ ಅರಿವೇ ಮದ್ದು

'ರಸ್ತೆ ಅಪಘಾತ: ಚಾಚೋಣ ಸಹಾಯಹಸ್ತ' ಲೇಖನದಲ್ಲಿ (ಪ್ರ.ವಾ., ಜ. 25) ಎಂ.ಎ. ಸಲೀಂ ಅವರು ಪ್ರಸ್ತಾಪಿಸಿರುವ ಅಂಶಗಳು ಸರಿಯಾಗಿವೆ. ಈ ವಿಚಾರದಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸುವುದು ಸರಿಯಾದ ಕ್ರಮ. ಅದರೊಂದಿಗೆ ರಸ್ತೆ ಅಪಘಾತಗಳಿಗೆ ಕಾರಣವಾಗುತ್ತಿರುವ ಕೆಲವು ಪ್ರಮುಖ ಅಂಶಗಳ ಬಗೆಗೂ ಅರಿವು ಮೂಡಿಸುವ ಕೆಲಸ ದೊಡ್ಡ ಮಟ್ಟದಲ್ಲಿ ಆಗಬೇಕಿದೆ.

ಮೊಬೈಲ್ ಫೋನ್‌ನಲ್ಲಿ ಮಾತನಾಡುತ್ತಾ ವಾಹನ ಓಡಿಸುವುದು, ಪ್ರಖರವಾದ ಹೆಡ್‌ಲೈಟ್ ಬೆಳಕು, ಮದ್ಯ ಸೇವಿಸಿ ವಾಹನ ಓಡಿಸುವುದು, ರಸ್ತೆ ನಿಯಮಗಳನ್ನು ಪಾಲಿಸದೇ ನುಗ್ಗುವುದು, ನಿರ್ಬಂಧಿತ ಪ್ರದೇಶದಲ್ಲಿ ಪಾರ್ಕಿಂಗ್, ಅತಿಯಾದ ವೇಗ... ಇಂತಹವುಗಳು ಅಪಘಾತಗಳಿಗೆ ಕಾರಣವಾಗುತ್ತಿವೆ. ಇವುಗಳನ್ನು ನಿಯಂತ್ರಿಸುವ ಕೆಲಸ ಆಗಬೇಕು. ದಂಡ ವಿಧಿಸುವುದೊಂದೇ ಪರಿಹಾರ ಆಗಲಾರದು. ಪರ್ಯಾಯ ಪರಿಣಾಮಕಾರಿ ಕ್ರಮಗಳ ಬಗ್ಗೆ ಗಂಭೀರವಾಗಿ ಯೋಚಿಸಬೇಕು ಮತ್ತು ಸೂಕ್ತ ಅನ್ನಿಸಿದ್ದನ್ನು ಅಳವಡಿಸಿಕೊಳ್ಳಬೇಕು.

ಡಿ.ಜಿ. ಮಂಜುನಾಥ, ತೀರ್ಥಹಳ್ಳಿ

ದುರಾಸೆ, ದುರ್ನಡತೆಗೆ ಬೇಕಿದೆ ಕಡಿವಾಣ

'ತೊಂದರೆ ನೀಡುವ ಫೈನಾನ್ಸ್ ಕಂಪನಿಗಳ ಕಡೆಗೆ ಹೋಗುವುದನ್ನು ಜನ ನಿಲ್ಲಿಸಬೇಕು. ಸರ್ಕಾರವೇ ಬಡ್ಡಿರಹಿತ ಸಾಲ ನೀಡುತ್ತಿದೆ. ಅದರ ಪ್ರಯೋಜನ ಪಡೆಯಬೇಕು' ಎಂದಿದ್ದಾರೆ (ಪ್ರ.ವಾ., ಜ. 25) ಕೃಷಿ ಸಚಿವ ಎನ್. ಚಲುವರಾಯಸ್ವಾಮಿ. ಮೈಕ್ರೊ ಫೈನಾನ್ಸ್ ಕಂಪನಿಗಳ ಕಿರುಕುಳಕ್ಕೆ ಸಂಬಂಧಿಸಿದಂತೆ ಸಚಿವರು ಈ ರೀತಿ ಹೇಳಿದ್ದಾರೆ. ಆದರೆ, ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳು ಯಾವುದೇ ಆಸ್ತಿ ಅಡಮಾನ ಇಲ್ಲದೆ ಯಾರಿಗೂ ಸಾಲ ನೀಡುವುದೇ ಇಲ್ಲವಲ್ಲ. ಮೈಕ್ರೊ ಫೈನಾನ್ಸ್ ಕಂಪನಿಗಳು ನಾಡಿನಾದ್ಯಂತ ಹರಡಿಕೊಳ್ಳಲು ಇದೇ ಕಾರಣ.

ಪ್ರಸ್ತುತ ಸಮಸ್ಯೆ ಇರುವುದು ಸಾಲ ನೀಡಿಕೆಯಲ್ಲಿ ಅಲ್ಲ; ಸಾಲ ವಸೂಲಾತಿಯಲ್ಲಿ. ಮೈಕ್ರೊ ಫೈನಾನ್ಸ್ ಕಂಪನಿಗಳು ಗುಂಪು ಸಾಲದ ಕುಣಿಕೆ ಹಾಕಿ, ಸಾಲ ನೀಡಿ, ಸಾಲ ವಸೂಲು ಮಾಡುತ್ತವೆ. ಗುಂಪಿನ ಒಬ್ಬರು ಸಾಲದ ಕಂತು ಪಾವತಿಸುವಲ್ಲಿ ವಿಳಂಬ ಮಾಡಿದರೆ, ಗುಂಪಿನಲ್ಲಿ ಜಗಳ ಶುರುವಾಗುತ್ತದೆ. ಜಗಳದಿಂದಾಗಿ, ಸಾಲ ಪಡೆದವರು ಊರು ಬಿಟ್ಟು ಹೋಗುವಂತಹ ಸ್ಥಿತಿ ಉಂಟಾಗುತ್ತದೆ. ಆತ್ಮಹತ್ಯೆಗೂ ದಾರಿ ತೆಗೆಯಬಹುದು. ಇದು ಸಮಸ್ಯೆ. ಆದ್ದರಿಂದ ಮೈಕ್ರೊ ಫೈನಾನ್ಸ್ ಕಂಪನಿಗಳ ದುರಾಸೆಗೆ, ದುರ್ನಡತೆಗೆ ಕಡಿವಾಣ ಹಾಕಬೇಕು.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಉತ್ತರಾಖಂಡ ಯುಸಿಸಿಯಲ್ಲೇನಿದೆ?



ಉತ್ತರಾಖಂಡ ಸರ್ಕಾರವು ರಾಜ್ಯದಲ್ಲಿ ಏಕರೂಪ ನಾಗರಿಕ ಸಂಹಿತೆಯನ್ನು (ಯುಸಿಸಿ) ಸೋಮವಾರದಿಂದ ಜಾರಿಗೊಳಿಸುವುದಾಗಿ ಘೋಷಿಸಿದೆ. ಯುಸಿಸಿಯನ್ನು ಜಾರಿಗೆ ತಂದ ಮೊದಲ ರಾಜ್ಯ ಉತ್ತರಾಖಂಡ. ಈ ಸಂಹಿತೆಯು ವಿವಾಹ, ವಿಚ್ಛೇದನ, ಉತ್ತರಾಧಿಕಾರ, ಆಸ್ತಿ ಹಕ್ಕಿಗೆ ಸಂಬಂಧಿಸಿದ ಎಲ್ಲ ಕಾನೂನುಗಳನ್ನು ಒಂದೇ ವೇದಿಕೆಯಡಿ ತರುತ್ತದೆ. ಬಿಜೆಪಿಯು 2022ರ ವಿಧಾನಸಭಾ ಚುನಾವಣಾ ಸಂದರ್ಭದಲ್ಲೇ ಯುಸಿಸಿ ಜಾರಿಗೆ ತರುವ ಭರವಸೆಯನ್ನು ನೀಡಿತ್ತು. ಕಳೆದ ವರ್ಷದ ಫೆಬ್ರುವರಿ 7ರಂದು ಮಸೂದೆಯನ್ನು ಉತ್ತರಾಖಂಡ ವಿಧಾನಸಭೆ ಅಂಗೀಕರಿಸಿತ್ತು. ಸಚಿವ ಸಂಪುಟ ಸಭೆ ಯುಸಿಸಿ ನಿಯಮಗಳಿಗೆ ವಾರದ ಹಿಂದೆ ಅನುಮೋದನೆ ನೀಡಿತ್ತು. ಉತ್ತರಾಖಂಡದಲ್ಲಿ ಬುಡಕಟ್ಟು ಸಮುದಾಯದವರನ್ನು ಬಿಟ್ಟು ಎಲ್ಲರಿಗೂ ಈ ಕಾನೂನು ಅನ್ವಯವಾಗವಾಗಲಿದೆ. ಅದರಲ್ಲಿರುವ ಕೆಲವು ಪ್ರಮುಖ ಅಂಶಗಳು ಹೀಗಿವೆ

ಪ್ರಜಾವಾಣಿ ವಾರ್ತೆ



ಮದುವೆ ಮತ್ತು ನೋಂದಣಿ

- **ಬಹುಪತಿ/ಪತ್ನಿತ್ವಕ್ಕೆ ನಿರ್ಬಂಧ:** ಈ ಕಾನೂನು ಪುರುಷರು ಒಬ್ಬರಿಗಿಂತ ಹೆಚ್ಚು ಪತ್ನಿಯರನ್ನು ಮತ್ತು ಮಹಿಳೆಯರು ಒಬ್ಬರಿಗಿಂತ ಹೆಚ್ಚು ಗಂಡಂದಿರನ್ನು ಹೊಂದುವುದನ್ನು ನಿರ್ಬಂಧಿಸುತ್ತದೆ. ಕಾಯ್ದೆಯ ಸೆಕ್ಷನ್ (4)ರಲ್ಲಿ ಉಲ್ಲೇಖಿಸಿರುವ ಮೊದಲ ಷರತ್ತೇ ಇದನ್ನು ಪ್ರಸ್ತಾಪಿಸುತ್ತದೆ. 'ಮದುವೆಯಾಗುವ ಸಂದರ್ಭದಲ್ಲಿ ಪುರುಷ ಅಥವಾ ಮಹಿಳೆಯು, ಗಂಡ ಅಥವಾ ಹೆಂಡತಿಯನ್ನು ಹೊಂದಿರಬಾರದು' ಎಂದು ಅದು ಹೇಳುತ್ತದೆ
- ಗಂಡು ಮತ್ತು ಹೆಣ್ಣಿನ ಮದುವೆ ವಯಸ್ಸಿನಲ್ಲಿ ಬದಲಾವಣೆ ಮಾಡಲಾಗಿಲ್ಲ. ಈಗ ಇರುವಂತೆಯೇ ಕನಿಷ್ಠ 21 ವರ್ಷ ವಯಸ್ಸಿನ ಹುಡುಗ ಮತ್ತು ಕನಿಷ್ಠ 18 ವರ್ಷದ ಹೆಣ್ಣು ವಿವಾಹ ಬಂಧನಕ್ಕೆ ಒಳಪಡಬಹುದು
- **ಮದುವೆ ನೋಂದಣಿ ಕಡ್ಡಾಯ:** ಯುಸಿಸಿ ಕಾಯ್ದೆಯು ವಿವಾಹ ನೋಂದಣಿ ಮಾಡುವುದನ್ನು ಕಡ್ಡಾಯಗೊಳಿಸಿದೆ. ರಾಜ್ಯದಲ್ಲಿ ನೆಲಸಿರುವ ಮತ್ತು ಹೊರರಾಜ್ಯದಲ್ಲಿ ನೆಲಸಿದ ರಾಜ್ಯದವರು ಕೂಡ ಮದುವೆಯಾದ 60 ದಿನಗಳ (ಎರಡು ತಿಂಗಳು) ಒಳಗಾಗಿ ತಮ್ಮ ವ್ಯಾಪ್ತಿಯ ಉಪನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿ ಮಾಡಿಸಿಕೊಳ್ಳಬೇಕು. ಹಾಗಿದ್ದರೂ ನೋಂದಣಿ ಮಾಡದ ಮದುವೆಯನ್ನು ಈ ಕಾನೂನು ಅಮಾನ್ಯ ಮಾಡುವುದಿಲ್ಲ. ಆದರೆ, ನೋಂದಣಿ ಮಾಡದೇ ಇದ್ದರೆ, ₹10 ಸಾವಿರ ದಂಡ, ಮೂರು ತಿಂಗಳ ಜೈಲು ಶಿಕ್ಷೆ ವಿಧಿಸಬಹುದು
- ವಿವಾಹ ನೋಂದಣಿ ಸಮಯದಲ್ಲಿ ವಧು/ವರರು ಉದ್ದೇಶಪೂರ್ವಕವಾಗಿ ತಪ್ಪು ಮಾಹಿತಿ ನೀಡಿದರೆ ₹25 ಸಾವಿರದವರೆಗೆ ದಂಡ ತೆರಬೇಕಾಗುತ್ತದೆ
- ಸಂಹಿತೆ ಜಾರಿಗೆ ಬರುವ ಮೊದಲೇ ಮದುವೆಯಾಗಿದ್ದವರು ಕೂಡ ಸಂಹಿತೆ ಜಾರಿಗೆ ಬಂದ ಆರು ತಿಂಗಳ ಒಳಗಾಗಿ ಘೋಷಣಾ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸಬೇಕು
- ಆಯಾ ಧರ್ಮದವರು, ಸಮುದಾಯದವರು ತಮ್ಮ ಧಾರ್ಮಿಕ ಸಂಪ್ರದಾಯ, ಸಂಸ್ಕೃತಿಯ ಅನುಸಾರ ಮದುವೆ ಮಾಡಿಕೊಳ್ಳುವುದಕ್ಕೆ ಕಾನೂನು ಅವಕಾಶ ಕಲ್ಪಿಸುತ್ತದೆ
- ಮದುವೆ ರೀತಿಯಲ್ಲಿಯೇ, ಸಂಹಿತೆ ಜಾರಿಗೆ ಬಂದ ನಂತರ ವಿಚ್ಛೇದನ ಆಗಿದ್ದರೆ, ಈ ಮಾಹಿತಿಯನ್ನು ಸರ್ಕಾರಕ್ಕೆ ತಿಳಿಸಬೇಕು ಎಂದು ಕಾಯ್ದೆಯ ಸೆಕ್ಷನ್ 11 (1) ಹೇಳುತ್ತದೆ


ಸಮಾನ ಆಸ್ತಿ ಹಕ್ಕು

ಸಂಹಿತೆಯು ಆಸ್ತಿಯಲ್ಲಿ ಪತ್ನಿ, ಹೆಣ್ಣು ಮಕ್ಕಳೂ ಸೇರಿದಂತೆ ಎಲ್ಲ ಮಕ್ಕಳು ಮತ್ತು ಪೋಷಕರಿಗೆ ಸಮಾನ ಹಕ್ಕುಗಳನ್ನು ಖಚಿತಪಡಿಸುತ್ತದೆ. ಒಂದು ವೇಳೆ ಆಸ್ತಿ ಮಾಲೀಕನಿಗೆ ಪತ್ನಿ, ಮಕ್ಕಳು ಇಲ್ಲದಿದ್ದರೆ, ಅವರ ನಿಧನದ ನಂತರ ಅವರ ಎರಡನೇ ಸಾಲಿನ ಸಂಬಂಧಿಕರು ಆಸ್ತಿಯನ್ನು ಸಮಾನವಾಗಿ ಹಂಚಿಕೊಳ್ಳುವುದಕ್ಕೆ ಅವಕಾಶ ನೀಡುತ್ತದೆ.



ವಿಚ್ಛೇದನಕ್ಕೆ ಏನು ನಿಯಮ?

- ಕೋರ್ಟ್‌ನ ಆದೇಶವಿಲ್ಲದೇ ಯಾವ ಮದುವೆಯೂ ಅನೂರ್ಜಿತವಾಗದು. ನಿಯಮ ಉಲ್ಲಂಘಿಸಿದರೆ ಮೂರು ವರ್ಷಗಳ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ
- ಸೆಕ್ಷನ್ 28ರ ಪ್ರಕಾರ, ಮದುವೆಯಾಗಿ ಕನಿಷ್ಠ ಒಂದು ವರ್ಷದವರೆಗೆ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸುವಂತಿಲ್ಲ. ಒಂದು ವೇಳೆ ಅರ್ಜಿದಾರ 'ತೀವ್ರ ಕಷ್ಟ ಅನುಭವಿಸಿದರೆ' ಅಥವಾ ಪ್ರತಿವಾದಿಯು 'ತೀರಾ ದುಷ್ಟತನ' ತೋರ್ಪಡಿಸಿದ ಸಂದರ್ಭದಲ್ಲಿ ಒಂದು ವರ್ಷದ ಒಳಗಾಗಿ ಸಲ್ಲಿಸಿರುವ ವಿಚ್ಛೇದನ ಅರ್ಜಿಯನ್ನು ಪರಿಗಣಿಬಹುದು
- ಯಾವೆಲ್ಲ ಕಾರಣಗಳಿಗೆ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಬಹುದು ಎಂದು ಪಟ್ಟಿ ಮಾಡಲಾಗಿದ್ದು, ಅದರಲ್ಲಿ ಧಾರ್ಮಿಕ ಮತಾಂತರವನ್ನೂ (ಸೆಕ್ಷನ್ 25 (iv) ಒಂದು ಕಾರಣವಾಗಿ ಉಲ್ಲೇಖಿಸಲಾಗಿದೆ
- ಮಗು ಇದ್ದ ದಂಪತಿ ವಿಚ್ಛೇದನ ಪಡೆದರೆ, ಮಗುವಿಗೆ ಐದು ವರ್ಷಗಳಾಗುವವರೆಗೆ ಅದು ತಾಯಿಯೊಂದಿಗೆ ಇರಬೇಕು



ಸಹ–ಜೀವನ ನೋಂದಣಿಯೂ ಕಡ್ಡಾಯ

- ಸಂಹಿತೆಯ ಸೆಕ್ಷನ್ 378 ಸಹ–ಜೀವನದ (ಲಿವ್ ಇನ್ ರಿಲೇಷನ್‌ಶಿಪ್) ಬಗ್ಗೆ ಪ್ರಸ್ತಾಪಿಸುತ್ತದೆ. ರಾಜ್ಯದವರು ಅಥವಾ ಹೊರಗಿನವರೇ ಆಗಿರಲಿ, ಯಾವುದೇ ಪುರುಷ ಮತ್ತು ಮಹಿಳೆಯು ಉತ್ತರಾಖಂಡದಲ್ಲಿ ಸಹ ಜೀವನ ನಡೆಸುತ್ತಿದ್ದರೆ ಅವರು ಆ ವ್ಯಾಪ್ತಿಯ ನೋಂದಣಾಧಿಕಾರಿಗಳ ಮುಂದೆ, ಸಹಜೀವನ ನಡೆಸಲು ಆರಂಭಿಸಿದ 30 ದಿನಗಳ ಒಳಗಾಗಿ 'ಹೇಳಿಕೆ ದಾಖಲಿಸಬೇಕು' (ಸೆಕ್ಷನ್ 381). ಅರ್ಥಾತ್ ನೋಂದಣಿ ಮಾಡಿಕೊಳ್ಳಬೇಕು
- ಉತ್ತರಾಖಂಡದಿಂದ ಹೊರಗಡೆ ನೆಲಸಿರುವ ರಾಜ್ಯದವರು ಕೂಡ ಸಹ–ಜೀವನ ನಡೆಸುತ್ತಿದ್ದರೆ, ಅವರ ವ್ಯಾಪ್ತಿಯ ನೋಂದಣಾಧಿಕಾರಿ ಮುಂದೆ ಹೇಳಿಕೆ ದಾಖಲಿಸಬಹುದು
- ಸಹ–ಜೀವನ ಸಂಬಂಧ ಮುರಿದು ಬಿದ್ದರೆ, ಆ ವಿಚಾರವನ್ನೂ ನೋಂದಣಾಧಿಕಾರಿಗಳ ಗಮನಕ್ಕೆ ತರಬೇಕು. ಹುಡುಗ ಅಥವಾ ಹುಡುಗಿ ವಯಸ್ಸು 18–21 ವರ್ಷದ ನಡುವೆ ಇದ್ದರೆ, ನೋಂದಣಿಯಾಗಿರುವುದನ್ನು ಅವರ ಪೋಷಕರ ಗಮನಕ್ಕೆ ತರಲಾಗುತ್ತದೆ
- ನೋಂದಣಾಧಿಕಾರಿಗಳಿಗೆ ಮಾಹಿತಿ ಸಿಕ್ಕಿದ ಬಳಿಕ ಅವರು ತನಿಖೆ ನಡೆಸುತ್ತಾರೆ. ಸಹ ಜೀವನ ನಡೆಸುತ್ತಿರುವವರಲ್ಲಿ ಅಪ್ರಾಪ್ತ ವಯಸ್ಸಿನವರು ಇದ್ದಾರೆಯೇ? ಅವರಿಗೆ ಮದುವೆಯಾಗಿದೆಯೇ ಅಥವಾ ಬೇರೆ ಸಂಬಂಧ ಹೊಂದಿದ್ದಾರೆಯೇ ಎಂಬುದನ್ನೆಲ್ಲ ಪರಿಶೀಲನೆ ನಡೆಸುತ್ತಾರೆ. 30 ದಿನಗಳ ಒಳಗಾಗಿ ಅವರು ಈ ಬಗ್ಗೆ ನಿರ್ಧರಿಸುತ್ತಾರೆ. ಸಹ ಜೀವನ ನಡೆಸುತ್ತಿರುವವರು ನಿಯಮ ಉಲ್ಲಂಘಿಸಿರುವುದು ದೃಢಪಟ್ಟರೆ, ಅವರ ನೋಂದಣಿಯನ್ನು ತಿರಸ್ಕರಿಸಬಹುದು
- ಪುರುಷ, ಮಹಿಳೆಯನ್ನು ಕೈಬಿಟ್ಟರೆ, ಪರಿಹಾರ ಕೇಳುವ ಹಕ್ಕು ಆಕೆಗೆ ಇದೆ
- ಸಹ–ಜೀವನ ನಡೆಸುತ್ತಿರುವುದನ್ನು ತಿಂಗಳಲ್ಲಿ ನೋಂದಣಿ ಮಾಡಿಕೊಳ್ಳದಿದ್ದರೆ, ಜೋಡಿಗೆ ಗರಿಷ್ಠ ಮೂರು ತಿಂಗಳ ಜೈಲು ಶಿಕ್ಷೆ ಅಥವಾ ₹10 ಸಾವಿರದ ದಂಡ ಅಥವಾ ಎರಡನ್ನೂ ವಿಧಿಸಲು ಕಾನೂನಿನಲ್ಲಿ ಅವಕಾಶ ಇದೆ. ನೋಂದಣಿ ಸಮಯದಲ್ಲಿ ಸುಳ್ಳು ಮಾಹಿತಿ ನೀಡಿದರೆ ಮೂರು ತಿಂಗಳ ಜೈಲು ಶಿಕ್ಷೆ ಅಥವಾ ₹25 ಸಾವಿರ ದಂಡ ಅಥವಾ ಎರಡನ್ನೂ ಅನುಭವಿಸಬೇಕಾಗುತ್ತದೆ. ನೋಂದಣಾಧಿಕಾರಿ ನೋಟಿಸ್ ನೀಡಿದ ಬಳಿಕವೂ ನೋಂದಣಿ ಮಾಡಿಕೊಳ್ಳದಿದ್ದರೆ ಅವರಿಗೆ ಆರು ತಿಂಗಳ ಜೈಲು ಶಿಕ್ಷೆ/₹25 ಸಾವಿರದ ದಂಡ ಅಥವಾ ಎರಡನ್ನೂ ವಿಧಿಸಬಹುದು



ಗೋವಾದಲ್ಲೂ ಇದೆ ಸಂಹಿತೆ

ಸ್ವತಂತ್ರ ಭಾರತದಲ್ಲಿ ಏಕರೂಪನಾಗರಿಕ ಸಂಹಿತೆಯನ್ನು ಜಾರಿ ಮಾಡುತ್ತಿರುವ ಮೊದಲ ರಾಜ್ಯ ಉತ್ತರಾಖಂಡ. ಆದರೆ, ಗೋವಾದಲ್ಲಿ ಒಂದೂವರೆ ಶತಮಾನಕ್ಕಿಂತಲೂ ಹೆಚ್ಚು ಕಾಲದಿಂದ ಏಕರೂಪ ನಾಗರಿಕ ಸಂಹಿತೆ ಜಾರಿಯಲ್ಲಿದೆ. ಪೋರ್ಚುಗೀಸರು 1867ರಲ್ಲಿ ರೂಪಿಸಿದ್ದ ಯುಸಿಸಿಯನ್ನೇ ಈಗಲೂ ಅಲ್ಲಿ ಪಾಲಿಸಲಾಗುತ್ತಿದೆ.

1961ರಲ್ಲಿ ಗೋವಾವು ಭಾರತದ ಭಾಗವಾಗಿ ಕೇಂದ್ರಾಡಳಿತ ಪ್ರದೇಶವಾದ ಮರು ವರ್ಷ (1962) ಗೋವಾ, ದಮನ್ ಮತ್ತು ದಿಯು ಆಡಳಿತ ಕಾಯ್ದೆಯನ್ನು ಅಂಗೀಕರಿಸಲಾಗಿತ್ತು. ಈ ಕಾಯ್ದೆಯು ಪೋರ್ಚುಗೀಸ್ ಕಾಲದ ನಾಗರಿಕ ಸಂಹಿತೆಯನ್ನೇ ಉಳಿಸಿಕೊಳ್ಳಲು ಅವಕಾಶ ನೀಡಿತ್ತು. ಹಿಂದೂಗಳು, ಮುಸ್ಲಿಮರು, ಕ್ರಿಶ್ಚಿಯನ್ನರು ಸೇರಿದಂತೆ ಎಲ್ಲರೂ ಈ ಸಂಹಿತೆಯನ್ನೇ ಅಲ್ಲಿ ಪಾಲಿಸುತ್ತಿದ್ದಾರೆ.



ಮುಸ್ಲಿಂ ವೈಯಕ್ತಿಕ ಕಾನೂನು ಕೂಡ ರದ್ದು

ಏಕರೂಪ ನಾಗರಿಕ ಸಂಹಿತೆಯು, ಹಿಂದೂ ವಿವಾಹ ಕಾಯ್ದೆಯ ಮಾದರಿಯಲ್ಲಿ, ಮುಸ್ಲಿಂ ವೈಯಕ್ತಿಕ ಕಾನೂನನ್ನು ಕೂಡ ರದ್ದುಪಡಿಸುತ್ತದೆ. ಮುಸ್ಲಿಮರಲ್ಲಿ ಆಚರಣೆಯಲ್ಲಿರುವ ನಿಖಾ ಹಲಾಲಾ, ಇದ್ದತ್ ಮತ್ತು ತ್ರಿವಳಿ ತಲಾಖ್ (ಇದರ ವಿರುದ್ಧ ಸುಪ್ರೀಂ ಕೋರ್ಟ್ ಈಗಾಗಲೇ ತೀರ್ಪು ನೀಡಿದೆ) ಅನ್ನು ನಿರ್ಬಂಧಿಸುತ್ತದೆ. ಸಂಹಿತೆಯಲ್ಲಿ ಬಹುಪತ್ನಿತ್ವದ ಬಗ್ಗೆ ಉಲ್ಲೇಖ ಇದ್ದರೂ, ಈ ಆಚರಣೆಗಳ ಬಗ್ಗೆ ನೇರ ಪ್ರಸ್ತಾಪವಿಲ್ಲ.

ಆದರೆ, ವಿಚ್ಛೇದನದ ಬಳಿಕ ಮರು ವಿವಾಹವಾಗುವ ಬಗ್ಗೆ ಪ್ರಸ್ತಾಪಿಸುವ ಸಂಹಿತೆಯ ಸೆಕ್ಷನ್ 30(2), 'ವ್ಯಕ್ತಿಯೊಬ್ಬರಿಗೆ ತಮ್ಮ ವಿಚ್ಛೇದಿತ ಪತಿ/ಪತ್ನಿಯನ್ನು ಮರು ಮದುವೆಯಾಗುವ ಹಕ್ಕು ಇದೆ. ಆದರೆ, ಮತ್ತೆ ಮದುವೆಯಾಗುವುದಕ್ಕೂ ಮೊದಲು ಆ ವ್ಯಕ್ತಿ ಮೂರನೇ ವ್ಯಕ್ತಿಯೊಂದಿಗೆ ಮದುವೆಯಾಗಿರಬಾರದು' ಎಂದು ಹೇಳುತ್ತದೆ (ಇದು ನಿಖಾ ಹಲಾಲಾ ಕುರಿತಾಗಿ ಇದೆ ಎಂಬುದು ತಜ್ಞರ ಹೇಳಿಕೆ). ಈ ನಿಯಮ ಉಲ್ಲಂಘಿಸಿದವರಿಗೆ ಮೂರು ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು ₹1 ಲಕ್ಷದವರೆಗೆ ದಂಡ ವಿಧಿಸುವುದಕ್ಕೆ ಅವಕಾಶ ಇದೆ.

ಸಂಹಿತೆಯು ಅನೂರ್ಜಿತ ಮದುವೆ, ನ್ಯಾಯಾಲಯದ ಮೂಲಕ ಅಧಿಕೃತವಾಗಿ ಅನೂರ್ಜಿತ ಎಂದು ಘೋಷಿಸುವವರೆಗೆ ಊರ್ಜಿತವಾಗಿರುವ ಮದುವೆ (voidable marriage) ಮತ್ತು ಸಹ–ಜೀವನದ ಸಂದರ್ಭದಲ್ಲಿ ಜನಿಸಿದ ಮಕ್ಕಳಿಗೆ ಕಾನೂನಿನ ಮಾನ್ಯತೆ ನೀಡುತ್ತದೆ.

ಆಧಾರ: ಉತ್ತರಾಖಂಡ ಸಮಾನ ನಾಗರಿಕ ಸಂಹಿತೆ -2024

ಯುಸಿಸಿ ಜಾರಿಗೆ ವಿರೋಧ

ಉತ್ತರಾಖಂಡ ಸರ್ಕಾರದ ನಿರ್ಧಾರಕ್ಕೆ ವಿವಿಧ ವಲಯಗಳಿಂದ ಆಕ್ಷೇಪಗಳು ಬರುತ್ತಿವೆ. ಬಿಜೆಪಿಯು 2019ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಏಕರೂಪ ನಾಗರಿಕ ಸಂಹಿತೆಯ ಬಗ್ಗೆ ಪ್ರಸ್ತಾಪಿಸಿದಾಗಲೂ ತೀವ್ರ ವಿರೋಧ ವ್ಯಕ್ತವಾಗಿತ್ತು. ಅಲ್ಪಸಂಖ್ಯಾತರ ಅದರಲ್ಲೂ ವಿಶೇಷವಾಗಿ ಮುಸ್ಲಿಮರ ಧಾರ್ಮಿಕ ಆಚರಣೆಯ ಹಕ್ಕುಗಳನ್ನು ಇದು ಕಸಿಯುತ್ತದೆ ಎಂಬ ಕೂಗು ಕೇಳಿ ಬಂದಿತ್ತು. ಈಗಲೂ ರಾಷ್ಟ್ರ ಮಟ್ಟದಲ್ಲಿ ಇದನ್ನು ಜಾರಿ ಮಾಡುವುದಕ್ಕೆ ತೀವ್ರ ವಿರೋಧ ಇದೆ. ಬಹುತ್ವ ಸಂಸ್ಕೃತಿಯ ಭಾರತದಲ್ಲಿ ಏಕ ರೂಪ ನಾಗರಿಕ ಸಂಹಿತೆ ಕಾರ್ಯಸಾಧುವಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಉತ್ತರಾಖಂಡ ಜಾರಿಗೆ ತರುತ್ತಿರುವ ಸಂಹಿತೆಯಲ್ಲಿ ಸಹ–ಜೀವನ ನಡೆಸುವುದನ್ನೂ ನೋಂದಣಿ ಮಾಡುವುದನ್ನು ಕಡ್ಡಾಯಗೊಳಿಸಿರುವ ಬಗ್ಗೆಯೂ ಆಕ್ಷೇಪ ಕೇಳಿ ಬಂದಿದೆ. ಇದು ಪುರುಷ ಮತ್ತು ಮಹಿಳೆಯ ಖಾಸಗಿತನದ ಉಲ್ಲಂಘನೆ. ಗಂಡು–ಹೆಣ್ಣು ಆತ್ಮೀಯ ಸಂಬಂಧ ಹೊಂದುವ ಹಕ್ಕನ್ನು ಸಂವಿಧಾನ ನೀಡಿದೆ. ಇದು ಅದರ ಉಲ್ಲಂಘನೆಯಾಗುತ್ತದೆ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸಿನಿ ಬಿಟ್ಸ್



ದುನಿಯಾ ವಿಜಯ್

'ಮಾರುತ'ದಲ್ಲಿ ದುನಿಯಾ ವಿಜಯ್

ಎಸ್ ನಾರಾಯಣ್ ನಿರ್ದೇಶನದ 'ಮಾರುತ' ಚಿತ್ರದ ಚಿತ್ರೀಕರಣ ಮುಕ್ತಾಯಗೊಂಡಿದೆ. ದುನಿಯಾ ವಿಜಯ್ ಈ ಚಿತ್ರದ ಪ್ರಮುಖ ಪಾತ್ರದಲ್ಲಿ ನಟಿಸಿದ್ದು, ಎಸ್ ನಾರಾಯಣ್ ಹಾಗೂ ದುನಿಯಾ ವಿಜಯ್ ಕಾಂಬಿನೇಶನ್‌ನಲ್ಲಿ ಮೂರನೇ ಚಿತ್ರ ಇದಾಗಿದೆ. ಈ ಹಿಂದೆ ಇವರಿಬ್ಬರು ಒಟ್ಟಾಗಿ 'ಚಂಡ', 'ದಕ್ಷ' ಚಿತ್ರಗಳನ್ನು ನೀಡಿದ್ದರು.

ಶ್ರೇಯಸ್ ಕೆ ಮಂಜು ಕೂಡ ಪ್ರಮುಖ ಪಾತ್ರದಲ್ಲಿರುವ ಚಿತ್ರಕ್ಕೆ ಕೆ.ಮಂಜು ಹಾಗೂ ರಮೇಶ್ ಯಾದವ್ ಬಂಡವಾಳ ಹೂಡಿದ್ದಾರೆ. ಬೃಂದಾ ಚಿತ್ರದ ನಾಯಕಿ.

'ಮಾರುತ' ಕಂಟೆಂಟ್ ಆಧಾರಿತ ಚಿತ್ರ. ಇದು ಸಾಮಾನ್ಯರ ಕಥೆ. ಪ್ರತಿ ಮನೆಯಲ್ಲಿ ನಡೆಯುವ ಘಟನೆಗಳೇ ಚಿತ್ರವಾಗಿದೆ. ನಮಗೆ ಗೊತ್ತಿಲ್ಲದ ಹಾಗೆ ನಮ್ಮನ್ನೆಲ್ಲ ಅವರಿಸಿಕೊಂಡಿರುವ ಭೂತ ಈ ಮಾರುತ. ಅದರಿಂದ ಸಮಾಜದ ಮೇಲೆ ಆಗುತ್ತಿರುವ ದುಷ್ಪರಿಣಾಮಗಳೇನು? ಎಂಬುದನ್ನು ಈ ಚಿತ್ರದಲ್ಲಿ ತೋರಿಸಲಾಗಿದೆ' ಎಂದಿದ್ದಾರೆ ನಿರ್ದೇಶಕರು.

ನಿಶ್ವಿಕಾ ನಾಯ್ಡು, ರಂಗಾಯಣ ರಘು, ತಾರಾ ಅನುರಾಧ, ಶರತ್ ಲೋಹಿತಾಶ್ವ, ಪ್ರಮೋದ್ ಶೆಟ್ಟಿ ಮೊದಲಾದವರು ಚಿತ್ರದಲ್ಲಿದ್ದು, ವಿಶೇಷಪಾತ್ರದಲ್ಲಿ ರವಿಚಂದ್ರನ್ ಕಾಣಿಸಿಕೊಂಡಿದ್ದಾರೆ. ಪಿ.ಕೆ.ಹೆಚ್ ದಾಸ್ ಛಾಯಾಚಿತ್ರಗ್ರಹಣ, ಶಿವಪ್ರಸಾದ್ ಯಾದವ್ ಸಂಕಲನವಿದೆ.



ಭರತ್, ಸೌಮ್ಯಾ

'ಅವನಿರಬೇಕಿತ್ತು' ತಂಡಕ್ಕೆ ಶ್ರೀಮುರಳಿ ಸಾಥ್

ವಿಭಿನ್ನ ಶೀರ್ಷಿಕೆಯಿಂದ ಗಮನ ಸೆಳೆದಿರುವ 'ಅವನಿರಬೇಕಿತ್ತು' ಚಿತ್ರದ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. 'ಅಂದಕಾಲತ್ತಿಲ್ಲೆ' ಎಂಬ ರೆಟ್ರೋ ಶೈಲಿಯ ಹಾಡನ್ನು ನಟ ಶ್ರೀಮುರಳಿ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

'ಹಾಡಿನ ಸಾಹಿತ್ಯ ಹೊಸತಾಗಿದೆ. ಟ್ರೆಂಡ್ ಸೆಟ್ ಮಾಡುವ ಹಾಡಿದು. ಹೊಸಬರ ಈ ಯತ್ನಕ್ಕೆ ಒಳಿತಾಗಲಿ' ಎಂದರು ಶ್ರೀಮುರಳಿ. ಅಶೋಕ್ ಸಾಮ್ರಾಟ್ ನಿರ್ದೇಶನದ ಚಿತ್ರಕ್ಕೆ ನೋವಿಕಾ ಸಿನಿ ಕ್ರಿಯೇಶನ್ ಅಡಿಯಲ್ಲಿ ಮುರಳಿ ಬಿ.ಟಿ. ಬಂಡವಾಳ ಹೂಡಿದ್ದಾರೆ.

ಈ ಹಾಡಿಗೆ ವಿಜಯ ಪ್ರಕಾಶ್ ಧ್ವನಿಯಾಗಿದ್ದು, ಲೋಕಿ ತವಸ್ಯ ಸಂಗೀತವಿದೆ. ದೇವರಾಜ್ ಪೂಜಾರಿ , ಪೃಥ್ವಿ ಮಾಲೂರ್ ಛಾಯಾಚಿತ್ರಗ್ರಹಣವಿದೆ. ಸೌಮ್ಯ ಜಾನ್,ಜೈ ಸಿಂಹ, ಪ್ರಶಾಂತ್ ಸಿದ್ದಿ, ಕಿರಣ್ ನಾಯ್ಕ್ ಮುಂತಾದವರು ಚಿತ್ರದಲ್ಲಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಅಮೆರಿಕದ ನೂತನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಅಮೆರಿಕದಲ್ಲಿ ವಲಸಿಗರಿಗೆ ಜನಿಸಿದ ಮಕ್ಕಳು ಹುಟ್ಟಿನಿಂದಲೇ ಅಲ್ಲಿನ ಪೌರತ್ವ ಪಡೆಯುವ ನೀತಿಯನ್ನು ರದ್ದುಗೊಳಿಸಿ ಹೊರಡಿಸಿರುವ ಕಾರ್ಯಾದೇಶ ಭಾರತೀಯರನ್ನು ಮಾತ್ರ ಗುರಿಯಾಗಿಸಿಕೊಂಡಿದೆ ಎಂದು ಹೇಳುವ ಪೋಸ್ಟ್ ಒಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಆದರೆ, ಇದು ಸುಳ್ಳು.



ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಿದಾಗ ಇದೇ ಪೋಸ್ಟ್ ಅನ್ನು ಹಲವರು ಹಂಚಿಕೊಂಡಿರುವುದು ಕಂಡು ಬಂತು. ಟ್ರಂಪ್ ಅವರು ಸಹಿ ಹಾಕಿದ ಕಾರ್ಯಾದೇಶವನ್ನು ಪರಿಶೀಲನೆ ನಡೆಸಿದಾಗ ಅದರಲ್ಲಿ ನಿರ್ದಿಷ್ಟವಾಗಿ ಭಾರತದವರು ಎಂದು ಉಲ್ಲೇಖಿಸಿಲ್ಲ. ಅಕ್ರಮವಾಗಿ ಅಮೆರಿಕ ಪ್ರವೇಶಿಸಿದವರು ಮತ್ತು ಅಧಿಕೃತವಾಗಿ ವಲಸೆ ಬಂದವರಿಗೆ ಇದು ಅನ್ವಯವಾಗುತ್ತದೆ ಎಂದು ಅದರಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿದೆ. ಇದಲ್ಲದೇ, ಮಾಧ್ಯಮಗಳಲ್ಲಿ ಬಂದ ವರದಿಗಳು ಕೂಡ ಭಾರತೀಯರು ಸೇರಿದಂತೆ ಎಲ್ಲ ವಲಸಿಗರಿಗೆ ಈ ಕಾರ್ಯಾದೇಶ ಅನ್ವಯವಾಗುತ್ತದೆ ಎಂದು ಹೇಳಿವೆ ಎಂಬುದಾಗಿ ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ಗುರುಗಳ ನುಡಿ

ನುಡಿ ಬೆಳಗು 118



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ಭಾರತದ ಪರಂಪರೆಯಲ್ಲಿ ಬೆಳಕಿನ ಆರಾಧನೆಗೆ ಬಹಳ ಮಹತ್ವ ಇದೆ. ಬೆಳಕಿಗೆ ಈ ದೇಶ ಬಹಳ ಬೆಲೆ ಕೊಡುತ್ತದೆ. ಭಾರತೀಯ ಎಂಬ ಶಬ್ದದ ಅರ್ಥವೇ ಅದನ್ನು ಧ್ವನಿಸುತ್ತದೆ. ಭಾರತ ಎಂಬ ಶಬ್ದವೇ ಮಹತ್ವದ್ದು. 'ಭಾ' ಎಂದರೆ ಬೆಳಕು, 'ರತ' ಎಂದರೆ ಪ್ರೀತಿಸೋದು. ಯಾವ ದೇಶದಲ್ಲಿ ಬೆಳಕನ್ನು ಪ್ರೀತಿಸುವ ಜನ ಇರ್ತಾರೋ ಅವರು ಭಾರತೀಯರು. ಬೆಳಕಿಗೆ ಬಹಳ ಮಹತ್ವ ಇದೆ. ಟೆನಿಸನ್ ಎಂಬ ಆಂಗ್ಲ ಕವಿ 'ಮನುಷ್ಯ ಎಂದರೆ ಜ್ಞಾನವೆಂಬ ಬೆಳಕಿಗೆ ಹಂಬಲಿಸುವ ಶಿಶು' ಎಂದು ಹೇಳುತ್ತಾನೆ. ನಾವು ಆರತಿ ಮಾಡಿದ ನಂತರ ಕೆಲವೇ ಹೊತ್ತಿನಲ್ಲಿ ಬತ್ತಿ ಸುಟ್ಟು ಹೋಗುತ್ತದೆ. ಎಣ್ಣೆ ಖಾಲಿಯಾಗುತ್ತದೆ. ದೀಪ ಆರುತ್ತದೆ. ಆದರೆ ಸಂತರು ಹಚ್ಚುವ ದೀಪ ಎಂದೂ ಆರುವುದಿಲ್ಲ. ಅವರು ನಮ್ಮ ಹೃದಯದಲ್ಲಿ ಜ್ಞಾನ ಮತ್ತು ಪ್ರೇಮದ ದೀಪ ಹಚ್ಚುತ್ತಾರೆ. ನಾವು ಹಚ್ಚುವ ದೀಪ, ಆರುವ ದೀಪ. ಅವರು ಹಚ್ಚುವ ದೀಪ ಆರದ ದೀಪ. ನಂದಾದೀಪ. ಸದಾ ಎಲ್ಲರ ಅಂತರಂಗದಲ್ಲಿ ಉರಿಯುತ್ತಿರುತ್ತದೆ.

ಸಮುದ್ರದಲ್ಲಿ ದೋಣಿಗಳು ಗಾಳಿಯ ಹೊಡೆತಕ್ಕೆ,ಅಲೆಗಳ ಹೊಡೆತಕ್ಕೆ ಎಲ್ಲೆಲ್ಲಿಯೂ ಹೋಗಿ ಬಿಡುತ್ತವೆ. ಅವುಗಳಿಗೆ ದಾರಿ ಕಾಣೋದಿಲ್ಲ. ದೋಣಿಗಳು ದಾರಿ ತಪ್ಪಿದರೂ ಅವುಗಳಿಗೆ ತಮ್ಮ ಪಥ ಗೊತ್ತಾಗಲಿ ಎಂದು ಎಲ್ಲ ಬಂದರುಗಳಲ್ಲಿಯೂ ಒಂದು ಲೈಟ್ ಹೌಸ್ ಮಾಡಿರುತ್ತಾರೆ. ಬಹಳ ಎತ್ತರದಲ್ಲಿ ಇದನ್ನು ಸ್ಥಾಪಿಸಿರುತ್ತಾರೆ. ಸಮುದ್ರದಲ್ಲಿ ದಾರಿ ತಪ್ಪಿದ ನಾವಿಕರಿಗೆ ಈ ಲೈಟ್ ಹೌಸ್ ಗಳು ದಾರಿದೀಪಗಳಾಗಿವೆ. ಹಾಗೆಯೇ ನಾವು ಜೀವನದಲ್ಲಿ ಯಾವುದೋ ಕಾರಣದಿಂದ ದಾರಿ ತಪ್ಪಿದ್ದರೆ, ಚಿಂತೆ, ವ್ಯಸನ, ದುಃಖ ದುಮ್ಮಾನ, ಧೂಮಪಾನ, ಮದ್ಯಪಾನ ಮುಂತಾದ ಚಟಗಳಿಂದ ದೇಹವೆಂಬ ನಾವೆಯನ್ನು ಹೊತ್ತ ನಾವು ಜೀವನದಲ್ಲಿ ದಾರಿ ಕಾಣದಂತೆ ಆಗಿ, ಜೀವನವೇ ಮುಗಿಯಿತು ಎಂದುಕೊಂಡಿದ್ದಾಗ ಬೆಳಕನ್ನು ತೋರುವ ಲೈಟ್ ಹೌಸ್ ಎಂದರೆ ಸಂತರು. ಯಾರಿಗೆ ಸಂತರು ಎನ್ನಬೇಕು ಎಂದು ನಿಜಗುಣ ಶಿವಯೋಗಿಗಳು ಅದ್ಭುತವಾಗಿ ಹೇಳಿದ್ದಾರೆ. 'ಯಾರ ಹೃದಯದಲ್ಲಿ ನಿರಂತರ ಪ್ರೇಮ ತುಂಬಿದೆಯೋ, ಯಾರ ಹತ್ತಿರ ಹೋದಾಗ ನಮ್ಮ ಹೃದಯದಲ್ಲಿಯೂ ಪ್ರೇಮದ ತರಂಗಗಳು ಏಳುತ್ತವೆಯೋ ಅಂಥವರನ್ನು ಸಂತರೆನ್ನಬೇಕು' ಎಂದು ಹೇಳುತ್ತಾರೆ ಅವರು.

ಒಂದು ಹುಡುಗ ಹುಡುಗಿಯನ್ನು ಪ್ರೇಮಿಸುತ್ತಾನೆ. ಮೊದಲ ನೋಟದಲ್ಲಿಯೇ ಪ್ರೇಮ ಅಂತಾನೆ. 'ನಾನು ಪ್ರೇಮದಲ್ಲಿ ಬಿದ್ದಿದ್ದೇನೆ' ಎನ್ನುತ್ತಾನೆ. ಪ್ರೇಮದಲ್ಲಿ ಎರಡು ವಿಧ. ಒಂದು ಪ್ರಾಪಂಚಿಕ ಪ್ರೇಮ. ಇನ್ನೊಂದು ಗುರುವಿನ ಪ್ರೇಮ. ಪ್ರಾಪಂಚಿಕ ಪ್ರೇಮ ಬೀಳಿಸುತ್ತದೆ. ಗುರುವಿನ ಪ್ರೇಮ ಜೀವನದಲ್ಲಿ ನಮ್ಮನ್ನು ಎತ್ತರಕ್ಕೆ ಏರಿಸುತ್ತದೆ. ಗುರು ಕರುಣಾಮಯಿ. ತಾಯಿ ಮಗುವನ್ನು ಮಲಗಿಸುವಾಗ ಲಾಲಿ ಹಾಡುತ್ತಾಳೆ. ಮಗು ಮಲಗಿಸಬೇಕು ಅಂತ ಲತಾ ಮಂಗೇಶ್ಕರ್ ಹಾಡು ಹಾಕಿದರೆ, ಶ್ರೇಯಾ ಘೋಶಾಲ್ ಚೆನ್ನಾಗಿ ಹಾಡುತ್ತಾಳೆ ಎಂದು ಅವರ ಹಾಡು ಹಾಕಿದರೆ ಮಗು ಮಲಗುತ್ತದೇನು? ಎಸ್.ಪಿ.ಬಾಲಸುಬ್ರಮಣ್ಯಂ ಹಾಡು ಹಾಕಿದರೆ ಮಗು ಅಳು ನಿಲ್ಲಿಸುತ್ತದೇನು? ತೊಟ್ಟಿಲಲ್ಲಿ ಮಲಗಿದ ಮಗುವಿಗೆ ಇವರ್ಯಾರ ಹಾಡೂ ಬೇಕಾಗಿಲ್ಲ. ಸಂಗೀತವೇ ಗೊತ್ತಿಲ್ಲದ ತಾಯಿಯ ಹಾಡು ಮಾತ್ರ ಮಗುವಿನ ಅಳು ನಿಲ್ಲಿಸಿ ನಿದ್ದೆ ತರಿಸುತ್ತದೆ. ಹಾಗೆಯೇ ಜೀವನದ ದುಃಖಗಳಿಂದ ಕಂಗೆಟ್ಟಿರುವ ಮನಸ್ಸಿಗೆ ಗುರುವಿನ ನುಡಿಗಳು ಜೋಗುಳದಂತೆ ಕಾಣಿಸಿ ಮನಸ್ಸನ್ನು ಶಾಂತಗೊಳಿಸುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಜನವರಿ 27, 2025

ಶ್ರೀಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪೌಷ ಕೃಷ್ಣತ್ರಯೋದಶಿ ಗಂ. 20-35 ನಕ್ಷತ್ರ: ಮೂಲ ಗಂ. 09-02 ಯೋಗ: ಹರ್ಷಣ ಗಂ. 25-57 ಕರಣ: ಗರ ಗಂ. 08-50, ಮಕರ ಮಾಸದ 13 ನೇ ದಿನ, ಮಳೆನಕ್ಷತ್ರ: ಶ್ರವಣ 2.

ರಾಹುಕಾಲ : ಬೆಳಿಗ್ಗೆ 07-30 – 09-00

ಸೂರ್ಯೋದಯ : 07-01 ಸೂರ್ಯಾಸ್ತ : 06-25

ಮುಸ್ಲಿಂ ದಿನಾಂಕ : 26 ರಜಬ್

ದಿನ ವಿಶೇಷ : ಮೇರು ತ್ರಯೋದಶಿ (ಜೈನ್), ಅದೃಷ್ಟ ಸಂಖ್ಯೆ : 3, 8

ಮೇಷ: ಗೆಳೆಯನ ಅನಿರೀಕ್ಷಿತ ಆಗಮನ ಸಮಯವನ್ನು ವ್ಯರ್ಥ ಮಾಡಿಸಿದರೂ ಮನಸ್ಸಿಗೆ ಸಂತೋಷ ಉಂಟಾಗುವುದು. ಸಮಸ್ಯೆಗೆ ಧೈರ್ಯವೇ ಪರಿಹಾರ ಎಂಬುವುದನ್ನು ಮರೆಯದಿರಿ. ಕೌಟುಂಬಿಕ ಆತಂಕ ಕಡಿಮೆಯಾಗಲಿದೆ.

ವೃಷಭ: ಸಂಬಂಧಗಳನ್ನು ಗಟ್ಟಿ ಮಾಡಿಕೊಳ್ಳುವುದರಿಂದ ವಿಷಾದ, ದುಃಖ ಆವರಿಸುವ ಲಕ್ಷಣಗಳು ದೂರಾಗುತ್ತವೆ. ದ್ರವ ರೂಪದ ವಸ್ತುಗಳ ಮಾರಾಟಗಾರರಿಗೆ ಅಧಿಕ ಲಾಭ.

ಮಿಥುನ: ಸಾಕಷ್ಟು ಸಮಸ್ಯೆಗಳು ಆತ್ಮವಿಶ್ವಾಸಕ್ಕೆ ಅಡ್ಡಿಯನ್ನು ಉಂಟುಮಾಡಲಿವೆ. ಖರ್ಚು ವೆಚ್ಚಗಳಿಗೆ ಕಡಿವಾಣ ಹಾಕಲೇ ಬೇಕಾದ ಪರಿಸ್ಥಿತಿ ತೋರಲಿದೆ. ನಿಗದಿಯಾಗಿರುವ ಕಾಲಮಿತಿಯೊಳಗೆ ಕೆಲಸವನ್ನು ಪೂರ್ಣಗೊಳಿಸಿ.

ಕರ್ಕಾಟಕ: ಉದರ ಬಾಧೆಯನ್ನು ಉಪಶಮನ ಮಾಡಿಕೊಳ್ಳುವುದಕ್ಕಾಗಿ ಹಸಿ ತರಕಾರಿಯನ್ನೋ ಅಥವಾ ಸ್ನಿಗ್ಧ ಆಹಾರವನ್ನಷ್ಟೇ ಸೇವಿಸಿ. ಆರ್ಥಿಕ ತಾಪತ್ರಯಗಳು ಯಾರಲ್ಲಿಯೂ ಹೇಳಿಕೊಳ್ಳಲು ಆಗದಂತೆ ಆಗಲಿದೆ.

ಸಿಂಹ: ಮಕ್ಕಳ ಬೆಳವಣಿಗೆ ವಿಚಾರದಲ್ಲಿ ಕಾಳಜಿ ತೋರುವ ಅನಿವಾರ್ಯತೆ ಹೆಚ್ಚಲಿದೆ. ಸ್ನೇಹಿತರಿಂದ ಆಪತ್ತಿಗೆ ಸಿಲುಕುವಂತಾಗಿ ಅಶಾಂತಿ ಹೊಂದುವಿರಿ. ಎಚ್ಚರಿಕೆಯಿಂದ ಕಾರ್ಯಗಳನ್ನು ನಿರ್ವಹಿಸಿ.

ಕನ್ಯಾ: ದೇವರ ಆಶೀರ್ವಾದ ನಿಮ್ಮ ಮೇಲಿರುವುದರಿಂದ ಇಂದಿನ ಪ್ರಯಾಣ ಅನುಕೂಲಕರವಾಗಿ ಮತ್ತು ಅನಾಯಾಸವಾಗಿ ಇರುತ್ತದೆ.ಪ್ರಯತ್ನಕ್ಕೆ ಸರಿಯಾಗಿ ಸಂಪಾದನೆಯನ್ನು ಉಳಿಸಿಕೊಳ್ಳಲು ಅಸಾಧ್ಯವಾಗಲಿದೆ.

ತುಲಾ: ತಾಯಿಯ ಅಥವಾ ಸೋದರ ಮಾವನ ಆರೋಗ್ಯದ ವ್ಯತ್ಯಾಸದಿಂದ ದಿನಚರಿಯಲ್ಲಿ ಬದಲಾವಣೆ ಉಂಟಾಗುತ್ತದೆ. ಹಲವು ವರ್ಷಗಳ ಹಿಂದೆಯೇ ಸಂಕಲ್ಪಿಸಿದ ಕೆಲಸ ನಡೆಯಲಿದೆ.

ವೃಶ್ಚಿಕ: ಜಮೀನಿನ ಕಾರ್ಯಗಳು ತೀರ್ಮಾನಿಸಿದಂತೆ ನಡೆ ಯುವುದು ಕಷ್ಟವಾಗಲಿದೆ. ಸಮಸ್ಯೆಗೆ ಸಿಲುಕಿರುವ ನೀವು ನ್ಯಾಯ ಹೊಂದಲು ಕಷ್ಟ ಪಡಬೇಕಾಗಲಿದೆ. ವ್ಯಾಪಾರ ವಹಿವಾಟುಗಳಲ್ಲಿ ಮುನ್ನಡೆ ಇರುವುದು.

ಧನು: ಗೃಹ ನಿರ್ಮಾಣದಂತಹ ಕಾರ್ಯ ಕೈಗೊಂಡವರಿಗೆ ಆರ್ಥಿಕತೆ ಸ್ವಲ್ಪ ತೊಂದರೆಯನ್ನು ಸೃಷ್ಟಿ ಮಾಡುವುದು. ದುಷ್ಟರ ಸಹವಾಸದಿಂದ ದೂರವಿರುವ ಪ್ರಯತ್ನ ಮಾಡಿ.

ಮಕರ: ಪ್ರೀತಿಪಾತ್ರರಿಗೆ ನೋವಾದ ಕಾರಣದಿಂದ ಎಲ್ಲಾ ಕೆಲಸಗಳಿಂದ ವಿಮುಖವಾಗುವ ಸಾಧ್ಯತೆ ಇರುವುದು. ಬಂಧುಗಳಲ್ಲಿ ನಿಷ್ಠುರ ವರ್ತನೆಗೆ ಆಸ್ಪದ ನೀಡುವುದು ಸರಿಯಲ್ಲ.

ಕುಂಭ: ದಿನದ ಮೊದಲಾರ್ಧ ಸ್ವಲ್ಪಮಟ್ಟಿಗಿನ ಬೇಸರ ಬರಬಹುದು. ಕೊನೆಯನ್ನು ಸಂತೋಷದಲ್ಲಿ ಕಳೆಯುತ್ತೀರಿ. ಪ್ರೀತಿ-ಪ್ರೇಮದ ವಿಷಯದಲ್ಲಿ ಮೋಸ ಹೋಗುವ ಸಾಧ್ಯತೆಗಳಿವೆ. ವ್ಯವಹಾರದಲ್ಲಿ ಪ್ರಾಮಾಣಿಕತೆ ಇರಲಿ.

ಮೀನ: ದಂಪತಿ ಮಧ್ಯೆ ಅನವಶ್ಯಕ ವಾದ ವಿವಾದವು ಸಂಬಂಧ ಹಾಳು ಮಾಡಬಹುದು. ಸುಗಂಧ ವಸ್ತುಗಳ ತಯಾರಕರಿಗೆ ಮತ್ತು ಮಾರಾಟಗಾರರಿಗೆ ಆದಾಯ ದೊರಕುವುದು. ಸಾಮಾಜಿಕವಾಗಿ ಅನುಯಾಯಿಗಳು ಹೆಚ್ಚುವರು.

ಪದಬಂಧ 5935


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬೇರೊಂದು ಸ್ಥಳಕ್ಕೆ ಹೋಗುವಿಕೆ (5)
4.ಪಾಸು ಎಂದಿದ್ದರೂ ತೇರ್ಗಡೆಯಾಗದಿರುವಿಕೆ (3)
5.ಉತ್ತರದವರ ವಿಪುಲತೆ (3)
6.ದಾರಿಗ ಇಲ್ಲಿದ್ದಾನೆ (3)
7.ಕಟ ಕಟ ಶಬ್ದ ಮಾಡುವ ಬಾಗಿಲು (3)
9.ಯಾವುದಾದರೂ ವಿಷಯವನ್ನು ಕುರಿತು ಪ್ರಕಟಣೆಗಾಗಿ ಬರೆದಿರುವ ನಿರೂಪಣೆ (3)
10.ನಾಯಕ ತೋರಿಸಿದ ಶಿವನ ಧನಸ್ಸು (3)
13.ಸೀರೆಯ ಹೊದೆಯುವ ಭಾಗ (3)
15.ಪದ ಹೇಳಿ ಪಡೆದ ಬಿಲ್ಲೆ (3)
16.ಹೊಟ್ಟೆ ಇಲ್ಲಿ ಕಾಣುತ್ತಿದೆ (3)
17.ಕೋಟೆಯ ಸುತ್ತಣ ಮೇಲು ಗೋಡೆ (3)
18.ಸಾಯುವ ಸಮಯವಿದು (5)

ಮೇಲಿಂದ ಕೆಳಕ್ಕೆ

1. ಸ್ಥಾನವನ್ನು ಕಳೆದುಕೊಂಡವನು (4)
2.ಬೇರೆಯವರಿಗೆ ಮಾಡುವ ನೆರವು (5)
3..ಕರದಲ್ಲಿರುವ ಚಿಪ್ಪು ಉಲ್ಟಾ ಆಗಿದೆ (3)
4.ನಡುಮನೆಯಲ್ಲಿದ್ದಾಗ ಆಗಿರುವ ಕಂಪನ (3)
8.ಚಕ ಚಕನೆ ಓದುವವನು! (3)
9.ಜೀ ಎನ್ನುತ್ತಿರುವ ಮಂತ್ರಿ (3)
11.ಹೆಸರಿಡುವ ಶಾಸ್ತ್ರ (5)
12.ಆಟದ ಬಯಲು (4)
14. ಹಳೆಯ ಸಾಮಾನುಗಳನ್ನು ಮಾರುವ ಸ್ಥಳ (3)
15.ಶ್ರೇಷ್ಠ ಎಂದು ಹೀಗೆನ್ನಿ (3)



5934ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮತದಾನ 4.ಶಿಬಿರ 6.ಭವಿಷ್ಯ 8.ಅಭಿರುಚಿ 11.ರಣ 12.ನಾಭಿ 13.ಮನವಿ 14.ಧಣಿ 15.ಜಯ 16.ದನಗಾಹಿ 18.ಮಾರುತ 20.ಕಾತರ 21.ಮನೋರಥ

ಮೇಲಿಂದ ಕೆಳಕ್ಕೆ:
2.ತವರು 3.ನಭ 4.ಶಿಷ್ಯ 5.ರಮಣ 7.ವಿವಾಹವಿಚ್ಛೇದ 9.ಭಿನ್ನಾಭಿಪ್ರಾಯ 10.ಚಿಕ್ಕಮಗಳೂರು 11.ರಕಾಧಂಧಾಗಾ 15.ಜಟಕಾ 17.ನಶ್ವರ 18.ಮಾರ 19.ತಮ

ಸುಡೊಕು 6320

			9		2	1		6
1		6					8	
	8	2		6			4	5
7								
	5		7	1		2		8
4					6			7
2		5		7			6	
	6					8		
8		1	6		3		2	9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6319 ಸುಡೊಕು

4	3	8	2	1	9	5	6	7
1	2	9	6	5	7	3	4	8
7	6	5	8	4	3	2	9	1
3	4	2	9	6	1	8	7	5
8	7	6	3	2	5	9	1	4
5	9	1	7	8	4	6	3	2
9	1	7	5	3	2	4	8	6
6	5	3	4	7	8	1	2	9
2	8	4	1	9	6	7	5	3

ಜಾಗತಿಕ ಮಟ್ಟದಲ್ಲಿ ಕುಸಿದ ಉತ್ಪಾದನೆ

ಕಾಫಿಗೆ ದಾಖಲೆ ಧಾರಣೆ

● ರವಿ ಕೆಳಂಗಡಿ



ಕಳಸದಲ್ಲಿ ಒಣಗಿದ ರೊಬಸ್ಟಾ ಕಾಫಿಯನ್ನು ಕಾರ್ಮಿಕರು ರಾಶಿ ಮಾಡಿದರು

ಕಳಸ (ಚಿಕ್ಕಮಗಳೂರು ಜಿಲ್ಲೆ): ನ್ಯೂಯಾರ್ಕ್ ಮಾರುಕಟ್ಟೆಯಲ್ಲಿ ಮೂರು ದಿನದ ಹಿಂದೆ ಅರೇಬಿಕಾ ಕಾಫಿಗೆ ಅತ್ಯಧಿಕ ಬೆಲೆ ದಾಖಲಾಗಿದೆ. ಕಾಫಿ ಪೌಂಡ್‌ವೊಂದಕ್ಕೆ 3.48 ಡಾಲರ್ ದರ ಲಭಿಸಿದೆ. ಇದು ಅರೇಬಿಕಾ ಕಾಫಿ ಇತಿಹಾಸದಲ್ಲಿ ಅತಿ ಹೆಚ್ಚಿನ ಧಾರಣೆಯಾಗಿದೆ.

ರೊಬಸ್ಟಾ ಕಾಫಿ ಬೆಲೆ ಕೂಡ ಲಂಡನ್ ಮಾರುಕಟ್ಟೆಯಲ್ಲಿ ಕಳೆದ ಒಂದು ವಾರದಲ್ಲಿ ಶೇ 12ರಷ್ಟು ಏರಿಕೆ ಕಂಡಿದೆ. ಮೂರು ದಿನದ ಹಿಂದೆ ಟನ್‌ವೊಂದಕ್ಕೆ 5,499 ಡಾಲರ್ ತಲುಪಿದೆ. ಮಾರುಕಟ್ಟೆಯ ಏರಿಳಿತ ಗಮನಿಸಿದರೆ ರೊಬಸ್ಟಾ ಕಾಫಿ ಕೂಡ ಈ ಹಿಂದಿನ ದಾಖಲೆ ಬೆಲೆ ಮೀರಿ ಏರಿಕೆಯಾಗುವ ಸಾಧ್ಯತೆಗಳಿವೆ ಎಂದು ಬೆಳೆಗಾರರು ಅಂದಾಜಿಸುತ್ತಿದ್ದಾರೆ.

ಅರೇಬಿಕಾ ಬೆಳೆಯುವ ಪ್ರಮುಖ ದೇಶವಾದ ಬ್ರೆಜಿಲ್‌ನ ಕಾಫಿ ಬೆಳೆಯುವ ಪ್ರದೇಶಗಳಲ್ಲಿ ಶೇ 53ರಷ್ಟು ಮಾತ್ರ ಮಳೆಯಾಗಿದೆ. ಮಳೆ ಕೊರತೆ ಕಾರಣಕ್ಕೆ ಅಲ್ಲಿ ಈ ವರ್ಷದ ಫಸಲು ಇಳುವರಿಯೂ ಕುಸಿತ ಕಂಡಿದೆ. ಇದು ಸತತವಾಗಿ ಕಾಫಿ ಬೆಲೆ ಏರಿಕೆಯಾಗಲು ಪ್ರಮುಖ ಕಾರಣವಾಗಿದೆ ಎಂದು ವ್ಯಾಪಾರಿಗಳು ಹೇಳುತ್ತಾರೆ.

ಬ್ರೆಜಿಲ್‌ನಲ್ಲಿ ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿನ ಅಂದಾಜು ಪ್ರಕಾರ 4.5 ಕೋಟಿ ಚೀಲ ಅರೇಬಿಕಾ ಕಾಫಿ ಉತ್ಪಾದನೆ ಆಗಬೇಕಿತ್ತು. ಈಗ ಸುಮಾರು 3.4 ಕೋಟಿ ಚೀಲ ಉತ್ಪಾದನೆ ಆಗಲಿದೆ ಎಂದು ಅಂದಾಜಿಸಲಾಗಿದೆ.

ಈ ವರ್ಷ ಜಾಗತಿಕ ಮಟ್ಟದಲ್ಲಿ ಅರೇಬಿಕಾ ಕಾಫಿ ಉತ್ಪಾದನೆಯು 85 ಲಕ್ಷ ಚೀಲದಷ್ಟು ಕೊರತೆ ಆಗಲಿದೆ ಎಂದು ವೈಲ್ಡ್‌ಕಾಫಿ ಸಂಸ್ಥೆ ಅಂದಾಜು ಮಾಡಿದೆ. ಕಳೆದ ವರ್ಷ ಕೂಡ 55 ಲಕ್ಷ ಚೀಲ ಅರೇಬಿಕಾ ಉತ್ಪಾದನೆ ಕಡಿಮೆ ಆಗಿತ್ತು. ಇದರಿಂದಾಗಿ ಸತತ 5 ವರ್ಷಗಳಿಂದಲೂ ಅರೇಬಿಕಾ ಕಾಫಿ ಉತ್ಪಾದನೆ ಕಡಿಮೆ ಆಗುತ್ತಲೇ ಇದೆ. ಈ ಕೊರತೆಯನ್ನು ರೊಬಸ್ಟಾ ಕಾಫಿ ನೀಗಿಸುತ್ತಿದ್ದು, ರೊಬಸ್ಟಾ ಕಾಫಿಯ ಬೆಲೆ ಮತ್ತು ಬೇಡಿಕೆ ಏರುತ್ತಲೇ ಇದೆ.

ಎಲ್ ನಿನೊ ವಾತಾವರಣ ದಕ್ಷಿಣ ಮತ್ತು ಕೇಂದ್ರ ಅಮೆರಿಕ ದೇಶಗಳಲ್ಲಿ ಅರೇಬಿಕಾ ಕಾಫಿ ಉತ್ಪಾದನೆ ಮೇಲೆ ತೀವ್ರ ಪರಿಣಾಮ ಬೀರಿದೆ. ಇತ್ತ ರೊಬಸ್ಟಾ ಬೆಳೆಯುವ ವಿಯೆಟ್ನಾಂ ದೇಶದಲ್ಲಿ ರೊಬಸ್ಟಾ ಉತ್ಪಾದನೆ ಕಳೆದ ವರ್ಷ ಶೇ 20ರಷ್ಟು ಕುಸಿದಿದ್ದು, ಈ ವರ್ಷ ಮತ್ತಷ್ಟು ಕುಸಿಯುವ ಭೀತಿ ಇದೆ. ಈ ಕಾರಣದಿಂದ ರೊಬಸ್ಟಾ ಕಾಫಿ ಕೂಡ ಅತಿ ಹೆಚ್ಚಿನ ಬೆಲೆಯ ಗಡಿ ದಾಟುವ ಸಾಧ್ಯತೆಗಳಿವೆ ಎಂದು ಮಾರುಕಟ್ಟೆ ತಜ್ಞರು ಹೇಳುತ್ತಾರೆ.

ರೊಬಸ್ಟಾ ಕಾಫಿಯು ಪ್ರತಿ 50 ಕೆ.ಜಿ ಮೂಟೆಗೆ ₹12 ಸಾವಿರಕ್ಕೆ ಮಾರಾಟ ವಾಗುತ್ತಿದ್ದು, ಅರೇಬಿಕಾ ಕಾಫಿ ಬೆಲೆ ₹13 ಸಾವಿರ ದಾಟಿದೆ. ಕಳೆದ ವರ್ಷ ₹7 ಸಾವಿರದಿಂದ ₹7,500ಕ್ಕೆ ಬಹುತೇಕ ಬೆಳೆಗಾರರು ರೊಬಸ್ಟಾ ಕಾಫಿ ಮಾರಾಟ ಮಾಡಿದ್ದರು. ಆ ನಂತರ ಚೀಲಕ್ಕೆ ₹11 ಸಾವಿರಕ್ಕೆ ಏರಿದ ಬೆಲೆಯ ಲಾಭವನ್ನು ಶೇ 90ರಷ್ಟು ಬೆಳೆಗಾರರು ಕೂಡ ಪಡೆದಿರಲಿಲ್ಲ. ಈ ಬಾರಿ ಕೈಯಲ್ಲಿ ಕಾಫಿ ಫಸಲು ಇರುವಾಗಲೇ ಬೆಲೆ ಏರುತ್ತಿರುವುದು ಬೆಳೆಗಾರರಲ್ಲಿ ಸಮಾಧಾನ ತಂದಿದೆ.

> ಕಳೆದ ವರ್ಷ ಬೆಳೆಗಾರರು ಉತ್ತಮ ಬೆಲೆಯಿಂದ ವಂಚಿತರಾಗಿದ್ದರು. ಈ ವರ್ಷ ಕಾಫಿ ಕೊಯ್ಯುವ ಹಂತದಲ್ಲೇ ಬೆಲೆ ಏರಿಕೆಯಾಗಿದೆ
> **ಅವಿನಾಶ್ ಸುಜಿ,** ಕಾಫಿ ಬೆಳೆಗಾರ, ಕಳಸ

ಏ. 1ರಿಂದ ಏಕೀಕೃತ ಪಿಂಚಣಿ ಜಾರಿಗೆ ಅಧಿಸೂಚನೆ



ನವದೆಹಲಿ (ಪಿಟಿಐ): ರಾಷ್ಟ್ರೀಯ ಪಿಂಚಣಿ ಯೋಜನೆಯಡಿ (ಎನ್‌ಪಿಎಸ್) ಇರುವ ಕೇಂದ್ರ ಸರ್ಕಾರಿ ನೌಕರರಿಗೆ ಮೂಲ ವೇತನದ ಶೇ 50ರಷ್ಟನ್ನು ಪಿಂಚಣಿ ನೀಡುವ ಏಕೀಕೃತ ಪಿಂಚಣಿ ಯೋಜನೆಗೆ (ಯುಪಿಎಸ್), ಕೇಂದ್ರ ಹಣಕಾಸು ಸಚಿವಾಲಯವು ಅಧಿಸೂಚನೆ ಪ್ರಕಟಿಸಿದೆ.

ಕಳೆದ ವರ್ಷದ ಆಗಸ್ಟ್‌ನಲ್ಲಿ ಕೇಂದ್ರ ಸಚಿವ ಸಂಪುಟವು ಈ ಹೊಸ ಯೋಜನೆಯ ಜಾರಿಗೆ ಅನುಮೋದನೆ ನೀಡಿತ್ತು. ಏಪ್ರಿಲ್ 1ರಿಂದ ಅಧಿಕೃತವಾಗಿ ಜಾರಿಗೆ ಬರಲಿದೆ.

2004ರ ಜನವರಿ 1ರಿಂದ ಕೆಲಸಕ್ಕೆ ಸೇರಿದ ಕೇಂದ್ರ ಸರ್ಕಾರಿ ನೌಕರರಿಗೆ ಎನ್‌ಪಿಎಸ್ ಜಾರಿಯಲ್ಲಿದೆ. ಇದರಡಿ ಒಟ್ಟು 23 ಲಕ್ಷ ನೌಕರರು ಇದ್ದಾರೆ. ಈ ನೌಕರರು ಯುಪಿಎಸ್ ಆಯ್ಕೆ ಮಾಡಿಕೊಳ್ಳಬಹುದು ಅಥವಾ ಹಾಲಿ ಇರುವ ಎನ್‌ಪಿಎಸ್‌ನಲ್ಲಿಯೇ ಮುಂದುವರಿಬಹುದಾಗಿದೆ ಎಂದು ಅಧಿಸೂಚನೆಯಲ್ಲಿ ಹೇಳಲಾಗಿದೆ.

ಉದ್ಯೋಗಿಯು ಸೇವೆಯಿಂದ ವಜಾಗೊಂಡರೆ ಯೋಜನೆಯಡಿ ಸೌಲಭ್ಯ ಲಭಿಸುವುದಿಲ್ಲ ಎಂದು ಸರ್ಕಾರ ತಿಳಿಸಿದೆ.

ಕನಿಷ್ಠ 25 ವರ್ಷದವರೆಗೆ ಸೇವೆ ಸಲ್ಲಿಸಿದವರಿಗೆ ನಿವೃತ್ತಿ ಹಿಂದಿನ 12 ತಿಂಗಳ ಸರಾಸರಿ ಮೂಲ ವೇತನದ ಕನಿಷ್ಠ ಶೇ 50ರಷ್ಟು ಪಿಂಚಣಿ ಸಿಗಲಿದೆ. ಕನಿಷ್ಠ ಹತ್ತು ವರ್ಷ ಸೇವೆ ಸಲ್ಲಿಸಿದ ಬಳಿಕ ನಿವೃತ್ತಿ ಹೊಂದುವ ನೌಕರರಿಗೆ ಮಾಸಿಕ ₹10 ಸಾವಿರ ಪಿಂಚಣಿ ದೊರೆಯಲಿದೆ.

ಷೇರು ಎಸ್‌ಐಪಿ ಲಾಭದಾಯಕವೇ?



ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಕಳೆದ ಐದು ವರ್ಷಗಳ ಅವಧಿಯಲ್ಲಿ ಎಸ್‌ಐಪಿ (ವ್ಯವಸ್ಥಿತ ಹೂಡಿಕೆ ಯೋಜನೆ) ಮಾದರಿಯಲ್ಲಿ ಪ್ರತಿ ತಿಂಗಳು ಟಿವಿಎಸ್ ಮೋಟರ್ ಕಂಪನಿಯ ಒಂದೊಂದು ಷೇರು ಖರೀದಿಸಿದ್ದರೆ ನಿಮಗೆ ವಾರ್ಷಿಕ ಸರಾಸರಿ ಶೇ 42ರಷ್ಟು ಲಾಭ ಸಿಗುತ್ತಿತ್ತು. ಇದೇ ಅವಧಿಯಲ್ಲಿ ನೀವು ನಿಪ್ಪಾನ್ ಇಂಡಿಯಾ ಲಾರ್ಜ್‌ಕ್ಯಾಪ್ ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡಿದ್ದರೆ ವಾರ್ಷಿಕ ಸರಾಸರಿ ಶೇ 23.55ರಷ್ಟು ಗಳಿಕೆ ಸಿಗುತ್ತಿತ್ತು. ಈ ಎರಡು ಗಳಿಕೆ ನೋಡಿದಾಗ ಯಾರಿಗೇ ಆದರೂ ಮ್ಯೂಚುವಲ್ ಫಂಡ್ (ಎಂ.ಎಫ್) ಎಸ್‌ಐಪಿಗಿಂತ, ಷೇರುಗಳ ಮೇಲೆ ಎಸ್‌ಐಪಿ ಮಾಡುವುದೇ ಲಾಭ ಎನಿಸುತ್ತದೆ. ವಾಸ್ತವದಲ್ಲಿ ಈ ಲೆಕ್ಕಾಚಾರ ಸರಿಯೇ ಅನ್ನೋದು ಪ್ರಶ್ನೆ.

ಇದಕ್ಕೆ ಉತ್ತರ ಕಂಡುಕೊಳ್ಳುವ ಮುನ್ನ ಷೇರು ಎಸ್‌ಐಪಿ ಎಂದರೇನು ಎಂಬ ಬಗ್ಗೆ ಮೊದಲು ತಿಳಿಯೋಣ.

ಷೇರು ಎಸ್‌ಐಪಿ ಎಂದರೇನು?: ಒಂದು ಷೇರಿನ ಮೇಲೆ ಅಥವಾ ಹಲವು ಷೇರುಗಳ ಮೇಲೆ ನಿಗದಿತ ಸಮಯಕ್ಕೆ, ನಿಗದಿತ ಮೊತ್ತವನ್ನು ನಿರ್ದಿಷ್ಟ ಕಾಲಾವಧಿಗೆ ಹೂಡಿಕೆ ಮಾಡುತ್ತಾ ಹೋಗುವುದೇ ಸ್ಟಾಕ್ ಎಸ್‌ಐಪಿ ಅಥವಾ ಷೇರು ಎಸ್‌ಐಪಿ.

ಷೇರುಗಳ ಮೇಲೆ ಪ್ರತಿ ವಾರ, ಹದಿನೈದು ದಿನ, ತಿಂಗಳಿಗೊಮ್ಮೆ, ಮೂರು ತಿಂಗಳಿಗೊಮ್ಮೆ ಹೀಗೆ ನಿಮ್ಮ ಅನುಕೂಲಕ್ಕೆ ತಕ್ಕಂತೆ ಎಸ್‌ಐಪಿ ಹೂಡಿಕೆ ಮಾಡಬಹುದು. ಸ್ಟಾಕ್ ಎಸ್‌ಐಪಿಯಲ್ಲಿ ನಿಮ್ಮ ಆದಾಯಕ್ಕೆ ತಕ್ಕಂತೆ ₹5 ಸಾವಿರ, ₹10 ಸಾವಿರ, ₹15 ಸಾವಿರ, ₹20 ಸಾವಿರ ಅಥವಾ ಅದಕ್ಕಿಂತಲೂ ಹೆಚ್ಚಿನ ಮೊತ್ತ ಹೂಡಲು ಅವಕಾಶ ಇರುತ್ತದೆ.

ಮ್ಯೂಚುವಲ್ ಫಂಡ್‌ಗಳಲ್ಲಿ ಹೇಗೆ ಎಸ್‌ಐಪಿ ಮಾಡುತ್ತೇವೆಯೋ ಅದೇ ಮಾದರಿಯಲ್ಲಿ ಸ್ಟಾಕ್ ಎಸ್‌ಐಪಿ ಕೂಡ ಕೆಲಸ ಮಾಡುತ್ತದೆ. ಇತ್ತೀಚಿನ ದಿನಗಳಲ್ಲಿ ಸ್ಟಾಕ್ ಎಸ್‌ಐಪಿ ಹೆಚ್ಚು ಜನಪ್ರಿಯ ಆಗುತ್ತಿದೆ. ಆದರೆ, ಸ್ಟಾಕ್ ಎಸ್‌ಐಪಿ ಸರಿಹೊಂದುವುದೋ ಅಥವಾ ಮ್ಯೂಚುವಲ್ ಫಂಡ್ ಎಸ್‌ಐಪಿ ಸರಿ ಹೊಂದುವುದೋ ಎನ್ನುವ ನಿರ್ಧಾರ ಮಾಡುವ ಮುನ್ನ ಹೂಡಿಕೆದಾರರು ಹಲವು ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

ನಿರ್ವಹಣೆ ವಿಧಾನ ಮತ್ತು ವೆಚ್ಚ: ಮ್ಯೂಚುವಲ್ ಫಂಡ್‌ಗಳಲ್ಲಿ ನಾವು ಹೂಡಿಕೆ ಮಾಡುವ ಎಸ್‌ಐಪಿ ಹಣವನ್ನು ವೃತ್ತಿಪರ ಫಂಡ್ ಮ್ಯಾನೇಜರ್‌ಗಳು ನಿರ್ವಹಣೆ ಮಾಡುತ್ತಾರೆ. ಹೂಡಿಕೆದಾರರ ಮೊತ್ತವನ್ನು ಎಲ್ಲಿ ತೊಡಗಿಸಬೇಕು. ಯಾವ ಷೇರಿನ ಮೇಲೆ ಎಷ್ಟು ಹಣ ಹಾಕಬೇಕು. ಯಾವ ವಲಯದ ಷೇರುಗಳ ಮೇಲೆ ಹೂಡಿಕೆ ಮಾಡಬೇಕು ಎನ್ನುವ ತೀರ್ಮಾನವನ್ನು ಫಂಡ್ ಮ್ಯಾನೇಜರ್‌ಗಳು ಮಾಡುತ್ತಾರೆ.

ಅದಕ್ಕಾಗಿ ಅವರು ಶೇ 0.5ರಿಂದ ಶೇ 2ರ ವರೆಗೂ ನಿರ್ವಹಣಾ ಶುಲ್ಕ (ಎಕ್ಸ್‌ಪೆನ್ಸ್ ರೇಷಿಯೊ/ ಕಮಿಷನ್) ತೆಗೆದುಕೊಳ್ಳುತ್ತಾರೆ. ಆದರೆ, ಸ್ಟಾಕ್ ಎಸ್‌ಐಪಿಯಲ್ಲಿ ಹೂಡಿಕೆ ತೀರ್ಮಾನಗಳನ್ನು ನೀವೇ ತೆಗೆದುಕೊಳ್ಳಬೇಕಿದೆ. ಇದರಿಂದ ನಿರ್ವಹಣಾ ಶುಲ್ಕ ಇರುವುದಿಲ್ಲ. ಡಿಮ್ಯಾಟ್ ಖಾತೆ ವೆಚ್ಚ, ಷೇರು ವಿನಿಮಯ ವೆಚ್ಚ ಮುಂತಾದ ವೆಚ್ಚಗಳು ಬರುತ್ತವೆ. ಆದರೆ, ಈ ವೆಚ್ಚಗಳು ಮ್ಯೂಚುವಲ್ ಫಂಡ್‌ನ ಎಕ್ಸ್‌ಪೆನ್ಸ್ ರೇಷಿಯೊದಷ್ಟು ಹೆಚ್ಚಿಗೆ ಇರುವುದಿಲ್ಲ.

ಹೂಡಿಕೆ ವೈವಿಧ್ಯ: ಮ್ಯೂಚುವಲ್ ಫಂಡ್ ಎಸ್‌ಐಪಿಯಲ್ಲಿ ಹೂಡಿಕೆ ಮಾಡಿದಾಗ ನಿಮ್ಮ ಮೊತ್ತವು ಹತ್ತಾರು ಕಂಪನಿಗಳ ಮೇಲೆ ಹೋಗುತ್ತದೆ. ಬಹುಪಾಲು ಮ್ಯೂಚುವಲ್ ಫಂಡ್‌ಗಳು ಹಲವು ಕಂಪನಿಗಳ ಮೇಲೆ ನಮ್ಮ ಮೊತ್ತವನ್ನು ತೊಡಗಿಸುತ್ತವೆ. ಹಾಗಾಗಿ, ಇಲ್ಲಿ ಹೂಡಿಕೆ ಮಿಶ್ರಣ ಕಾಯ್ದುಕೊಳ್ಳುವುದು ಸುಲಭ.

ಆದರೆ, ಸ್ಟಾಕ್ ಎಸ್‌ಐಪಿಯಲ್ಲಿ ಹೂಡಿಕೆ ವೈವಿಧ್ಯ ಸಾಧಿಸುವುದು ಕಷ್ಟವಾಗುತ್ತದೆ. ಐದಾರು ಕಂಪನಿಗಳ ಮೇಲೆ ಸ್ಟಾಕ್ ಎಸ್‌ಐಪಿ ಮಾಡುವ ಮೂಲಕ ಹೂಡಿಕೆಯಲ್ಲಿ ಹದವಾದ ಮಿಶ್ರಣ ಸಾಧಿಸುವುದು ಕಷ್ಟವಾಗುತ್ತದೆ. ಹೂಡಿಕೆದಾರನಿಗೆ ಸಹಜವಾಗಿ ಒಬ್ಬ ಫಂಡ್ ಮ್ಯಾನೇಜರ್‌ಗೆ ಇರುವಷ್ಟು ಹೂಡಿಕೆ ಜ್ಞಾನ ಇಲ್ಲದಿರುವ ಕಾರಣ ಹೂಡಿಕೆ ವೈವಿಧ್ಯ ಮಂಕಾಗುತ್ತದೆ.

ಪೋರ್ಟ್‌ ಫೋಲಿಯೊ ನಿರ್ವಹಣೆ: ಮ್ಯೂಚುವಲ್ ಫಂಡ್‌ಗಳಲ್ಲಿ ಲಾಭ ಗಳಿಸುವ ಉದ್ದೇಶದಿಂದ ಫಂಡ್ ಮ್ಯಾನೇಜರ್‌ಗಳು ತಮಗೆ ಸರಿ ಎನಿಸಿದಾಗ ಷೇರುಗಳ ಮಾರಾಟ ಮತ್ತು ಖರೀದಿ ಮಾಡುತ್ತಾರೆ.

ಮ್ಯೂಚುವಲ್ ಫಂಡ್ ಹೂಡಿಕೆ ಮಾಡಿದಾಗ ಅದರ ನಿರ್ವಹಣೆಗೆ ನೀವು ಪ್ರತ್ಯೇಕ ಸಮಯ ಮೀಸಲಿಡುವ ಅಗತ್ಯ ಇರುವುದಿಲ್ಲ. ಆದರೆ, ಸ್ಟಾಕ್ ಎಸ್‌ಐಪಿಯಲ್ಲಿ ಸನ್ನಿವೇಶಕ್ಕೆ ಅನುಗುಣವಾಗಿ ಷೇರುಗಳ ಮಾರಾಟ ಮತ್ತು ಖರೀದಿಯ ತೀರ್ಮಾನವನ್ನು ನೀವೇ ಕೈಗೊಳ್ಳ ಬೇಕಾಗುತ್ತದೆ. ಷೇರು ಹೂಡಿಕೆಯಲ್ಲಿ ಪರಿಣತಿ ಇಲ್ಲದಿದ್ದಾಗ ಇದು ಕಷ್ಟವಾಗಬಹುದು. ನೀವು ಪೂರ್ಣಾವಧಿ ಉದ್ಯೋಗದಲ್ಲಿದ್ದರೆ ಪೋರ್ಟ್‌ ಫೋಲಿಯೊ ನಿರ್ವಹಣೆಗೆ ಸಮಯ ಮೀಸಲಿಡುವುದು ಮತ್ತೊಂದು ಸವಾಲು.

ತೆರಿಗೆ ಲೆಕ್ಕಾಚಾರ: ಮ್ಯೂಚುವಲ್ ಫಂಡ್‌ನಲ್ಲಿ ನೀವು ಎಸ್‌ಐಪಿ ಮೊತ್ತ ತೊಡಗಿಸಿದ ನಂತರ ಷೇರುಗಳ ಖರೀದಿ ಮತ್ತು ಮಾರಾಟ ಪ್ರಕ್ರಿಯೆಯು ಮ್ಯೂಚುವಲ್ ಫಂಡ್ ಕಂಪನಿಗಳ ಕಡೆಯಿಂದ (ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿಗಳು) ನಡೆಯುತ್ತದೆ. ನಿಮಗೆ ಯಾವುದೇ ತೆರಿಗೆ ಹೊರೆ ಬೀಳುವುದಿಲ್ಲ. ಆದರೆ, ಎಸ್‌ಐಪಿ ಮೂಲಕ ಖರೀದಿಸಿರುವ ಷೇರುಗಳನ್ನು ನೀವೇ ಮಾರಾಟ ಮಾಡಿದಾಗ ಬಂಡವಾಳ ಗಳಿಕೆ ತೆರಿಗೆ (ಕ್ಯಾಪಿಟಲ್ ಗೇನ್ಸ್ ಟ್ಯಾಕ್ಸ್) ಕಟ್ಟಬೇಕಾಗುತ್ತದೆ.

ರಿಸ್ಕ್ ಪ್ರಮಾಣ: ಮ್ಯೂಚುವಲ್ ಫಂಡ್ ಎಸ್‌ಐಪಿಯಲ್ಲಿ ಹೂಡಿಕೆ ವೈವಿಧ್ಯ ಸಾಧ್ಯತೆಯಿದೆ. ಇದರಿಂದ ಹೂಡಿಕೆ ರಿಸ್ಕ್ ಕಡಿಮೆ ಇರುತ್ತದೆ. ಇಲ್ಲಿ ವೃತ್ತಿಪರ ಫಂಡ್ ಮ್ಯಾನೇಜರ್‌ನ ನಿರ್ವಹಣೆಯ ಅನುಕೂಲವೂ ಸಿಗುತ್ತದೆ. ಆದರೆ, ಷೇರು ಎಸ್‌ಐಪಿ ಹೂಡಿಕೆ ಮಾಡುವಾಗ ಹೂಡಿಕೆ ವೈವಿಧ್ಯ ಕಷ್ಟವಾಗುತ್ತದೆ. ಮಾರುಕಟ್ಟೆ ಅನಿಶ್ಚಿತತೆಯ ಸಂದರ್ಭದಲ್ಲಿ ಪೋರ್ಟ್‌ ಫೋಲಿಯೊದಲ್ಲಾಗುವ ಏರಿಳಿತಕ್ಕೆ ಸಾಮಾನ್ಯ ಹೂಡಿಕೆದಾರ ತತ್ತರಿಸುವ ಸಾಧ್ಯತೆಯೇ ಹೆಚ್ಚಿರುತ್ತದೆ.

ಕಿವಿಮಾತು: ಸ್ಟಾಕ್ ಎಸ್‌ಐಪಿ ಮತ್ತು ಮ್ಯೂಚುವಲ್ ಫಂಡ್ ಎಸ್‌ಐಪಿಯಲ್ಲಿ ಅದರದ್ದೇ ಆದ ಅನುಕೂಲ–ಅನನುಕೂಲಗಳಿವೆ. ಸ್ಟಾಕ್ ಎಸ್‌ಐಪಿ ಮಾಡುವಾಗ ಷೇರುಗಳ ಆಯ್ಕೆಯಲ್ಲಿ ಸಾಕಷ್ಟು ಎಚ್ಚರವಹಿಸಬೇಕಾಗುತ್ತದೆ. ಷೇರು ಆಯ್ಕೆಯಲ್ಲಿ ಎಡವಿದರೆ ಹೆಚ್ಚು ಲಾಭ ಗಳಿಸಲು ಸಾಧ್ಯವಿಲ್ಲ.

ಆದರೆ, ಉತ್ತಮ ಷೇರಿನ ಮೇಲೆ ಅಧ್ಯಯನ ಮಾಡಿ ಹೂಡಿಕೆ ಮಾಡಿದರೆ ಮ್ಯೂಚುವಲ್ ಫಂಡ್ ಎಸ್‌ಐಪಿಗಳಿಗಿಂತ ಹೆಚ್ಚು ಗಳಿಸುವ ಅವಕಾಶ ಸ್ಟಾಕ್ ಎಸ್‌ಐಪಿಯಲ್ಲಿದೆ. ಮ್ಯೂಚುವಲ್ ಫಂಡ್ ಎಸ್‌ಐಪಿಗಳಲ್ಲಿ ಸ್ಟಾಕ್ ಎಸ್‌ಐಪಿಗಳಷ್ಟು ಗಳಿಕೆಯಾಗುವ ಸಾಧ್ಯತೆ ಕಡಿಮೆ. ಆದರೆ, ಇಲ್ಲಿ ಹೂಡಿಕೆದಾರನಿಗೆ ಹೆಚ್ಚು ತಿಳಿವಳಿಕೆ, ಅಧ್ಯಯನ, ಕಲಿಕೆಯ ಅಗತ್ಯವಿಲ್ಲ. ಒಳ್ಳೆಯ ಫಂಡ್ ಆಯ್ಕೆ ಮಾಡಿಕೊಂಡು ಹಣ ಹಾಕುತ್ತಾ ಸಾಗಿದರೆ ದೀರ್ಘಾವಧಿಯಲ್ಲಿ ಒಂದು ಉತ್ತಮ ಗಳಿಕೆ ನೋಡಬಹುದು.

ಯಾರಿಗೆ ಸಮಯವಿಲ್ಲ, ಷೇರು ಮಾರುಕಟ್ಟೆ ಬಗ್ಗೆ ಹೆಚ್ಚು ತಿಳಿದಿಲ್ಲ ಅವರಿಗೆ ಮ್ಯೂಚುವಲ್ ಫಂಡ್ ಎಸ್‌ಐಪಿ ಸರಿ ಹೊಂದುತ್ತದೆ.

(ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್)

ಮೂರನೇ ವಾರವೂ ಕುಸಿದ ಷೇರುಪೇಟೆ



ಷೇರುಪೇಟೆ ಸೂಚ್ಯಂಕಗಳು ಸತತ ಮೂರನೇ ವಾರವೂ ಕುಸಿತ ಕಂಡಿವೆ. ಜನವರಿ 24ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಇಳಿಕೆಯಾಗಿವೆ. 76,190 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 0.56ರಷ್ಟು ಕುಸಿದಿದೆ.

23,092 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.48ರಷ್ಟು ತಗ್ಗಿದೆ. ಇನ್ನು ನಿಫ್ಟಿ ಮಿಡ್ ಕ್ಯಾಪ್ ಸೂಚ್ಯಂಕ ಶೇ 2.46ರಷ್ಟು ಕುಸಿದಿದ್ದರೆ, ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 4.05ರಷ್ಟು ಇಳಿಕೆಯಾಗಿದೆ. ಕಂಪನಿಗಳ ತ್ರೈಮಾಸಿಕ ಫಲಿತಾಂಶಗಳು ನಿರೀಕ್ಷಿತ ಮಟ್ಟದಲ್ಲಿ ಇರದಿರುವುದು, ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಷೇರುಗಳ ಮಾರಾಟ ಸೇರಿ ಹಲವು ಅಂಶಗಳು ಮಾರುಕಟ್ಟೆ ಮೇಲೆ ನೇರ ಪರಿಣಾಮ ಬೀರಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ರಿಯಲ್ ಎಸ್ಟೇಟ್ ಶೇ 9.12, ಮಾಧ್ಯಮ ಶೇ 3.47, ಆಟೊ ಶೇ 2.72, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 2.24, ಲೋಹ ಶೇ 0.97, ಫಾರ್ಮಾ ಶೇ 0.86 ಮತ್ತು ನಿಫ್ಟಿ ಬ್ಯಾಂಕ್ ಶೇ 0.36ರಷ್ಟು ಇಳಿಕೆಯಾಗಿವೆ. ನಿಫ್ಟಿ ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಮತ್ತು ಎಫ್‌ಎಂಸಿಜಿ ಕ್ರಮವಾಗಿ ಶೇ 3.55 ಮತ್ತು ಶೇ 0.48ರಷ್ಟು ಗಳಿಸಿಕೊಂಡಿವೆ.

ಇಳಿಕೆ–ಏರಿಕೆ: ನಿಫ್ಟಿಯಲ್ಲಿ ಟ್ರೆಂಟ್ ಶೇ 11.51, ಎಸ್‌ಬಿಐ ಲೈಫ್ ಇನ್ಶೂರೆನ್ಸ್ ಶೇ 6.93, ಡಾ.ರೆಡ್ಡೀಸ್ ಲ್ಯಾಬ್ಸ್ ಶೇ 6.29,ಅದಾನಿ ಪೋರ್ಟ್ಸ್ ಶೇ 6.21, ಟಾಟಾ ಮೋಟರ್ಸ್ ಶೇ 5.85, ರಿಲಯನ್ಸ್ ಇಂಡಸ್ಟ್ರೀಸ್ ಶೇ 4.33, ಎಕ್ಸಿಸ್ ಬ್ಯಾಂಕ್ ಶೇ 4.31, ಭಾರತ್ ಎಲೆಕ್ಟ್ರಾನಿಕ್ಸ್ ಶೇ 4.15, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 4.02, ಬಿಪಿಸಿಎಲ್ ಶೇ 3.75 ಮತ್ತು ಅದಾನಿ ಎಂಟರ್ ಪ್ರೈಸಸ್ ಶೇ 3.47ರಷ್ಟು ಕುಸಿದಿವೆ.

ವಿಪ್ರೊ ಶೇ 13.59, ಕೋಟಕ್ ಮಹೀಂದ್ರ ಬ್ಯಾಂಕ್ ಶೇ 7.32, ಅಲ್ಟ್ರಾಟೆಕ್ ಸಿಮೆಂಟ್ ಶೇ 6.6, ಗ್ರಾಸಿಂ ಇಂಡಸ್ಟ್ರೀಸ್ ಶೇ 5.06, ಬ್ರಿಟಾನಿಯಾ ಇಂಡಸ್ಟ್ರೀಸ್ ಶೇ 4.99, ಟಾಟಾ ಕನ್ಸ್ಯೂಮರ್ ಶೇ 4.25, ಟೆಕ್ ಮಹೀಂದ್ರ ಶೇ 4.03, ಐಷರ್ ಮೋಟರ್ಸ್ ಶೇ 3.87, ಬಜಾಜ್ ಫೈನಾನ್ಸ್ ಶೇ 3.45, ಇನ್ಫೊಸಿಸ್ ಶೇ 3.26 ಮತ್ತು ಬಜಾಜ್ ಫಿನ್‌ಸರ್ವ್ ಶೇ 2.73ರಷ್ಟು ಗಳಿಸಿಕೊಂಡಿವೆ.

ಮುನ್ನೋಟ: ಈ ವಾರ ಕೋಲ್ ಇಂಡಿಯಾ, ಇಂಡಿಯನ್ ಆಯಿಲ್ ಕಾರ್ಪೊರೇಷನ್, ಟಾಟಾ ಸ್ಟೀಲ್, ಕೆನರಾ ಬ್ಯಾಂಕ್, ಬಜಾಜ್ ಹೌಸಿಂಗ್ ಫೈನಾನ್ಸ್, ಯೂನಿಯನ್ ಬ್ಯಾಂಕ್, ಫೆಡರಲ್ ಬ್ಯಾಂಕ್, ಬಜಾಜ್ ಆಟೊ, ಹಿಂದುಸ್ತಾನ್ ಜಿಂಕ್, ಟಿವಿಎಸ್ ಮೋಟರ್ ಕಂಪನಿ, ಸಿಪ್ಲಾ, ಹುಂಡೈ ಮೋಟರ್ಸ್ ಇಂಡಿಯಾ, ಎಸ್‌ಬಿಐ ಕಾರ್ಡ್ಸ್ ಆ್ಯಂಡ್ ಪೇಮೆಂಟ್ಸ್, ವಿಗಾರ್ಡ್, ಬಜಾಜ್ ಫೈನಾನ್ಸ್, ಟಾಟಾ ಮೋಟರ್ಸ್, ಮಾರುತಿ ಸುಜುಕಿ ಇಂಡಿಯಾ, ಎಲ್ ಆ್ಯಂಡ್ ಟಿ, ಬ್ಯಾಂಕ್ ಆಫ್ ಬರೋಡಾ, ನೆಸ್ಲೆ ಇಂಡಿಯಾ, ಒಎನ್‌ಜಿಸಿ, ಕರ್ಣಾಟಕ ಬ್ಯಾಂಕ್, ಕಲ್ಯಾಣ ಜ್ಯುವೆಲರ್ಸ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ.

ಕೇಂದ್ರ ಸರ್ಕಾರದ ಬಜೆಟ್ ನಿರ್ಣಯಗಳು, ಕಂಪನಿಗಳ ತ್ರೈಮಾಸಿಕ ಫಲಿತಾಂಶಗಳು ಮತ್ತು ಫೆಬ್ರುವರಿಯಲ್ಲಿ ನಡೆಯಲಿರುವ ಆರ್‌ಬಿಐ ಹಣಕಾಸು ನೀತಿ ಸಮಿತಿ ಸಭೆಯು ರೆಪೊದರದ ಬಗ್ಗೆ ಯಾವ ತೀರ್ಮಾನ ಕೈಗೊಳ್ಳಲಿದೆ ಎಂಬ ಅಂಶಗಳು ಮಾರುಕಟ್ಟೆಯ ಮೇಲೆ ಪರಿಣಾಮ ಬೀರಲಿವೆ.

ಒಂದು ರಾಷ್ಟ್ರ; ಒಂದೇ ಸಮಯ ಕರಡು ಮಾರ್ಗಸೂಚಿ ಪ್ರಕಟ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ‘ಒಂದು ರಾಷ್ಟ್ರ; ಒಂದೇ ಸಮಯ’ ನೀತಿ ಜಾರಿಗೆ ನಿರ್ಧರಿಸಿದೆ.

ಏಕರೂಪದ ಭಾರತೀಯ ಕಾಲಮಾನ (ಐಎಸ್‌ಟಿ– ಇಂಡಿಯನ್ ಸ್ಟ್ಯಾಂಡರ್ಡ್ ಟೈಮ್) ನಿಗದಿಗೆ ಸಂಬಂಧಿಸಿದಂತೆ ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯವು ಕರಡು ಮಾರ್ಗ ಸೂಚಿ ಪ್ರಕಟಿಸಿದ್ದು, ಈ ಕುರಿತು ಫೆಬ್ರುವರಿ 14ರ ವರೆಗೆ ಸಾರ್ವಜನಿಕರಿಂದ ಸಲಹೆಗಳನ್ನು ಆಹ್ವಾನಿಸಿದೆ.

ದೇಶದೊಳಗಿನ ವಿವಿಧ ಕಾಲಮಾನಗಳು ಗೊಂದಲ ಸೃಷ್ಟಿಸುವ ಸಾಧ್ಯತೆಯಿದೆ. ಹಾಗಾಗಿ, ಒಂದೇ ಸಮಯದ ಪರಿಪಾಲನೆಗೆ ಒಂದೇ ಮಾನದಂಡ ಅನುಸರಿಸುವುದಕ್ಕೆ ಕಾನೂನು ಚೌಕಟ್ಟು ರೂಪಿಸಲು ಮುಂದಾಗಿದೆ. ಇದರಿಂದ ದೂರಸಂಪರ್ಕ, ಬ್ಯಾಂಕಿಂಗ್, ರಕ್ಷಣೆ, 5ಜಿ ಸಂಪರ್ಕ ಮತ್ತು ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ವ್ಯವಸ್ಥೆಯು ಕಾರ್ಯ ನಿರ್ವಹಿಸುವುದು ಸುಲಭವಾಗುತ್ತದೆ ಎಂದು ಹೇಳಲಾಗಿದೆ.

ವಾಣಿಜ್ಯ, ಸಾರಿಗೆ, ಸಾರ್ವಜನಿಕ ಆಡಳಿತ, ಕಾನೂನು, ಹಣಕಾಸು ಕಾರ್ಯಾಚರಣೆ, ಅಧಿಕೃತ ದಾಖಲೆ ಸೇರಿ ಎಲ್ಲ ವಲಯಗಳಲ್ಲಿ ಏಕರೂಪವಾಗಿ ಭಾರತೀಯ ಕಾಲಮಾನ ಪದ್ಧತಿ ಅನುಸರಿಸಬೇಕಿದೆ.

ಸರ್ಕಾರಿ ಕಚೇರಿಗಳು ಹಾಗೂ ಸಾರ್ವಜನಿಕ ಸಂಸ್ಥೆಗಳು ಭಾರತೀಯ ಕಾಲಮಾನ ನಮೂದಿಸುವುದು ಕಡ್ಡಾಯವಾಗಲಿದೆ. ಇದರಿಂದ ಸೈಬರ್ ಭದ್ರತೆಯು ಮತ್ತಷ್ಟು ಬಲಗೊಳ್ಳಲಿದೆ ಎಂದು ಹೇಳಲಾಗಿದೆ.

ಏಕರೂಪ ಸಮಯ ನಿಗದಿ ಸಂಬಂಧ ಗ್ರಾಹಕ ವ್ಯವಹಾರಗಳ ಸಚಿವಾಲಯದೊಟ್ಟಿಗೆ ರಾಷ್ಟ್ರೀಯ ಭೌತಿಕ ಪ್ರಯೋಗಾಲಯ ಹಾಗೂ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ) ಕೆಲಸ ನಿರ್ವಹಿಸಲಿವೆ.

ಅರಣ್ಯ ಇಲಾಖೆ ಸಿಬ್ಬಂದಿ ಮೇಲೆ ಹುಲಿ ದಾಳಿ

ಪ್ರಜಾವಾಣಿ ವಾರ್ತೆ/ಪಿಟಿಐ



ತಿರುವನಂತಪುರ /ವಯನಾಡ್: ವಯನಾಡ್‌ನ ಮಾನಂದವಾಡಿಯಲ್ಲಿ ಹುಲಿ ಸೆರೆ ಕಾರ್ಯಾಚರಣೆಯಲ್ಲಿ ತೊಡಗಿದ್ದ ಅರಣ್ಯ ಇಲಾಖೆ ಸಿಬ್ಬಂದಿ ಒಬ್ಬರ ಮೇಲೆ ಹುಲಿ ಶುಕ್ರವಾರ ದಾಳಿ ನಡೆಸಿದೆ. ಇದರಿಂದಾಗಿ ಭೀತಿ ಇನ್ನಷ್ಟು ಹೆಚ್ಚಿದೆ.

ಸಿಬ್ಬಂದಿ ಮೇಲೆ ದಾಳಿ ಹಿನ್ನೆಲೆಯಲ್ಲಿ ಹುಲಿಯನ್ನು ‘ನರಭಕ್ಷಕ’ ಎಂದು ಕೇರಳ ಸರ್ಕಾರ ಘೋಷಿಸಿದ್ದು, ಹುಲಿಯ ಬೇಟೆಗೆ ಆದೇಶಿಸಿದೆ. ವಯನಾಡ್ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಉನ್ನತ ಮಟ್ಟ ಸಭೆ ಬಳಿಕ ಅರಣ್ಯ ಸಚಿವ ಎ.ಕೆ.ಸಸೀಂದ್ರನ್ ಈ ವಿಷಯ ತಿಳಿಸಿದರು.

ಇಲಾಖೆಯ ಕ್ಷಿಪ್ರ ಕಾರ್ಯಪಡೆಯ (ಆರ್‌ಆರ್‌ಟಿ) ಸದಸ್ಯ, 28 ವರ್ಷದ ಜಯಸೂರ್ಯ ಅವರ ಕೈಗೆ ಹುಲಿ ದಾಳಿಯಿಂದ ಗಾಯವಾಗಿದೆ. ಕೂದಲೆಳೆ ಅಂತರದಲ್ಲಿ ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಹಿಂಬದಿಯಿಂದ ಹುಲಿ ದಾಳಿ ನಡೆಸಿದ್ದು, ಜಾಗೃತರಾದ ಜಯಸೂರ್ಯ ತಮ್ಮಲ್ಲಿದ್ದ ರಕ್ಷಣಾ ಕವಚ ಅಡ್ಡಹಿಡಿದು ತಪ್ಪಿಸಿಕೊಂಡಿದ್ದಾರೆ. ಈ ಗೊಂದಲದಲ್ಲಿ ಕೈಗೆ ಗಾಯವಾಗಿದೆ. ಹುಲಿ ಅಷ್ಟೇ ವೇಗದಲ್ಲಿ ಸ್ಥಳದಿಂದ ಹೋಗಿದೆ.

ಸ್ಥಳೀಯರ ಪ್ರತಿಭಟನೆ: ಹುಲಿ ದಾಳಿಯಿಂದ ಮೃತಪಟ್ಟಿದ್ದ ಎಸ್ಟೇಟ್‌ನ ಕಾರ್ಮಿಕ ಮಹಿಳೆ 47 ವರ್ಷದ ರಾಧಾ ಅವರ ಕುಟುಂಬ ಸದಸ್ಯರನ್ನು ಅರಣ್ಯ ಸಚಿವ ಎ.ಕೆ. ಸಸೀಂದ್ರನ್ ಭೇಟಿಯಾಗಿದ್ದರು. ಆಗ ಸ್ಥಳೀಯರು ಪ್ರತಿಭಟನೆ ನಡೆಸಿದರು.

ಸಚಿವರು ಶನಿವಾರದಂದು ಫ್ಯಾಷನ್ ಷೋ ವೀಕ್ಷಿಸಲು ತೆರಳಿದ್ದರು. ಅಲ್ಲದೆ, ಆ ಕಾರ್ಯಕ್ರಮದಲ್ಲಿ ಹಾಡೊಂದನ್ನು ಹಾಡಿದ್ದರು ಎಂಬುದು ಜನರ ಆಕ್ರೋಶಕ್ಕೆ ಕಾರಣವಾಗಿತ್ತು.

ಜನಾಕ್ರೋಶ ಗಮನಿಸಿದ ಪೊಲೀಸರು ಸಚಿವರನ್ನು ಬೇರೆಡೆ ಕರೆದೊಯ್ದರು. ಇದಕ್ಕೆ ಮುನ್ನ ಸಚಿವರು ಮೃತ ಕಾರ್ಮಿಕನ ಪುತ್ರನಿಗೆ ಹಂಗಾಮಿ ನೌಕರಿಯ ಕಾರ್ಯಾದೇಶ ಹಸ್ತಾಂತರಿಸಿದ್ದರು.

ಮುಖ್ಯಮಂತ್ರಿ ಅವರ ಸೂಚನೆಯಂತೆ ಹುಲಿ ಬೇಟೆಗೆ ಆದೇಶಿಸಲಾಗಿದೆ. ಹುಲಿ ವಿರುದ್ಧದ ಕಾರ್ಯಾಚರಣೆಯು ಪರಿಣಾಮ-ಕಾರಿಯಾಗಿ ನಡೆದಿದೆ ಎಂದು ತಿಳಿಸಿದರು.

ಹುಲಿ ದಾಳಿ ನಡೆಸಿದ್ದ ಸ್ಥಳದ ಆಸುಪಾಸಿನಲ್ಲಿ ಕಾರ್ಯಾಚರಣೆ ಚುರುಕಿನಿಂದ ಸಾಗಿದೆ. ಸುಮಾರು 10 ತಂಡಗಳು ಈ ಕಾರ್ಯದಲ್ಲಿ ತೊಡಗಿವೆ.

ಈಕ್ವಿಟಿ ಎಂ.ಎಫ್: ₹4 ಲಕ್ಷ ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಕಳೆದ ವರ್ಷ ಈಕ್ವಿಟಿ ಮ್ಯೂಚುವಲ್ ಫಂಡ್‌ನಲ್ಲಿ ₹4 ಲಕ್ಷ ಕೋಟಿ ಬಂಡವಾಳ ಹೂಡಿಕೆಯಾಗಿದೆ.

2023ರಲ್ಲಿ ₹1.61 ಲಕ್ಷ ಕೋಟಿ ಹೂಡಿಕೆಯಾಗಿತ್ತು. ಇದಕ್ಕೆ ಹೋಲಿಸಿದರೆ ಹೂಡಿಕೆ ಪ್ರಮಾಣವು ದುಪ್ಪಟ್ಟಾಗಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ತಿಳಿಸಿದೆ.

‘ಕಳೆದ ವರ್ಷ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆಯು ಸದೃಢವಾಗಿದೆ. ಆದರೆ, ಷೇರುಪೇಟೆಯ ಇಳಿಕೆಯಿಂದಾಗಿ ಡಿಸೆಂಬರ್‌ನಿಂದ ಈಕ್ವಿಟಿ ಫಂಡ್‌ನಲ್ಲಿ ಬಂಡವಾಳ ಒಳಹರಿವು ಕಡಿಮೆಯಾಗಿದೆ. ಇದು ಪ್ರಸಕ್ತ ವರ್ಷದ ಬಂಡವಾಳ ಒಳಹರಿವಿನ ಮೇಲೂ ಪರಿಣಾಮ ಬೀರಬಹುದು’ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಎಫ್‌ಪಿಐ ಹೊರಹರಿವು ಅಬಾಧಿತ

ನವದೆಹಲಿ (ಪಿಟಿಐ): ದೇಶದ ಈಕ್ವಿಟಿ ಮಾರುಕಟ್ಟೆಯಲ್ಲಿ ಜನವರಿ ಆರಂಭದಿಂದ 24ರ ವರೆಗೆ ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಒಟ್ಟು ₹64,156 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಇಳಿಕೆಯಾಗಿದೆ. ಅಮೆರಿಕದ ಬಾಂಡ್ ಗಳಿಕೆ ಏರಿಕೆ ಕಂಡಿದೆ. ಜೊತೆಗೆ, ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಗಳ ನಿವ್ವಳ ಲಾಭದಲ್ಲಿ ಇಳಿಕೆಯಾಗುವ ನಿರೀಕ್ಷೆಯಿದೆ. ಇದರಿಂದ ಹೂಡಿಕೆದಾರರು ಬಂಡವಾಳ ಹಿಂಪಡೆಯುತ್ತಿದ್ದಾರೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಜನವರಿ 2ರಂದು ಹೊರತುಪಡಿಸಿದರೆ ಷೇರುಪೇಟೆಯ ಉಳಿದ ಎಲ್ಲಾ ದಿನಗಳ ವಹಿವಾಟಿನಲ್ಲಿ ವಿದೇಶಿ ಹೂಡಿಕೆದಾರರು ಷೇರುಗಳನ್ನು ಮಾರಾಟ ಮಾಡಿದ್ದಾರೆ.

‘ರೂಪಾಯಿ ಮೌಲ್ಯದ ಇಳಿಕೆಯು ಮುಂದುವರಿದಿರುವುದು ವಿದೇಶಿ ಹೂಡಿಕೆದಾರರ ಮೇಲೆ ಒತ್ತಡ ಸೃಷ್ಟಿಸಿದೆ. ಇದರಿಂದ ಬಂಡವಾಳ ವಾಪಸ್ ಪಡೆಯುತ್ತಿದ್ದಾರೆ’ ಎಂದು ಮಾರ್ನಿಂಗ್‌ಸ್ಟಾರ್ ಇನ್ವೆಸ್ಟ್‌ಮೆಂಟ್ ರಿಸರ್ಚ್ ಇಂಡಿಯಾದ ಸಹಾಯಕ ನಿರ್ದೇಶಕ ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ.

‘ಗ್ರೀನ್‌ಲ್ಯಾಂಡ್ ಅಮೆರಿಕಕ್ಕೆ ದೊರೆಯಲಿದೆ’

ವಾಷಿಂಗ್ಟನ್ (ಪಿಟಿಐ): ವಿಶ್ವದ ಅತಿದೊಡ್ಡ ದ್ವೀಪ ‘ಗ್ರೀನ್‌ಲ್ಯಾಂಡ್’ ಅಮೆರಿಕದ ಭಾಗವಾಗಬೇಕೆಂದು ಪಟ್ಟುಹಿಡಿದಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಈ ಪ್ರಕ್ರಿಯೆಗೆ ಡೆನ್ಮಾರ್ಕ್ ಸಹಕರಿಸದಿದ್ದರೆ ಅದು ಅನುಚಿತ ನಡೆಯಾಗಲಿದೆ ಎಂದು ಗುಡುಗಿದ್ದಾರೆ.

‘ಗ್ರೀನ್‌ಲ್ಯಾಂಡ್ ಅಮೆರಿಕಕ್ಕೆ ಸೇರುವ ಬಗ್ಗೆ ನನಗೆ ವಿಶ್ವಾಸವಿದೆ. ಗ್ರೀನ್‌ಲ್ಯಾಂಡ್‌ನಲ್ಲಿರುವ 55 ಸಾವಿರ ನಿವಾಸಿಗಳು ನಮ್ಮೊಂದಿಗಿರುವ ಬಗ್ಗೆ ಸಹಮತ ಹೊಂದಿದ್ದಾರೆ’ ಎಂದು ಟ್ರಂಪ್ ಅವರು ಸುದ್ದಿಗಾರರಿಗೆ ಹೇಳಿದ್ದಾರೆ.

‘ಗ್ರೀನ್‌ಲ್ಯಾಂಡ್ ಮೇಲೆ ಡೆನ್ಮಾರ್ಕ್‌ಗೆ ಯಾವ ಹಕ್ಕು ಇದೆ ಎಂಬುದು ನನಗೆ ತಿಳಿದಿಲ್ಲ. ಆದರೂ, ಗ್ರೀನ್‌ಲ್ಯಾಂಡ್ ಅನ್ನು ಹಸ್ತಾಂತರಿಸಲು ಡೆನ್ಮಾರ್ಕ್ ಒಪ್ಪದಿದ್ದರೆ ಅದು ಸ್ನೇಹಪರವಲ್ಲದ ನಡೆಯಾಗಲಿದೆ’ ಎಂದು ಟ್ರಂಪ್ ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

‘ಡೆನ್ಮಾರ್ಕ್‌ನ ಆಡಳಿತದ ಬಗ್ಗೆ ಗ್ರೀನ್‌ಲ್ಯಾಂಡ್ ನಿವಾಸಿಗಳಿಗೆ ಅಸಮಾಧಾನವಿದೆ. ಅಲ್ಲಿ ರಷ್ಯಾ ಹಾಗೂ ಚೀನಾದ ನೌಕೆಗಳು ಬೀಡುಬಿಟ್ಟಿದ್ದು, ಪರಿಸ್ಥಿತಿ ಹದಗೆಟ್ಟಿದೆ. ಜಗತ್ತಿನ ಸ್ವಾತಂತ್ರ್ಯಕ್ಕಾಗಿ ಗ್ರೀನ್‌ಲ್ಯಾಂಡ್ ನಮಗೆ ಅನಿವಾರ್ಯವಾಗಿದ್ದು, ಅದು ನಮಗೆ ದೊರೆಯುವ ವಿಶ್ವಾಸವಿದೆ’ ಎಂದಿದ್ದಾರೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಡೆನ್ಮಾರ್ಕ್ ಪ್ರಧಾನಿ ಮೆಟ್ಟೆ ಫ್ರೆಡ್‌ರಿಕ್‌ಸನ್ ಅವರ ನಡುವೆ ಕಳೆದ ವಾರ ನಡೆದ ದೂರವಾಣಿ ಸಂಭಾಷಣೆಯಲ್ಲಿ, ‘ಗ್ರೀನ್‌ಲ್ಯಾಂಡ್ ಮಾರಾಟಕ್ಕಿಲ್ಲ’ ಎಂದು ಮೆಟ್ಟೆ ಅವರು ಸ್ಪಷ್ಟಪಡಿಸಿದ್ದರು ಎನ್ನುವುದು ವರದಿಯಾದ ಬೆನ್ನಲ್ಲೆ, ಟ್ರಂಪ್ ಅವರು ಈ ಹೇಳಿಕೆ ನೀಡಿದ್ದಾರೆ.

ಹಾಪ್‌ಕಾಮ್ಸ್‌ಗಳಿಗೆ ಆರ್ಥಿಕ ಸಂಕಷ್ಟ

ಒಂದನೇ ಪುಟದಿಂದ...

‘ಮಾಲ್‌ಗಳಲ್ಲಿ ತರಕಾರಿ, ಹಣ್ಣುಗಳು ರಿಯಾಯಿತಿ ದರದಲ್ಲಿ ದೊರೆಯುವುದರಿಂದ ಹಾಪ್ ಕಾಮ್ಸ್‌ನಲ್ಲಿ ಖರೀದಿಸುವ ಗ್ರಾಹಕರ ಸಂಖ್ಯೆ ಕಡಿಮೆ ಆಗುತ್ತಿದೆ. ಕೆಲವು ಕಡೆ ದಿನಕ್ಕೆ ₹500 ರಿಂದ ₹600 ವ್ಯಾಪಾರ ಆಗುತ್ತಿರುವುದರಿಂದ ನಷ್ಟವುಂಟಾಗಿ ಮಳಿಗೆಗಳನ್ನು ಮುಚ್ಚಲಾಗುತ್ತಿದೆ. ಸಿಬ್ಬಂದಿ, ಸೌಲಭ್ಯ ಕೊರತೆ ಇದೆ. ಆರ್ಥಿಕ ನಷ್ಟದಿಂದಾಗಿ ಸಿಬ್ಬಂದಿಗೆ ವೇತನ ನೀಡಲು ಕಷ್ಟವಾಗಿದೆ. ಅನುದಾನ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡಲಾಗಿದೆ’ ಎಂದು ಹಾಪ್‌ಕಾಮ್ಸ್ ಅಧಿಕಾರಿಯೊಬ್ಬರು ತಿಳಿಸಿದರು.

ಮುಚ್ಚಿರುವ ಹಾಪ್‌ಕಾಮ್ಸ್ ಮಳಿಗೆಗಳು

ಜಿಲ್ಲೆ	ಮಳಿಗೆಗಳ ಸಂಖ್ಯೆ
ಬೆಂಗಳೂರು	92
ಬಾಗಲಕೋಟೆ	2
ಬೆಳಗಾವಿ	3
ಬೀದರ್	1
ಬಳ್ಳಾರಿ	2,
ಚಿತ್ರದುರ್ಗ	4
ಧಾರವಾಡ	6,
ಹಾಸನ	3,
ಕಲಬುರ್ಗಿ	1,
ಮಂಡ್ಯ	9
ಮೈಸೂರು	8
ಮಂಗಳೂರು	2
ತುಮಕೂರು	2
ವಿಜಯಪುರ	6
ಶಿವಮೊಗ್ಗ	1
ಒಟ್ಟು	142

ಗಾಜಾ ‘ಶುದ್ಧೀಕರಣಕ್ಕೆ’ ಟ್ರಂಪ್ ಪ್ರಸ್ತಾವ



ಡೊನಾಲ್ಡ್ ಟ್ರಂಪ್

ಗಾಜಾ ಪಟ್ಟಿ (ಎಎಫ್‌ಪಿ): ಗಾಜಾ ಪ್ರದೇಶವನ್ನು ‘ಸ್ವಚ್ಛ-ಗೊಳಿಸಲು’ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಯೋಜನೆಯೊಂದನ್ನು ಪ್ರಸ್ತಾಪಿಸಿದ್ದಾರೆ.

ಈಜಿಪ್ಟ್ ಮತ್ತು ಜೋರ್ಡನ್ ದೇಶಗಳು ಈ ಪ್ರದೇಶದಲ್ಲಿ ಇರುವ ಪ್ಯಾಲೆಸ್ಟೀನ್ ನಾಗರಿಕರನ್ನು ತಮ್ಮ ದೇಶಕ್ಕೆ ಬಿಟ್ಟುಕೊಳ್ಳಬೇಕು ಎಂದು ಟ್ರಂಪ್ ಹೇಳಿದ್ದಾರೆ.

ಪ್ಯಾಲೆಸ್ಟೀನ್ ನಾಗರಿಕರನ್ನು ಗಾಜಾ ಪಟ್ಟಿಯಿಂದ ಹೊರಗೆ ಒಯ್ಯುವ ಬಗ್ಗೆ ತಾವು ಜೋರ್ಡನ್‌ನ ರಾಜ ಎರಡನೆಯ ಅಬ್ದುಲ್ಲಾ ಜೊತೆ ಮಾತನಾಡಿರುವುದಾಗಿ ಟ್ರಂಪ್ ಹೇಳಿದ್ದಾರೆ. ‘ಈಜಿಪ್ಟ್ ಕೂಡ ಜನರನ್ನು ತನ್ನಲ್ಲಿ ಸೇರಿಸಿಕೊಳ್ಳಬೇಕು. ಜೋರ್ಡನ್ ಕೂಡ ಹೀಗೆ ಮಾಡಬೇಕು’ ಎಂದು ಟ್ರಂಪ್ ಅವರು ಸುದ್ದಿಗಾರರ ಬಳಿ ಹೇಳಿದ್ದಾರೆ.

ಪ್ಯಾಲೆಸ್ಟೀನ್ ನಾಗರಿಕರನ್ನು ಗಾಜಾ ಪ್ರದೇಶದಿಂದ ಒತ್ತಾಯಪೂರ್ವಕವಾಗಿ ಹೊರಗೆ ಕಳುಹಿಸುವುದನ್ನು ಈಜಿಪ್ಟ್ ಈ ಹಿಂದೆಯೇ ವಿರೋಧಿಸಿದೆ. ವಿಶ್ವಸಂಸ್ಥೆಯ ದಾಖಲೆಗಳ ಪ್ರಕಾರ ಜೋರ್ಡನ್‌ನಲ್ಲಿ 23 ಲಕ್ಷ ಪ್ಯಾಲೆಸ್ಟೀನ್ ನಿರಾಶ್ರಿತರು ಈಗಾಗಲೇ ಇದ್ದಾರೆ.

‘ಕೆಲವು ಅರಬ್ ದೇಶಗಳ ಜೊತೆ ನಾನು ಮಾತುಕತೆ ನಡೆಸುವೆ. ಅವರು (ಪ್ಯಾಲೆಸ್ಟೀನ್ ಜನ) ಶಾಂತಿಯಿಂದ ಇರುವ ರೀತಿಯಲ್ಲಿ ಬೇರೆಡೆ ಮನೆಗಳನ್ನು ನಿರ್ಮಿಸಲಾಗುತ್ತದೆ’ ಎಂದು ಟ್ರಂಪ್ ಹೇಳಿದ್ದಾರೆ. ಗಾಜಾದ ಜನರನ್ನು ಹೊರಗಡೆ ಕರೆದೊಯ್ಯುವುದು ತಾತ್ಕಾಲಿಕವಾಗಿರಬಹುದು ಅಥವಾ ದೀರ್ಘಾವಧಿಗೆ ಕೂಡ ಆಗಿರಬಹುದು ಎಂದು ತಿಳಿಸಿದ್ದಾರೆ.

ಗಾಜಾದಲ್ಲಿ ಯುದ್ಧ ಆರಂಭವಾದ ನಂತರದಲ್ಲಿ ಗಾಜಾದ ಬಹುತೇಕ ಜನರನ್ನು ಹಲವು ಬಾರಿ ಸ್ಥಳಾಂತರಿಸಲಾಗಿದೆ. ಟ್ರಂಪ್ ನೇತೃತ್ವದ ಆಡಳಿತವು ಇಸ್ರೇಲ್‌ಗೆ ತನ್ನ ಬೆಂಬಲವನ್ನು ಈಗಾಗಲೇ ಘೋಷಿಸಿದೆ.

ಇಸ್ರೇಲ್ ದಾಳಿ: ಒಬ್ಬನ ಸಾವು

ದೀರ್ ಅಲ್–ಬಲಾಹ್ (ಗಾಜಾ ಪಟ್ಟಿ) (ಎಪಿ): ಇಸ್ರೇಲ್ ದಾಳಿಯಿಂದಾಗಿ ಪ್ಯಾಲೆಸ್ಟೀನಿನ ಒಬ್ಬ ಮೃತಪಟ್ಟಿದ್ದು, 7 ಮಂದಿ ಗಾಯಗೊಂಡಿದ್ದಾರೆ. ಕದನವಿರಾಮ ಒಪ್ಪಂದದಂತೆ ಉತ್ತರ ಗಾಜಾಕ್ಕೆ ಮರಳುವ ನಿರೀಕ್ಷೆಯಲ್ಲಿದ್ದ ಪ್ಯಾಲೆಸ್ಟೀನಿಯರಿಗೆ ನಿರಾಸೆಯಾಗಿದೆ.

ಶನಿವಾರ ತಡರಾತ್ರಿ ನಡೆದ ಗುಂಡಿನ ದಾಳಿಯಲ್ಲಿ ಒಬ್ಬ ಮೃತಪಟ್ಟಿದ್ದು, ಇಬ್ಬರು ಗಾಯಗೊಂಡಿದ್ದಾರೆ. ಮಕ್ಕಳು ಸೇರಿದಂತೆ ಐವರು ಪ್ಯಾಲೆಸ್ಟೀನಿಯರು ಗುಂಡಿನದಾಳಿಯಿಂದ ಭಾನುವಾರ ಮುಂಜಾನೆ ಗಾಯಗೊಂಡಿದ್ದಾರೆ.

ಕದನ ವಿರಾಮ ಒಪ್ಪಂದದ ಅನ್ವಯ, ಉತ್ತರ ಗಾಜಾದಲ್ಲಿನ ತಮ್ಮ ಮನೆಗಳಿಗೆ ಮರಳಲು ಪ್ಯಾಲೆಸ್ಟೀನಿಯರಿಗೆ ಇಸ್ರೇಲ್ ಶನಿವಾರದಿಂದ ಅವಕಾಶ ನೀಡಬೇಕಿತ್ತು. ಆದರೆ ಹಮಾಸ್ ಒತ್ತೆಯಾಳಾಗಿರುವ ಇಸ್ರೇಲ್ ನಾಗರಿಕನನ್ನು ಬಿಡುಗಡೆಗೊಳಿಸುವವರೆಗೆ ಉತ್ತರ ಗಾಜಾವನ್ನು ಬಿಟ್ಟುಕೊಡಲಾರೆವು ಎಂದು ಇಸ್ರೇಲ್ ಪಟ್ಟುಹಿಡಿದಿದೆ.

ಗಣತಂತ್ರದ ಹಬ್ಬ: ಎಲ್ಲೆಡೆ ಸಂಭ್ರಮ



ಸಂವಿಧಾನ ಮಹತ್ವ ಸಾರಿದ ಸ್ತಬ್ಧಚಿತ್ರಗಳು

ನವದೆಹಲಿ: ಸಂವಿಧಾನ ಅಂಗೀಕರಿಸಿರುವುದಕ್ಕೆ 75 ವರ್ಷ ತುಂಬಿದ್ದು, ಇದೇ ವಿಷಯ ಆಧರಿಸಿ ನಿರ್ಮಿಸಿದ್ದ ಎರಡು ಸ್ತಬ್ಧಚಿತ್ರಗಳು ಈ ಬಾರಿಯ ಗಣ ರಾಜ್ಯೋತ್ಸವದ ಪಥ ಸಂಚಲನದಲ್ಲಿ ಗಮನ ಸೆಳೆದವು.

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ಹಾಗೂ ಕೇಂದ್ರ ಲೋಕೋಪಯೋಗಿ ಇಲಾಖೆ (ಸಿಪಿಡಬ್ಲ್ಯುಡಿ) ಈ ಸ್ತಬ್ಧಚಿತ್ರಗಳನ್ನು ನಿರ್ಮಿಸಿದ್ದವು.

‘ಆಜಾದಿ ಕಾ ಅಮೃತ ಮಹೋತ್ಸವ’ ಭಾಗವಾಗಿ ಸಚಿವಾಲಯ ಸ್ತಬ್ಧಚಿತ್ರ ನಿರ್ಮಿಸಿತ್ತು. ನ್ಯಾಯ, ಸಮಾನತೆ, ಸ್ವಾತಂತ್ರ್ಯ ಹಾಗೂ ಭ್ರಾತೃತ್ವಕ್ಕೆ ಸಂವಿಧಾನವೇ ಬುನಾದಿ ಎಂಬ ಸಂದೇಶ ಸಾರುವಂತಿದ್ದ ಈ ಸ್ತಬ್ಧಚಿತ್ರ ದೇಶದ ಕಲೆ, ವಾಸ್ತುಶಿಲ್ಪ ಹಾಗೂ ಸಾಂಸ್ಕೃತಿಕ ವೈವಿಧ್ಯವನ್ನು ಕೂಡ ತೋರಿಸುವಂತಿತ್ತು.

ಅಶೋಕ ಸ್ತಂಭ ಮತ್ತು ಚಕ್ರ, ಇದರ ಹಿಂಬದಿಯಲ್ಲಿ ಪ್ರಸ್ತಾವನೆ ಸಹಿತ ಸಂವಿಧಾನ ಪ್ರತಿಯ ಪ್ರತಿಕೃತಿ ನಿರ್ಮಿಸಲಾಗಿತ್ತು.

ಸಿಪಿಡಬ್ಲ್ಯುಡಿ ನಿರ್ಮಿಸಿದ್ದ ಹೂವುಗಳಿಂದ ಅಲಂಕೃತ ಸ್ತಬ್ಧಚಿತ್ರವು ಸಂವಿಧಾನ, ಅಶೋಕ ಚಕ್ರ ಹಾಗೂ ಅಂಬೇಡ್ಕರ್ ಅವರ ಚಿತ್ರವನ್ನು ಒಳಗೊಂಡಿತ್ತು. 1946ರಲ್ಲಿ ಅಂಬೇಡ್ಕರ್ ಮಾಡಿದ್ದ ಭಾಷಣದ ಧ್ವನಿಮುದ್ರಣವನ್ನು ಬಿತ್ತರಿಸುವ ವ್ಯವಸ್ಥೆ ಒಳಗೊಂಡಿತ್ತು.



ಕೇಂದ್ರ ಲೋಕೋಪಯೋಗಿ ಇಲಾಖೆ ಪ್ರದರ್ಶಿಸಿದ ಸ್ತಬ್ಧಚಿತ್ರ — ಪಿಟಿಐ ಚಿತ್ರ



ಎಂಎಸ್‌ಪಿಗೆ ಖಾತರಿ ರೈತರಿಂದ ಟ್ರ್ಯಾಕ್ಟರ್ ರ‍್ಯಾಲಿ

ಹೋಶಿಯಾರ್‌ಪುರ/ಚಂಡೀಗಢ (ಪಿಟಿಐ): ಎಂಎಸ್‌ಪಿಗೆ ಕಾನೂನಿನ ಖಾತರಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಸಂಘಟನೆ ಅಡಿ ವಿವಿಧ ರೈತ ಸಂಘಗಳು ಒಟ್ಟುಗೂಡಿ ಪಂಜಾಬ್‌ನಾದ್ಯಂತ ಭಾನುವಾರ ಟ್ರ್ಯಾಕ್ಟರ್ ರ‍್ಯಾಲಿ ನಡೆಸಿದವು.

ಸಂಘಟನೆಗಳ ಪ್ರಮುಖ ನಾಯಕರೂ ಸೇರಿ ನೂರಾರು ರೈತರು ರ‍್ಯಾಲಿಯಲ್ಲಿ ಭಾಗವಹಿಸಿದ್ದರು. ರೈತರು ತಮ್ಮ ಟ್ರ್ಯಾಕ್ಟರ್ ಮೇಲೆ ಕಪ್ಪು ಬಾವುಟ ಹಾರಿಸಿದರು. ಗಣರಾಜ್ಯೋತ್ಸವದ ಅಂಗವಾಗಿ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿಯೂ ರ‍್ಯಾಲಿ ನಡೆಸುವಂತೆ ಎಸ್‌ಕೆಎಂ ಕರೆ ನೀಡಿತ್ತು.

ಇನ್ನೊಂದೆಡೆ, 2024ರ ಫೆಬ್ರುವರಿಯಿಂದಲೂ ಶಂಭು ಗಡಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ಕಿಸಾನ್ ಮಜ್ದೂರ್ ಮೋರ್ಚಾ (ಕೆಎಂಎಂ) ಸಂಘಟನೆ ಕೂಡ ರಾಜ್ಯದಾದ್ಯಂತ ವಿವಿಧೆಡೆ ಭಾನುವಾರ ಪ್ರತಿಭಟನೆ ನಡೆಸಿತು. ದೊಡ್ಡ ದೊಡ್ಡ ಮಾಲ್‌ಗಳ ಎದುರು ಟ್ರ್ಯಾಕ್ಟರ್ ನಿಲ್ಲಿಸುವುದರ ಮೂಲಕ ಕೆಎಂಎಂ ಪ್ರತಿಭಟನೆ ನಡೆಸಿತು. ಇದಕ್ಕೆ ಮಾಲ್‌ಗಳ ಮಾಲೀಕರು ವಿರೋಧ ವ್ಯಕ್ತಪಡಿಸಿದರು.

‘ಸಣ್ಣ ಉದ್ದಿಮೆದಾರರ ಪರವಾಗಿ ಹಾಗೂ ನಮ್ಮ ನಾಯಕ ಜಗಜೀತ್ ಸಿಂಗ್ ಡಲ್ಲೇವಾಲ್ ಅವರಿಗಾಗಿಯೂ ಪ್ರತಿಭಟನೆ ನಡೆಸಿದ್ದೇವೆ’ ಎಂದು ಕೆಎಂಎಂ ಸಂಘಟನೆಯ ರೈತರು ಹೇಳಿದರು.



ನವದೆಹಲಿ ಪಥಸಂಚಲನದಲ್ಲಿ ವಿವಿಧ ರಾಜ್ಯಗಳ ಜಾನಪದ ಕಲಾತಂಡಗಳು ಪಾಲ್ಗೊಂಡಿದ್ದವು



ನವದೆಹಲಿಯ ಇರ್ವಿನ್ ಆ್ಯಂಪಿಥಿಯೇಟರ್‌ನಲ್ಲಿ 1950ರ ಜನವರಿ 26ರಂದು ನಡೆದ ಮೊದಲ ಗಣರಾಜ್ಯೋತ್ಸವದ ಚಿತ್ರವನ್ನು ಪುಸ್ತಿಕೆಯೊಂದರಲ್ಲಿ ಪ್ರಕಟಿಸಲಾಗಿದೆ. ಈ ಪುಸ್ತಿಕೆಯನ್ನು ಕರ್ತವ್ಯ ಪಥದಲ್ಲಿ ನಡೆದ 76ನೆಯ ಗಣರಾಜ್ಯೋತ್ಸವದ ದಿನ ಸಭಿಕರೊಬ್ಬರು ಹಿಡಿದಿದ್ದರು

— ಪಿಟಿಐ ಚಿತ್ರಗಳು

ಲಕ್ಕುಂಡಿಯ ಶಿಲ್ಪಕಲಾ ವೈಭವ ತೆರೆದಿಟ್ಟ ಸ್ತಬ್ಧಚಿತ್ರ

ನವದೆಹಲಿ (ಪಿಟಿಐ): ಸೂಕ್ಷ್ಮ ಮತ್ತು ಆಕರ್ಷಕ ಕೆತ್ತನೆಗೆ ಹೆಸರಾದ, ಐತಿಹಾಸಿಕ ಲಕ್ಕುಂಡಿ ದೇವಾಲಯಗಳ ಹಿರಿಮೆ ಪ್ರದರ್ಶಿಸುವ ಸ್ತಬ್ಧಚಿತ್ರ ಈ ಬಾರಿಯ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಕರ್ನಾಟಕದ ಶಿಲ್ಪಕಲೆಯ ವೈಭವವನ್ನು ತೆರೆದಿಟ್ಟಿತು.

ಲಕ್ಕುಂಡಿಯನ್ನು ‘ಶಿಲ್ಪಕಲೆ ತೊಟ್ಟಿಲು’ ಎಂದು ಕರೆಯಲಾಗುತ್ತದೆ. ಜಿನಾಲಯದಲ್ಲಿನ ಚತುರ್ಮುಖ ಬ್ರಹ್ಮನ ಮೂರ್ತಿಯ ಪ್ರತಿಕೃತಿಯು ಸ್ತಬ್ಧಚಿತ್ರದ ಮುಂಭಾಗದಲ್ಲಿದೆ. ನಂತರ ಬ್ರಹ್ಮ ಜಿನಾಲಯ ದೇವಸ್ಥಾನದ ತೆರೆದ ಕಂಬದ ಮಂಟಪ ನಿರ್ಮಿಸಲಾಗಿದೆ. ಭವ್ಯವಾದ ಕಾಶಿ ವಿಶ್ವೇಶ್ವರ ಮತ್ತು ನನ್ನೇಶ್ವರ (ಶಿವ) ದೇವಸ್ಥಾನದ ಪ್ರತಿಕೃತಿಗಳನ್ನು ಕೂಡ ಸ್ತಬ್ಧಚಿತ್ರವು ಒಳಗೊಂಡಿತ್ತು.

ಕಲ್ಯಾಣಿ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿದ್ದ ಲಕ್ಕುಂಡಿಯಲ್ಲಿ ಶೈವ, ಜೈನ ಮತ್ತು ವೈಷ್ಣವ ದೇವಾಲಯಗಳಿದ್ದು, ‘ಸರ್ವಜನಾಂಗದ ಶಾಂತಿಯ ತೋಟ’ ಎಂಬ ಸಂದೇಶವನ್ನು ಸಾರುತ್ತದೆ. ಇದೇ ಸಂದೇಶವನ್ನು ಸ್ತಬ್ಧಚಿತ್ರವೂ ಪ್ರತಿಧ್ವನಿಸಿತು.



ದೇಶದ ಸೇನೆ ಶಕ್ತಿ, ಸಂಸ್ಕೃತಿ ಸಮೃದ್ಧಿ ಪ್ರದರ್ಶನ

ಒಂದನೇ ಪುಟದಿಂದ...

ಪ್ರಧಾನಿ ನರೇಂದ್ರ ಮೋದಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸೇರಿದಂತೆ ಕೇಂದ್ರ ಸಚಿವರು, ಸೇನಾಪಡೆಗಳ ಉನ್ನತ ಅಧಿಕಾರಿಗಳು, ವಿದೇಶಗಳ ರಾಜತಾಂತ್ರಿಕರು, ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.

ಆಗಸದಲ್ಲಿ ತ್ರಿವರ್ಣಗಳ ಹೊಗೆ ಹಬ್ಬಿಸಿ, ಅಬ್ಬರಿಸುತ್ತಾ ಹಾರಾಟ ನಡೆಸಿದ ಯುದ್ಧವಿಮಾನಗಳು, ಹೆಲಿಕಾಪ್ಟರ್‌ಗಳು ಕಾರ್ಯಕ್ರಮದ ಆಕರ್ಷಣೆಯಾಗಿದ್ದವು.



ನವದೆಹಲಿಯ ಕರ್ತವ್ಯ ಪಥದಲ್ಲಿ ಭಾನುವಾರ ನಡೆದ ಪಥಸಂಚಲನದಲ್ಲಿ ಸೇನೆಯ ‘ಆಕಾಶ್’ ಕ್ಷಿಪಣಿ ವ್ಯವಸ್ಥೆಯ ಪ್ರದರ್ಶನ ಗಮನ ಸೆಳೆಯಿತು

ವಿಶೇಷ ಅತಿಥಿಗಳು

ಜನರ ಪಾಲ್ಗೊಳ್ಳುವಿಕೆ ಹೆಚ್ಚಿಸಬೇಕು ಎಂಬ ಉದ್ದೇಶದಿಂದ ಈ ಬಾರಿ, ವಿವಿಧ ಕ್ಷೇತ್ರಗಳ ಜನರಿಗೆ ಆಹ್ವಾನ ನೀಡಲಾಗಿತ್ತು.

ಸರ್ಕಾರದ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಿರುವ ಗ್ರಾಮ ಪಂಚಾಯಿತಿಗಳ 300 ಸದಸ್ಯರನ್ನು ಆಹ್ವಾನಿಸಲಾಗಿತ್ತು. ಕೇಂದ್ರದ ಆಡಳಿತ ಸುಧಾರಣೆಗಳು ಮತ್ತು ಸಾರ್ವಜನಿಕ ಕುಂದುಕೊರತೆಗಳ ಇಲಾಖೆ ಈ ಕುರಿತ ಸ್ಪರ್ಧೆಗಳನ್ನು ಹಮ್ಮಿಕೊಂಡಿತ್ತು.

ಪ್ರಾಕೃತಿಕ ವಿಕೋಪಗಳಲ್ಲಿ ಪರಿಹಾರ ಕಾರ್ಯ ಕೈಗೊಳ್ಳುವವರ ಪೈಕಿ 300 ಸಿಬ್ಬಂದಿ, ಜಲ ಸಂರಕ್ಷಣೆಗೆ ಹೋರಾಡುತ್ತಿರುವ 400 ಮಂದಿ, ಪ್ರಾಥಮಿಕ ಕೃಷಿ ಪತ್ತಿನ ಸಂಘಗಳ 200 ಪ್ರತಿನಿಧಿಗಳು, ‘ಪಾನಿ ಸಮಿತಿ’ಗಳ 400 ಪ್ರತಿನಿಧಿಗಳು, 400 ಸಮುದಾಯ ಸಂಪನ್ಮೂಲ ವ್ಯಕ್ತಿಗಳು, ಸ್ವಸಹಾಯ ಗುಂಪುಗಳ 200 ಸದಸ್ಯರು ಸೇರಿದಂತೆ ವಿವಿಧ ಕ್ಷೇತ್ರಗಳ 10 ಸಾವಿರಕ್ಕೂ ಹೆಚ್ಚು ಜನರು ಗಣರಾಜ್ಯೋತ್ಸವದ ಪಥಸಂಚಲನವನ್ನು ಕಣ್ತುಂಬಿಕೊಂಡರು.

ಈ ವಿಶೇಷ ಅತಿಥಿಗಳು, ಪಥಸಂಚಲನ ವೀಕ್ಷಿಸಿದ ನಂತರ ರಾಷ್ಟ್ರೀಯ ಯುದ್ಧ ಸ್ಮಾರಕ, ಪ್ರಧಾನ ಮಂತ್ರಿಗಳ ಸಂಗ್ರಹಾಲಯ ಹಾಗೂ ದೆಹಲಿಯಲ್ಲಿರುವ ಪ್ರಮುಖ ಸ್ಥಳಗಳಿಗೆ ಭೇಟಿ ನೀಡಿದರು.

ಭದ್ರತಾಪಡೆ: ಶಕ್ತಿ ಪ್ರದರ್ಶನ

‘ರಕ್ಷಾ ಕವಚ’ ವಿಷಯದಡಿ ನಿರ್ಮಿಸಿದ್ದ ಸ್ತಬ್ಧಚಿತ್ರ, ಸೇನಾಪಡೆಗಳ ಸಾಮರ್ಥ್ಯ ತೆರೆದಿಟ್ಟಿತು. ದೇಶೀಯವಾಗಿಯೇ ತಯಾರಿಸಲಾಗಿರುವ ‘ಪ್ರಳಯ’ ಕ್ಷಿಪಣಿಯನ್ನು ಪಥಸಂಚಲನದಲ್ಲಿ ಪ್ರದರ್ಶಿಸಲಾಯಿತು. ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಘಟನೆ (ಡಿಆರ್‌ಡಿಒ) ಅಭಿವೃದ್ಧಿಪಡಿಸಿರುವ ಈ ಕ್ಷಿಪಣಿಯು ಅಣ್ವಸ್ತ್ರ ಸಿಡಿತಲೆ ಹೊತ್ತೊಯ್ದು, ನಿರ್ದೇಶಿತ ಗುರಿ ನಾಶ ಮಾಡುವ ಸಾಮರ್ಥ್ಯ ಹೊಂದಿದೆ.150ರಿಂದ 500 ಕಿ.ಮೀ. ದೂರ ಸಾಗಬಲ್ಲದು. ಉಪಗ್ರಹ ಆಧಾರಿತ ಕಣ್ಗಾವಲು ವ್ಯವಸ್ಥೆ ‘ಅರುದ್ರ’ ರೇಡಾರ್, ಎಲೆಕ್ಟ್ರಾನಿಕ್ ಯುದ್ಧವ್ಯವಸ್ಥೆ ‘ಧಾರಾಶಕ್ತಿ’, ಲೇಸರ್ ಆಧಾರಿತ ಆಯುಧಗಳು, ವಾಯು ಪ್ರದೇಶ ರಕ್ಷಣಾ ವ್ಯವಸ್ಥೆಗಳು ಗಮನ ಸೆಳೆದವು.

‘ಸಶಕ್ತಿ ಮತ್ತು ಸುರಕ್ಷಿತ ಭಾರತ’ ವಿಷಯದಡಿ, ಮೂರೂ ಭದ್ರತಾಪಡೆಗಳು ನಡೆಸಿದ ‘ಜಂಟಿ ಕಾರ್ಯಾಚರಣೆ’ ಬಿಂಬಿಸುವ ಸ್ತಬ್ಧಚಿತ್ರ ಹಾಗೂ ಯುದ್ಧಭೂಮಿ ಮೇಲೆ ಕಣ್ಗಾವಲಿಡುವ ವ್ಯವಸ್ಥೆ ‘ಸಂಜಯ’, ‘ಅರ್ಜುನ’ ಟ್ಯಾಂಕ್, ತೇಜಸ್ ಯುದ್ಧ ವಿಮಾನ, ಎಎಲ್‌ಎಚ್ ಹೆಲಿಕಾಪ್ಟರ್ ಮೂಲಕ ನೆಲ, ಜಲ ಮತ್ತು ವಾಯುಪ್ರದೇಶದಲ್ಲಿ ನಡೆಯುವ ಕಾರ್ಯಾಚರಣೆ ಪ್ರಸ್ತುತಪಡಿಸಲಾಯಿತು.

‘ಟಿ-90 ಭೀಷ್ಮ’ ಟ್ಯಾಂಕ್, ಎನ್‌ಎಜಿ ಕ್ಷಿಪಣಿ ವ್ಯವಸ್ಥೆಗಳು, ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿಗಳು, ಬಹು ಉಡ್ಡಯನ ರಾಕೆಟ್ ವ್ಯವಸ್ಥೆ ‘ಪಿನಾಕಾ’, ಮಲ್ಟಿಬ್ಯಾರೆಲ್ ರಾಕೆಟ್ ಲಾಂಚರ್ ‘ಅಗ್ನಿಬಾಣ’, ‘ಆಕಾಶ್’ ಆಯುಧ ವ್ಯವಸ್ಥೆ, ಎಲ್ಲ ಭೂಪ್ರದೇಶಗಳಲ್ಲಿಯೂ ಮುನ್ನುಗ್ಗಬಲ್ಲ ಸಾಮರ್ಥ್ಯದ ವಾಹನ ‘ಚೇತಕ್’ ಪ್ರದರ್ಶನವೂ ಇತ್ತು.

ವೈಶಿಷ್ಟ್ಯಗಳು

ಒಂದನೇ ಪುಟದಿಂದ...

- ಪಿ.ಎಂ.ಸೂರ್ಯ ಘರ್ ಯೋಜನೆ ಮತ್ತು ಪಿ.ಎಂ. ಕುಸುಮ ಯೋಜನೆಯಡಿ ನವೀಕರಿಸಬಹುದಾದ ಇಂಧನ ಬಳಕೆ ಮಾಡುವ ರೈತರು ಹಾಗೂ ಕುಟುಂಬಗಳ ಸದಸ್ಯರೂ ಭಾಗಿ
- ತಮ್ಮ ಸಂಶೋಧನೆಗಳಿಗೆ ಪೇಟೆಂಟ್ ಪಡೆದವರ ಪೈಕಿ 100 ಮಂದಿ, 100 ನವೋದ್ಯಮಿಗಳು, ರಸ್ತೆ ನಿರ್ಮಾಣದ 300 ಕಾರ್ಮಿಕರು ಪಾಲ್ಗೊಂಡಿದ್ದರು
- ಮಾಸಿಕ ‘ಮನದ ಮಾತು’ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದವರ ಪೈಕಿ 400 ಮಂದಿಗೆ ಆಹ್ವಾನ
- ವಿವಿಧ ರಾಜ್ಯಗಳ ಸಂಸ್ಕೃತಿ, ಜಾನಪದ ಕಲೆಗಳನ್ನು ಬಿಂಬಿಸುವ ಸ್ತಬ್ಧಚಿತ್ರಗಳ ಪ್ರದರ್ಶನ, ಕಲಾ ತಂಡಗಳಿಂದ ಪ್ರಸ್ತುತಿ
- ಎನ್‌ಸಿಸಿ ಕೆಡೆಟ್‌ಗಳು, ಎನ್‌ಎಸ್‌ಎಸ್ ಸ್ವಯಂ ಸೇವಕರಿಂದಲೂ ಪಥಸಂಚಲನ
- ಸಂಗೀತ ನಾಟಕ ಅಕಾಡೆಮಿ ಸಿದ್ಧಪಡಿಸಿದ, 11 ನಿಮಿಷಗಳ ನೃತ್ಯರೂಪಕ ‘ಜಯತಿ ಜಯ ಮಮಃ ಭಾರತಂ’ ಗಮನ ಸೆಳೆಯಿತು

ಸರ್ಕಾರಿ ಶಾಲೆಗಳ ಬ್ಯಾಂಡ್‌ಗಳು ಭಾಗಿ

ಇದೇ ಮೊದಲ ಬಾರಿಗೆ ಮೂರು ಸರ್ಕಾರಿ ಶಾಲೆಗಳ ಬ್ಯಾಂಡ್‌ಗಳು ಭಾಗಿಯಾಗಿದ್ದವು. ಜಾರ್ಖಂಡ್‌ನ ಪಟ್ಮದಾ ಪಟ್ಟಣದ ಪಿ.ಎಂ.ಶ್ರೀ ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ, ಸಿಕ್ಕಿಂನ ಗವರ್ನ್‌ಮೆಂಟ್ ವೆಸ್ಟ್ ಪಾಯಿಂಟ್ ಸೀನಿಯರ್ ಸೆಕಂಡರಿ ಸ್ಕೂಲ್ ಹಾಗೂ ಬೆಳಗಾವಿಯ ಪಿ.ಎಂ.ಶ್ರೀ ಕೇಂದ್ರೀಯ ವಿದ್ಯಾಲಯ ನಂ.2 ಶಾಲೆಯ ಪೈಪ್ ಬ್ಯಾಂಡ್ (ಬಾಲಕ ತಂಡ) ಪಾಲ್ಗೊಂಡಿದ್ದವು. ಈ ಪೈಕಿ ಜಾರ್ಖಂಡ್‌ನ ಪಟ್ಮದಾ ತಂಡದ ಸದಸ್ಯರ ಪೈಕಿ ಬಹುತೇಕ ಬಾಲಕಿಯರು ಕೃಷಿ ಕೂಲಿಕಾರರ ಮತ್ತು ದಿನಗೂಲಿಗಳ ಕುಟುಂಬಗಳಿಗೆ ಸೇರಿದವರಾಗಿದ್ದಾರೆ. ಅಲ್ಲದೇ, ಬಹುತೇಕ ಬಾಲಕಿಯರಿಗೆ ಇದು ದೆಹಲಿಗೆ ಮೊದಲ ಪ್ರವಾಸವೂ ಆಗಿತ್ತು.

ಗುವಾಹಟಿ: ಸ್ಫೋಟದ ಸದ್ದು

ಗುವಾಹಟಿ: ಗಣರಾಜ್ಯೋತ್ಸವ ಆಚರಣೆ ಸಂದರ್ಭದಲ್ಲಿ ಇಲ್ಲಿನ ಮಾರುಕಟ್ಟೆಯೊಂದರ ಸಮೀಪದಲ್ಲಿ ಉಂಟಾದ ಭಾರಿ ಶಬ್ದವು ಜನರಲ್ಲಿ ಭೀತಿ ಸೃಷ್ಟಿಸಿತು. ಇದರಿಂದಾಗಿ ಭದ್ರತಾ ವ್ಯವಸ್ಥೆಯ ಬಗ್ಗೆ ಗೊಂದಲಗಳು ಸೃಷ್ಟಿಯಾದವು.

ನುಸುಳುಕೋರರ ಗುಂಪಾಗಿರುವ ಉಲ್ಫಾ-ಐ, ಸಾಂಕೇತಿಕ ಪ್ರತಿಭಟನೆಯಾಗಿ ತಾನು ಕಚ್ಚಾ ಬಾಂಬ್ ಸ್ಫೋಟಿಸಿರುವುದಾಗಿ ಹೇಳಿದೆ. ಆದರೆ, ಸಂಘಟನೆ ಹೇಳಿದ್ದನ್ನು ಪೊಲೀಸರು ಒಪ್ಪಿಲ್ಲ. ಸ್ಫೋಟಕ್ಕೆ ಕಾರಣ ಏನು ಎಂಬುದರ ತನಿಖೆ ನಡೆದಿದೆ ಎಂದು ಪೊಲೀಸರು ಹೇಳಿದ್ದಾರೆ. ನಗರದ ತರಕಾರಿ ಮಾರುಕಟ್ಟೆಯ ಸನಿಹದಲ್ಲಿ ಸಾರ್ವಜನಿಕರು ತ್ರಿವರ್ಣ ಧ್ವಜಾರೋಹಣಕ್ಕೆ ಸೇರಿದ್ದರು. ಬೆಳಿಗ್ಗೆ 7.45ರ ಸುಮಾರಿಗೆ ಉಂಟಾದ ಭಾರಿ ಸದ್ದು ಜನರಲ್ಲಿ ಆತಂಕ ಮೂಡಿಸಿತು. ಪೊಲೀಸರು ಸ್ಥಳಕ್ಕೆ ಧಾವಿಸಿದರಾದರೂ ಭಾರಿ ಸದ್ದಿಗೆ ಕಾರಣ ಏನು ಎಂಬುದು ಅವರಿಗೆ ಸ್ಪಷ್ಟವಾಗಲಿಲ್ಲ.

ಜನರು ಸ್ವಾತಂತ್ರ್ಯೋತ್ಸವ, ಗಣರಾಜ್ಯೋತ್ಸವದಲ್ಲಿ ಪಾಲ್ಗೊಳ್ಳಬಾರದು ಎಂಬ ಸಂದೇಶ ರವಾನಿಸಲು ಕಚ್ಚಾ ಬಾಂಬ್ ಸ್ಫೋಟಿಸಿರುವುದಾಗಿ ಉಲ್ಫಾ–ಐ ಹೇಳಿದೆ.

ಮುಟ್ಟು: ಪ್ಯಾಡ್ ನೀಡಲು ನಿರಾಕರಣೆ



ಲಖನೌ: ಪರೀಕ್ಷೆ ಬರೆಯುವ ಸಂದರ್ಭದಲ್ಲಿ ಮುಟ್ಟು ಆರಂಭವಾದ ವಿದ್ಯಾರ್ಥಿನಿಯೊಬ್ಬರಿಗೆ ಸ್ಯಾನಿಟರಿ ಪ್ಯಾಡ್ ನೀಡದೆ, ಪರೀಕ್ಷೆ ಬರೆಯಲೂ ಬಿಡದೆ, ಪ್ರಾಂಶುಪಾಲರ ಕಚೇರಿ ಎದುರು ಒಂದು ತಾಸು ನಿಲ್ಲಿಸಿ, ನಂತರ ಮನೆಗೆ ಕಳುಹಿಸಿದ ಅಮಾನವೀಯ ಘಟನೆ ಉತ್ತರ ಪ್ರದೇಶದ ಬರೇಲಿ ಜಿಲ್ಲೆಯಲ್ಲಿ ನಡೆದಿದೆ.

ಮಹಿಳೆಯರಿಗಾಗಿಯೇ ಇರುವ ಖಾಸಗಿ ಕಾಲೇಜುವೊಂದರಲ್ಲಿ ಶನಿವಾರ ಈ ಘಟನೆ ನಡೆದಿದೆ. ಪ್ರಾಂಶುಪಾಲರ ಕಚೇರಿ ಎದುರು ನಿಂತಿರುವಾಗಲೂ ರಕ್ತಸ್ರಾವವಾಗುತ್ತಿದ್ದ ವಿದ್ಯಾರ್ಥಿನಿಯ ಬಟ್ಟೆಯೆಲ್ಲ ಕಲೆಗಳಾಗಿದ್ದವು. ಇದೇ ಬಟ್ಟೆಯಲ್ಲಿಯೇ ವಾಪಸು ಮನೆಗೆ ತೆರಳಿದ ಆಕೆಗೆ ಅವಮಾನವಾಗಿದೆ ಎಂದು ವಿದ್ಯಾರ್ಥಿನಿಯ ಪೋಷಕರು ದೂರಿದ್ದಾರೆ. ‘ಆಕೆಯನ್ನು ಈ ಸ್ಥಿತಿಗೆ ತಂದ ಶಿಕ್ಷಕರಿಗೆ ಕಠಿಣ ಶಿಕ್ಷೆಯಾಗಬೇಕು’ ಎಂದು ಆಕ್ರೋಶ ವ್ಯಕ್ತಪಡಿಸಿರುವ ಪೋಷಕರು ಘಟನೆ ಸಂಬಂಧ ಜಿಲ್ಲಾ ಶಿಕ್ಷಣ ಅಧಿಕಾರಿಗೆ ದೂರು ನೀಡಿದ್ದಾರೆ.

‘ನಮ್ಮದು ಹೆಣ್ಣುಮಕ್ಕಳದ್ದೇ ಕಾಲೇಜು. ಇಲ್ಲಿ ಎಲ್ಲ ಶಿಕ್ಷಕಿಯರ ಹತ್ತಿರವೂ ಸ್ಯಾನಿಟರಿ ಪ್ಯಾಡ್‌ಗಳಿವೆ. ಯಾಕಾಗಿ ಆಕೆಗೆ ಪ್ಯಾಡ್ ನೀಡಲಿಲ್ಲ ಎಂದು ತನಿಖೆ ನಡೆಸುತ್ತಿದ್ದೇವೆ. ನನಗೆ ವಿಷಯ ತಿಳಿಯುವ ಹೊತ್ತಿಗೆ ವಿದ್ಯಾರ್ಥಿನಿಯು ಮನೆಗೆ ವಾಪಸು ಹೋಗಿದ್ದಳು’ ಎಂದು ಪ್ರಾಂಶುಪಾಲರಾದ ರಚನಾ ಅರೋರಾ ಪ್ರತಿಕ್ರಿಯಿಸಿದರು.

ಶ್ರೀರಾಮುಲು ಪರ– ವಿರೋಧ ನಿಲ್ಲದ ಚರ್ಚೆ

ಒಂದನೇ ಪುಟದಿಂದ...

ಕೊಪ್ಪಳದಲ್ಲಿ ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿ, ‘ರಾಮುಲು ಕಾಂಗ್ರೆಸ್ ಪಕ್ಷಕ್ಕೆ ಬರುವ ಹಾಗೆ ಕಾಣುತ್ತಿಲ್ಲ. ಆದರೆ ನಮ್ಮ ಪಕ್ಷದ ಹೆಸರಿನಲ್ಲಿ ಬಿಜೆಪಿಯಲ್ಲಿ ತಮ್ಮ ಕೆಲಸ ಮಾಡಿಕೊಳ್ಳುತ್ತಿದ್ದಾರೆ. ಅವರು ನಾಟಕ ಮಾಡುತ್ತಿದ್ದಾರೆ ಎನಿಸುತ್ತಿದೆ’ ಎಂದರು.

‘ಕಾಂಗ್ರೆಸ್ ಪಕ್ಷದಲ್ಲಿ ಯಾವ ಗೊಂದಲವೂ ಇಲ್ಲ. ಸಿಎಂ ಕುರ್ಚಿಯಷ್ಟೇ ಅಲ್ಲ, ಕೆಪಿಸಿಸಿ ಅಧ್ಯಕ್ಷರ ಹುದ್ದೆಯೂ ಖಾಲಿ ಇಲ್ಲ. ಹೀಗಾಗಿ ಅವರು ಬದಲಾಗುತ್ತಾರೆ ಎನ್ನುವುದರಲ್ಲಿ ಅರ್ಥವಿಲ್ಲ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಜನಾರ್ದನ ರೆಡ್ಡಿ ಉಚ್ಚಾಟನೆಗೆ ಆಗ್ರಹ

ಬೆಂಗಳೂರು: ‘ಶ್ರೀರಾಮುಲು ವಿರುದ್ಧ ನಿರಾಧಾರವಾಗಿ ಆರೋಪ ಮಾಡುತ್ತಿರುವ ಶಾಸಕ ಜಿ. ಜನಾರ್ದನ ರೆಡ್ಡಿ ಅವರನ್ನು ಬಿಜೆಪಿಯಿಂದ ಉಚ್ಚಾಟಿಸಬೇಕು. ಶ್ರೀರಾಮುಲು ಅವರನ್ನು ಪಕ್ಷದಲ್ಲಿ ಕಡೆಗಣಿಸಿದರೆ ಮುಂದಿನ ಎಲ್ಲ ಚುನಾವಣೆಗಳಲ್ಲೂ ಬಿಜೆಪಿಯನ್ನು ಬಹಿಷ್ಕರಿಸುತ್ತೇವೆ’ ಎಂದು ವಾಲ್ಮೀಕಿ ಸ್ವಾಭಿಮಾನಿ ಸಂಘದ ರಾಜ್ಯಾಧ್ಯಕ್ಷ ಚಳವಳಿ ರಾಜಣ್ಣ ಎಚ್ಚರಿಸಿದರು.

ವಾಲ್ಮೀಕಿ ಸ್ವಾಭಿಮಾನಿ ಸಂಘ ಹಾಗೂ ವಿವಿಧ ಸಂಘಟನೆಗಳ ಮುಖಂಡರೊಂದಿಗೆ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಒಂದು ವಾರದೊಳಗೆ ಜನಾರ್ದನ ರೆಡ್ಡಿ ಅವರನ್ನು ಪಕ್ಷದಿಂದ ಉಚ್ಚಾಟಿಸದಿದ್ದರೆ ಬಿಜೆಪಿ ವಿರುದ್ಧ ಹೋರಾಟ ಆರಂಭಿಸುತ್ತೇವೆ’ ಎಂದರು.

ಬಿಜೆಪಿಯ ಇತಿಹಾಸದಲ್ಲೇ ವಾಲ್ಮೀಕಿ ಸಮುದಾಯದ ಒಬ್ಬರನ್ನು ರಾಜ್ಯಸಭಾ ಸದಸ್ಯರನ್ನಾಗಿ ಮಾಡಿದ ಉದಾಹರಣೆ ಇಲ್ಲ. ಈ ಹಿಂದೆ ಪಕ್ಷ ಶ್ರೀರಾಮುಲು ಅವರಿಗೆ ಅನ್ಯಾಯ ಮಾಡಿದೆ. ಅದಕ್ಕೆ ಪರಿಹಾರವಾಗಿ ರಾಜ್ಯಸಭಾ ಸದಸ್ಯರನ್ನಾಗಿ ಆಯ್ಕೆ ಮಾಡಿ, ಸಂಪುಟದಲ್ಲಿ ಸ್ಥಾನ ನೀಡಬೇಕು’ ಎಂದರು.

ವಾಲ್ಮೀಕಿ ಯುವಬ್ರಿಗೇಡ್ ಸದಸ್ಯ ಶಿವನಾಯಕ, ಜೈಭೀಮ್ ಅಖಿಲ ಭಾರತ ದಲಿತ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎಂ.ಎಂ. ರಾಜು, ಶ್ರೀರಾಮುಲು ಅಭಿಮಾನಿ ಬಳಗದ ಮುಖಂಡರಾದ ನವೀನ್ ಮದಕರಿ, ಪ್ರದೀಪ್ ಮನಮೋಹನ್, ಸಮತಾ ಸೈನಿಕ ದಳದ ಅಧ್ಯಕ್ಷ ಎಂ. ವೆಂಕಟಸ್ವಾಮಿ, ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ಮುನಿಸ್ವಾಮಿ, ಪ್ರಗತಿಪರ ಮುಖಂಡರಾದ ಹರಿರಾಮ್ ಪತ್ರಿಕಾಗೋಷ್ಠಿಯದಲ್ಲಿದ್ದರು.

ಭಿನ್ನಾಭಿಪ್ರಾಯ ಗೌರವಿಸಿ: ಭಾಗವತ್

ಒಂದನೇ ಪುಟದಿಂದ...

‘ಯಾರನ್ನೂ ಹತ್ತಿಕ್ಕಬಾರದು ಮತ್ತು ಎಲ್ಲರಿಗೂ ಬೆಳೆಯಲು ಅವಕಾಶ ದೊರೆಯಬೇಕು’ ಎಂದು ಪ್ರತಿಪಾದಿಸಿದ ಅವರು, ‘ಸಾಮರಸ್ಯದಿಂದ ಬದುಕಲು ಒಗ್ಗಟ್ಟು ಮುಖ್ಯ’ ಎಂದರು.

‘ವೈವಿಧ್ಯದ ಕಾರಣದಿಂದಾಗಿ ಬೇರೆ ದೇಶಗಳಲ್ಲಿ ಘರ್ಷಣೆಗಳು ನಡೆಯುತ್ತಿವೆ. ಆದರೆ, ನಮ್ಮಲ್ಲಿ ವೈವಿಧ್ಯವು ಸಹಜವಾಗಿಯೇ ರೂಪುಗೊಂಡಿದೆ. ಎಷ್ಟೇ ವೈವಿಧ್ಯವಿದ್ದರೂ ಪರಸ್ಪರರ ಜೊತೆ ಚೆನ್ನಾಗಿರಬೇಕು’ ಎಂದು ಹೇಳಿದರು.

‘ತ್ರಿವರ್ಣ ಧ್ವಜದಲ್ಲಿನ ಧಮ್ಮಚಕ್ರ ಸಂಕೇತವಷ್ಟೇ ಅಲ್ಲ. ನಮ್ಮ ದೈನಂದಿನ ಜೀವನದಲ್ಲಿ ಪಾಲಿಸಬೇಕಾದ ಸಂದೇಶ ಅದು. ಇದು, ಅಂಬೇಡ್ಕರ್ ಅವರು ವ್ಯಾಖ್ಯಾನಿಸಿರುವಂತೆ ಪರಸ್ಪರ ಗೌರವ, ಸಹಕಾರದ ಮೌಲ್ಯಗಳನ್ನು ಒಳಗೊಂಡಿದೆ. ದೇಶದ ಪ್ರಗತಿ ಮತ್ತು ನಮ್ಮ ಜವಾಬ್ದಾರಿಯನ್ನುನೆನಪಿಸುತ್ತದೆ’ ಎಂದರು.

‘ಅಭಿವೃದ್ಧಿ ಕುಂಠಿತವೆಂಬ ಭವಿಷ್ಯ ಸುಳ್ಳು’

ಒಂದನೇ ಪುಟದಿಂದ...

ಗೃಹಜ್ಯೋತಿ ಯೋಜನೆಯಡಿ 1.62 ಕೋಟಿ ಗ್ರಾಹಕರು ಪ್ರಯೋಜನ ಪಡೆಯುತ್ತಿದ್ದಾರೆ. ವಿದ್ಯುತ್ ಸರಬರಾಜು ಕಂಪನಿಗಳಿಗೆ ₹13,409 ಕೋಟಿ ಸಹಾಯಧನದ ಮೊತ್ತ ನೀಡಲಾಗಿದೆ. ಶಕ್ತಿ ಯೋಜನೆಯಡಿ ಮಹಿಳೆಯರ ಉಚಿತ ಪ್ರಯಾಣಕ್ಕಾಗಿ ₹9,051 ಕೋಟಿ ವಿನಿಯೋಗಿಸಲಾಗಿದೆ. ಯುವನಿಧಿ ಯೋಜನೆಯಡಿ 2,18,214 ಜನ ನೋಂದಣಿ ಮಾಡಿಕೊಂಡಿದ್ದು, ಈವರೆಗೆ 1,24,176 ಮಂದಿಗೆ ನೇರ ನಗದು ವರ್ಗಾವಣೆ ಮಾಡಲಾಗಿದೆ. ಜನರ ಹಸಿವು ನೀಗಿಸುವ ಅನ್ನಭಾಗ್ಯ ಯೋಜನೆಯಡಿ 4.48 ಕೋಟಿ ಫಲಾನುಭವಿಗಳಿಗೆ ₹9,775 ಕೋಟಿ ವರ್ಗಾವಣೆ ಮಾಡಲಾಗಿದೆ ಎಂದು ವಿವರ ನೀಡಿದರು.



ರಾಜ್ಯ ಸರ್ಕಾರವು ಹಣಕಾಸು ವ್ಯವಸ್ಥೆಯನ್ನು ಉತ್ತಮವಾಗಿ ನಿರ್ವಹಿಸುತ್ತಿದ್ದು, ವರಮಾನ ಸಂಗ್ರಹದಲ್ಲಿ ಶೇಕಡ 13ರಷ್ಟು ಪ್ರಗತಿ ಸಾಧಿಸಿದೆ. ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸಂಗ್ರಹದಲ್ಲಿ ದೇಶದಲ್ಲಿಯೇ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಪ್ರಾಥಮಿಕ ಹಾಗೂ ಉನ್ನತ ಶಿಕ್ಷಣ ಬಲಪಡಿಸಲು ಹೊಸ ಶಿಕ್ಷಣ ನೀತಿ ಜಾರಿಗೊಳಿಸಲಾಗುತ್ತಿದೆ. ರಾಜ್ಯದ ಸಮತೋಲಿತ, ಸಮಗ್ರ ಅಭಿವೃದ್ಧಿಗಾಗಿ ನಂಜುಂಡಪ್ಪ ವರದಿ ಅನುಷ್ಠಾನ ಮಾಡಲಾಗಿದೆ. ಉದ್ದೇಶಿತ ಗುರಿಗಳ ಸಾಧನೆ ಮಾಡಲಾಗಿದೆಯೇ ಎಂಬುದನ್ನು ಅರಿಯಲು ಗೋವಿಂದರಾವ್ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ ಎಂದರು.

ನಮ್ಮ ಮೆಟ್ರೊ 2ಎ ಹಂತದ ಕಾಮಗಾರಿಗಳು ನಡೆಯುತ್ತಿವೆ. ಹಂತ 3ರಲ್ಲಿ 76 ಕಿ.ಮೀ.ಉದ್ದದ ಕಾಮಗಾರಿಯನ್ನು ₹15,611 ಕೋಟಿ ರೂ.ವೆಚ್ಚದಲ್ಲಿ ಕೈಗೊಳ್ಳಲಾಗಿದೆ. ದೇಶದಲ್ಲಿಯೇ ಮೊದಲ ಬಾರಿಗೆ ಕೆಎಸ್‌ಆರ್‌ಟಿಸಿ ನೌಕರರಿಗೆ ₹1 ಕೋಟಿ ಮೌಲ್ಯದ ಅಪಘಾತ ವಿಮಾ ಯೋಜನೆ ಸೌಲಭ್ಯ ಒದಗಿಸಲಾಗಿದೆ. ರೈತರ ಆದಾಯ ಹೆಚ್ಚಿಸಲು ಇಂಗಾಲ ಹೀರಿಕೊಳ್ಳುವ ತೋಟಗಾರಿಕೆ ಬೆಳೆಗಳನ್ನು ಗುರುತಿಸುವ ‘ಕಾರ್ಬನ್ ಕ್ರೆಡಿಟ್ ಫ್ರೇಮ್‌ವರ್ಕ್’ (ಸಿಸಿಎಫ್) ಎಂಬ ಹೊಸ ಕಾರ್ಯಕ್ರಮ ಪರಿಚಯಿಸಲಾಗಿದೆ. 9 ಲಕ್ಷ ಹಾಲು ಉತ್ಪಾದಕರಿಗೆ ₹1,124 ಕೋಟಿ ಪ್ರೋತ್ಸಾಹ ಧನ ನೀಡಲಾಗಿದೆ ಎಂದು ಹೇಳಿದರು.

ಸೈಬರ್ ಕ್ರೈಂ ಬಗ್ಗೆ ಕಳವಳ: ಒಟ್ಟು ಅಪರಾಧಗಳಲ್ಲಿ ಸೈಬರ್ ಅಪರಾಧದ ಪ್ರಮಾಣ ಶೇ 10ರಷ್ಟಿದೆ. ಇದು ಆಘಾತಕಾರಿ ಎಂದು ರಾಜ್ಯಪಾಲರು ಕಳವಳ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್ ಉಪಸ್ಥಿತರಿದ್ದರು.



ಬೆಂಗಳೂರಿನ ಫೀಲ್ಡ್ ಮಾರ್ಷಲ್ ಮಾಣೆಕ್‌ಷಾ ಪರೇಡ್ ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ತೆರೆದ ಜೀಪಿನಲ್ಲಿ ಸಂಚರಿಸಿ ಪರೇಡ್ ಪರಿವೀಕ್ಷಣೆ ನಡೆಸಿದರು — ಪ್ರಜಾವಾಣಿ ಚಿತ್ರ

‘ನಿಧಿ’ ಇನ್ನೂ ಶೇ 41ರಷ್ಟು ಬಿಡುಗಡೆಗೆ ಬಾಕಿ

ಒಂದನೇ ಪುಟದಿಂದ...

ಕಂದಾಯ, ಇಂಧನ, ಸಾರಿಗೆ ಸೇರಿದಂತೆ ಒಟ್ಟು 14 ಇಲಾಖೆಗಳು ಶೇ 50ಕ್ಕಿಂತ ಹೆಚ್ಚು ಪ್ರಗತಿ ತೋರಿಸಿದರೆ, ತೋಟಗಾರಿಕೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವೈದ್ಯಕೀಯ ಶಿಕ್ಷಣ ಸೇರಿದಂತೆ 11 ಇಲಾಖೆಗಳು ಶೇ 35ರಿಂದ ಶೇ 50ರ ನಡುವೆ ವೆಚ್ಚ ಮಾಡಿವೆ. ಲೋಕೋಪಯೋಗಿ, ಐಟಿಬಿಟಿ, ರೇಷ್ಮೆ, ಕೌಶಲ ಅಭಿವೃದ್ಧಿ ಸೇರಿ ಒಂಬತ್ತು ಇಲಾಖೆಗಳು ಹಂಚಿಕೆಯಾದ ಮೊತ್ತದಲ್ಲಿ ಶೇ 35ಕ್ಕಿಂತಲೂ ಕಡಿಮೆ ವೆಚ್ಚ ಮಾಡಿವೆ.



ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಪಂಚ ಗ್ಯಾರಂಟಿ ಯೋಜನೆಗಳ ಪೈಕಿ ‘ಗೃಹ ಲಕ್ಷ್ಮಿ’ ಯೋಜನೆಗೆ ಒಟ್ಟು 30,60,321 (ಎಸ್‌ಸಿ-21,96,321, ಎಸ್‌ಟಿ 8.64 ಲಕ್ಷ) ಫಲಾನುಭವಿಗಳನ್ನು ಪರಿಗಣಿಸಿ, ಈ ಯೋಜನೆಗಾಗಿ ಮಹಿಳಾ ಮತ್ತು ಕಲ್ಯಾಣ ಇಲಾಖೆಗೆ ₹7,881.91 ಕೋಟಿ ಅನುದಾನ ಒದಗಿಸಲಾಗಿದೆ. ಆದರೆ, ಈ ವರ್ಷ ₹7,344.77 ಕೋಟಿ ಮಾತ್ರ ಅಗತ್ಯವಿದ್ದು, ₹537.14 ಕೋಟಿ ಉಳಿಕೆ ಆಗಬಹುದು ಎಂದು ಅಂದಾಜಿಸಲಾಗಿದೆ.

‘ಗೃಹ ಜ್ಯೋತಿ’ ಯೋಜನೆ ಜಾರಿಗಾಗಿ ಇಂಧನ ಇಲಾಖೆಗೆ ಪ್ರಸಕ್ತ ಸಾಲಿನಲ್ಲಿ ₹2,585.93 ಕೋಟಿ ಹಂಚಿಕೆ ಮಾಡಲಾಗಿದೆ, ಅದರಲ್ಲಿ ₹2016.16 ಕೋಟಿಯನ್ನು ಈಗಾಗಲೇ ಬಿಡುಗಡೆ ಮಾಡಲಾಗಿದ್ದು, ₹1,948.16 ಕೋಟಿ ವೆಚ್ಚವೂ ಆಗಿದೆ ಎಂಬ ಮಾಹಿತಿಯನ್ನು ಸಮಾಜ ಕಲ್ಯಾಣ ಇಲಾಖೆಯು ಸಭೆಗೆ ನೀಡಿದೆ.

‘ಶಕ್ತಿ’ ಯೋಜನೆಯಡಿ ಎಸ್‌ಸಿ, ಎಸ್‌ಟಿ ಫಲಾನುಭವಿಗಳ ನಿಖರ ಅಂಕಿಅಂಶ ನೀಡಲು ಸಾಧ್ಯ ಇಲ್ಲವೆಂದು ಸಾರಿಗೆ ಇಲಾಖೆ ಈಗಾಗಲೇ ತಿಳಿಸಿದೆ. ಪ್ರಸಕ್ತ ಸಾಲಿನಲ್ಲಿ ‘ಶಕ್ತಿ’ಗಾಗಿ ಹಂಚಿಕೆ ಮಾಡಿರುವ ₹1,451.45 ಕೋಟಿಯಲ್ಲಿ ₹1,209.54 ಕೋಟಿ ಬಿಡುಗಡೆ ಮಾಡಲಾಗಿದೆ. ಅದರಲ್ಲಿ ಈವರೆಗೆ ₹1,102.97 ಕೋಟಿ ವೆಚ್ಚವಾಗಿದೆ. ಎಸ್‌ಸಿ, ಎಸ್‌ಟಿ ಫಲಾನುಭವಿಗಳ ಅಂಕಿ–ಅಂಶ ಸಿಗದೇ ಇರುವುದರಿಂದ ಮುಂಬರುವ ಸಾಲಿನಲ್ಲಿ (2025–26) ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನ ಹಂಚಿಕೆಯನ್ನು ಶೇ 24.10 ಮಿತಿಗೆ ಸೀಮಿತಗೊಳಿಸಲು ಪ್ರಸ್ತಾಪಿಸಲಾಗಿದೆ.

ಅನ್ನಭಾಗ್ಯ ಯೋಜನೆ ಅನುಷ್ಠಾನಕ್ಕೆ ಆಹಾರ ಇಲಾಖೆಗೆ ಬಜೆಟ್‌ನಲ್ಲಿ ₹2,635.74 ಕೋಟಿ ಹಂಚಿಕೆ ಮಾಡಲಾಗಿತ್ತು. ಬಳಿಕ ಅದನ್ನು ₹448.15 ಕೋಟಿ ಕಡಿತಗೊಳಿಸಿ, ಪರಿಷ್ಕೃತ ಆಯವ್ಯಯದಲ್ಲಿ ನೇರ ನಗದು ವರ್ಗಾವಣೆಗೆ (ಡಿಬಿಟಿ) ₹2,187.59 ಕೋಟಿ ಒದಗಿಸಲಾಗಿದೆ. ಈ ಮೊತ್ತದಲ್ಲಿ ₹1,276.09 ಬಿಡುಗಡೆ ಮಾಡಲಾಗಿದೆ. ಈವರೆಗೆ 800.62 ಕೋಟಿಯನ್ನು ಫಲಾನುಭವಿಗಳ ಖಾತೆಗೆ ಡಿಬಿಟಿ ಮಾಡಲಾಗಿದೆ.

‘ಯುವನಿಧಿ’ ಗ್ಯಾರಂಟಿ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ 53,625 ಫಲಾನುಭವಿಗಳಿಗೆ ಸೌಲಭ್ಯ ಒದಗಿಸಲಾಗುವುದು ಎಂದು ಕೌಶಲಾಭಿವೃದ್ಧಿ ಇಲಾಖೆ ತಿಳಿಸಿತ್ತು. ಆದರೆ, ಸೇವಾ ಸಿಂಧು ಪೋರ್ಟಲ್‌ನಲ್ಲಿ ನೋಂದಾಯಿತ ಫಲಾನುಭವಿಗಳ ಸಂಖ್ಯೆ 38,483 (ಡಿಪ್ಲೊಮಾ 411, ಪದವೀಧರರು–38,072) ಮಾತ್ರ. ಪ್ರಸಕ್ತ ಸಾಲಿನಲ್ಲಿ ಈ ಯೋಜನೆಗೆ ₹175.50 ಕೋಟಿ ಅನುದಾನ ಒದಗಿಸಲಾಗಿದ್ದು, ಫಲಾನುಭವಿಗಳ ಸಂಖ್ಯೆಯನ್ನು ಪರಿಗಣಿಸಿದಾಗ ₹137.80 ಕೋಟಿ ಅನುದಾನ ಮಾತ್ರ ಅಗತ್ಯವಿದೆ. ₹37.70 ಕೋಟಿ ಉಳಿಕೆ ಆಗಲಿದೆ ಎಂದೂ ಸಭೆಗೆ ಮಾಹಿತಿ ನೀಡಲಾಗಿದೆ.

₹45,790 ಕೋಟಿ ಹಂಚಿಕೆಗೆ ಪ್ರಸ್ತಾವ

‘ಎಸ್‌ಸಿಎಸ್‌ಪಿ ಟಿಎಸ್‌ಪಿ ಕಾಯ್ದೆ 2013’ರ ಅಡಿ ಒದಗಿಸುವ ಅನುದಾನವನ್ನು ಎಸ್‌ಸಿ, ಎಸ್‌ಟಿಗೆ ನೇರವಾಗಿ ಪ್ರಯೋಜನ ಆಗುವ ಕಾರ್ಯಕ್ರಮಗಳಿಗೆ ಮಾತ್ರ ಹಂಚಿಕೆ ಮಾಡಬೇಕಿದೆ. ಅದರಂತೆ, ಫಲಾನುಭವಿಗಳ ಸಂಖ್ಯೆಗೆ ಅನುಗುಣವಾಗಿ ಎಲ್ಲ ಇಲಾಖೆಗಳು ಎಲ್ಲ ಯೋಜನೆಗಳಿಗೆ ಅನುದಾನ ಹಂಚಿಕೆ ಮಾಡಲು ಕರಡು ಎಸ್‌ಸಿಎಸ್‌ಪಿ, ಟಿಎಸ್‌ಪಿ ಆಯವ್ಯಯ ಸಿದ್ಧಪಡಿಸಬೇಕಿದೆ. 2024–25ನೇ ಸಾಲಿನ ಬಜೆಟ್‌ನಲ್ಲಿ ಒಟ್ಟು ₹1.60 ಲಕ್ಷ ಕೋಟಿಯನ್ನು ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹಂಚಿಕೆ ಮಾಡಲಾಗಿತ್ತು. ಆ ಮೊತ್ತದಲ್ಲಿ ಶೇ 24.10ರಷ್ಟನ್ನು ಪರಿಶಿಷ್ಟರ ಕಲ್ಯಾಣ ಯೋಜನೆಗಳಿಗೆ ಒದಗಿಸಲಾಗಿದೆ. ಮುಂಬರುವ ಬಜೆಟ್‌ನಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ₹1.90 ಲಕ್ಷ ಕೋಟಿ ಅಂದಾಜಿಸಲಾಗಿದ್ದು, ಅದರಲ್ಲಿ ಶೇ 24.10ರಂತೆ, ಎಸ್‌ಸಿಎಸ್‌ಪಿ ₹32,585 ಕೋಟಿ ಮತ್ತು ಟಿಎಸ್‌ಪಿ ₹13,205 ಕೋಟಿ ಸೇರಿ ಒಟ್ಟು ₹45,790 ಕೋಟಿ ಹಂಚಿಕೆ ಮಾಡುವಂತೆ ಆರ್ಥಿಕ ಇಲಾಖೆಗೆ ಪ್ರಸ್ತಾಪ ಮಂಡಿಸಲು ನೋಡಲ್ ಏಜೆನ್ಸಿಗಳ ಸಭೆಯು ಶಿಫಾರಸು ಮಾಡಿದೆ.

‘ಒಕ್ಕೂಟ ವ್ಯವಸ್ಥೆಗೆ ಚ್ಯುತಿಯಾದಾಗ ಧ್ವನಿ ಎತ್ತಿದೆ’

‘ಸರ್ವರನ್ನು ಒಳಗೊಳ್ಳುವ, ಸರ್ವರ ಪಾಲ್ಗೊಳ್ಳುವಿಕೆಯ ಮೂಲಕ ದೇಶವನ್ನು ಬೆಳೆಸುವ ಸಂವಿಧಾನವನ್ನು ಡಾ. ಬಿ.ಆರ್. ಅಂಬೇಡ್ಕರ್ ನೇತೃತ್ವದಲ್ಲಿ ರಚಿಸಿ ಸಮರ್ಪಿಸಲಾಗಿದೆ. ಸಂವಿಧಾನದ ಮೊದಲ ಪರಿಚ್ಛೇದದಲ್ಲಿಯೇ ಭಾರತವು ರಾಜ್ಯಗಳ ಒಕ್ಕೂಟ ಎಂದು ಘೋಷಿಸಲಾಗಿದೆ. ಒಕ್ಕೂಟ ಧರ್ಮಕ್ಕೆ ಚ್ಯುತಿ ಉಂಟಾದಾಗ ತನ್ನ ಸಾಂವಿಧಾನಿಕ ಹಕ್ಕುಗಳಿಗಾಗಿ ಕರ್ನಾಟಕ ಧ್ವನಿ ಎತ್ತಿದೆ’ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ತಿಳಿಸಿದರು.

ಒಕ್ಕೂಟ ವ್ಯವಸ್ಥೆ ಮತ್ತು ಸಂವಿಧಾನದ ಆಶಯಗಳ ಕುರಿತು ಭಾಷಣದ ಆರಂಭದಲ್ಲೇ ಪ್ರಸ್ತಾಪಿಸಿದ ಅವರು, ‘ಸಂವಿಧಾನವು ಸಾರ್ವಭೌಮ ಅಧಿಕಾರವನ್ನು ಕೇಂದ್ರ ಮತ್ತು ರಾಜ್ಯಗಳ ನಡುವೆ ಹಂಚಿದೆ. ದೇಶದ ಏಕತೆ ಮತ್ತು ಅಖಂಡತೆಯನ್ನು ಸಂರಕ್ಷಿಸಲು ಒಕ್ಕೂಟ ಸರ್ಕಾರಕ್ಕೆ ಹೆಚ್ಚಿನ ಅಧಿಕಾರ ನೀಡಿದೆ. ರಾಜ್ಯಗಳ ಆಡಳಿತಾತ್ಮಕ ಅಧಿಕಾರ ವ್ಯಾಪ್ತಿಯನ್ನು ಕೂಡ ಗುರುತಿಸಿದೆ. ಈ ಮೂಲಕ ದೇಶದ ವೈವಿಧ್ಯಮಯ ಆಡಳಿತ ವ್ಯವಸ್ಥೆಯನ್ನು ಎತ್ತಿ ಹಿಡಿದಿದೆ’ ಎಂದರು.

‘ಸಂವಿಧಾನದ ಮೂಲಕ ದೇಶ ಸಾಧಿಸಿರುವ ಪ್ರಗತಿಯನ್ನು ಗೌರವಿಸೋಣ. ಸಂವಿಧಾನವನ್ನು ನಾವು ರಕ್ಷಿಸಿದರೆ ನಮ್ಮನ್ನು ಸಂವಿಧಾನ ರಕ್ಷಿಸುತ್ತದೆ ಎಂಬ ಅರಿವನ್ನು ಜನರಲ್ಲಿ ಮೂಡಿಸೋಣ’ ಎಂದು ಹೇಳಿದರು.

ಪ್ರಶಸ್ತಿ ಉಳಿಸಿಕೊಂಡ ಸಿನ್ನರ್

ಇಟಲಿ ಆಟಗಾರನಿಗೆ ಮೂರನೇ ಗ್ರ್ಯಾನ್‌ಸ್ಲಾಮ್ ಕಿರೀಟ: ಜ್ವರೇವ್‌ಗೆ ನಿರಾಸೆ

ಮೆಲ್ಬರ್ನ್ (ಎಎಫ್‌ಪಿ): ವಿಶ್ವದ ಅಗ್ರಮಾನ್ಯ ಆಟಗಾರ ಇಟಲಿಯ ಯಾನಿಕ್ ಸಿನ್ನರ್ ಅವರು ಭಾನುವಾರ ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ ಜರ್ಮನಿಯ ಅಲೆಕ್ಸಾಂಡರ್ ಜ್ವರೇವ್ ವಿರುದ್ಧ ನೇರ ಸೆಟ್‌ಗಳಿಂದ ಜಯಗಳಿಸಿ, ಚಾಂಪಿಯನ್ ಪಟ್ಟವನ್ನು ಉಳಿಸಿಕೊಂಡರು.

ರಾಡ್ ಲೇವರ್ ಅರೇನಾದಲ್ಲಿ ನಡೆದ ಹಣಾಹಣಿಯಲ್ಲಿ ಅಗ್ರ ಶ್ರೇಯಾಂಕದ ಸಿನ್ನರ್ 6-3, 7-6 (7/4), 6-3ರಿಂದ ಎರಡನೇ ಶ್ರೇಯಾಂಕದ ಜ್ವರೇವ್ ಅವರನ್ನು ಮಣಿಸಿ, ಸತತ ಎರಡನೇ ಬಾರಿ ಪ್ರಶಸ್ತಿ ಗೆದ್ದರು. ಚೊಚ್ಚಲ ಕಿರೀಟದ ನಿರೀಕ್ಷೆಯಲ್ಲಿದ್ದ 27 ವರ್ಷ ವಯಸ್ಸಿನ ಜರ್ಮನಿಯ ಆಟಗಾರನಿಗೆ ಮತ್ತೆ ನಿರಾಸೆಯಾಯಿತು.

ಅಮೆರಿಕ ಓಪನ್ ಹಾಲಿ ಚಾಂಪಿಯನ್ 23 ವರ್ಷ ವಯಸ್ಸಿನ ಸಿನ್ನರ್ ಈ ಗೆಲುವಿನ ಮೂಲಕ ಗ್ರ್ಯಾನ್‌ಸ್ಲಾಮ್ ಕಿರೀಟವನ್ನು ಮೂರಕ್ಕೆ ಹೆಚ್ಚಿಸಿಕೊಂಡರು. ಈ ಸಾಧನೆ ಮಾಡಿದ ಇಟಲಿಯ ಮೊದಲ ಟೆನಿಸ್‌ಪಟು ಎಂಬ ಹಿರಿಮೆಗೂ ಪಾತ್ರವಾದರು. ಈ ಮೊದಲು ಇಟಲಿಯ ನಿಕೋಲಾ ಪಿಯೆಟ್ರಾಂಜೆಲಿ (1959, 1960ರ ಫ್ರೆಂಚ್ ಓಪನ್) ಎರಡು ಪ್ರಶಸ್ತಿ ಗೆದ್ದಿದ್ದರು.

ಸಿನ್ನರ್ ಅವರು ಮೆಲ್ಬರ್ನ್ ಪಾರ್ಕ್‌ನಲ್ಲಿ ಪ್ರಶಸ್ತಿಯನ್ನು ಉಳಿಸಿಕೊಂಡ ಈ ಶತಮಾನದ ನಾಲ್ಕನೇ ಆಟಗಾರ ಎನಿಸಿಕೊಂಡರು. ಈ ಮೊದಲು ಅಮೆರಿಕದ ಆ್ಯಂಡ್ರೆ ಅಗಾಸಿ, ಸ್ವಿಟ್ಜರ್ಲೆಂಡ್‌ನ ರೋಜರ್ ಫೆಡರರ್ ಮತ್ತು ಸರ್ಬಿಯಾದ ನೊವಾಕ್ ಜೊಕೊವಿಚ್ ಅವರು ಸತತ ಎರಡು ಬಾರಿ ಪ್ರಶಸ್ತಿ ಗೆದ್ದಿದ್ದರು.



ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಮೂರನೇ ಬಾರಿ ಫೈನಲ್ ತಲುಪಿದ್ದ ಜರ್ಮನಿಯ ಆಟಗಾರನಿಗೆ ಈ ಬಾರಿಯೂ ಪ್ರಶಸ್ತಿ ಗಗನಕುಸುಮವಾಯಿತು. ಅವರು ಸೆಮಿಫೈನಲ್‌ನಲ್ಲಿ ಹತ್ತು ಬಾರಿಯ ಚಾಂಪಿಯನ್ ಜೊಕೊವಿಚ್ ಅವರನ್ನು ಎದುರಿಸಿದ್ದರು. ಮೊದಲ ಸೆಟ್ ಅನ್ನು ಟೈಬ್ರೇಕರ್‌ನಲ್ಲಿ ಕಳೆದುಕೊಂಡ ಜೊಕೊವಿಚ್, ಗಾಯದ ಕಾರಣದಿಂದ ಸ್ಪರ್ಧೆಯಿಂದ ಹಿಂದೆ ಸರಿದರು. ಹೀಗಾಗಿ, ಜ್ವರೇವ್ ಮೊದಲ ಬಾರಿ ಇಲ್ಲಿ ಪ್ರಶಸ್ತಿ ಸುತ್ತು ತಲುಪಿದ್ದರು.

'ನೀವು ನಿಜಕ್ಕೂ ಅದ್ಭುತ ಆಟಗಾರ. ಇಂದಿನ ದಿನ ನಿಮಗೆ ಕಹಿಯಾಗಿರಬಹುದು. ಎಂದಿಗೂ ಆತ್ಮವಿಶ್ವಾಸವನ್ನು ಕಳೆದುಕೊಳ್ಳಬೇಡಿ. ನಿಮ್ಮ ಆಟವನ್ನು ಮುಂದುವರಿಸಿ. ಕಠಿಣ ಪರಿಶ್ರಮಕ್ಕೆ ಪ್ರತಿಫಲ ಸಿಗಲಿದೆ' ಎಂದು ಜ್ವರೇವ್ ಅವರನ್ನು ಉದ್ದೇಶಿಸಿ ಯಾನಿಕ್ ಸಿನ್ನರ್ ಹೇಳಿದರು.

ಉದ್ದೀಪನ ಮದ್ದುಸೇವನೆ ಪ್ರಕರಣದಲ್ಲಿ ಸಿಲುಕಿಕೊಂಡಿರುವ ಸಿನ್ನರ್, ಆ ಒತ್ತಡದ ಮಧ್ಯೆಯೂ ಟೂರ್ನಿಯಲ್ಲಿ ಗೆಲುವಿನ ನಾಗಾಲೋಟ ಮುಂದುವರಿಸಿದರು. ಹೋದ ವರ್ಷದ ಮಾರ್ಚ್‌ನಲ್ಲಿ ಸಿನ್ನರ್ ಅವರು ನಿಷೇಧಿತ ಮದ್ದು ಕ್ಲೊಸ್ಟೆಬಾಲ್ ಸೇವನೆ ಮಾಡಿದ್ದು ದೃಢಪಟ್ಟಿತ್ತು.

ಇಂಟರ್‌ನ್ಯಾಷನಲ್ ಟೆನಿಸ್ ಇಂಟೆಗ್ರಿಟಿ ಏಜನ್ಸಿ (ಐಟಿಐಎ)ಯು ಸಿನ್ನರ್ ಅವರನ್ನು ದೋಷಮುಕ್ತಗೊಳಿಸಿದ ನಂತರ ಇದನ್ನು ಪ್ರಶ್ನಿಸಿ ವಿಶ್ವ ಉದ್ದೀಪನ ಮದ್ದು ಸೇವನೆ ನಿಗ್ರಹ ಘಟಕವು ಕ್ರೀಡಾ ಮಧ್ಯಸ್ಥಿಕೆ ನ್ಯಾಯಾಲಯಕ್ಕೆ (ಕೋರ್ಟ್ ಆಫ್ ಆರ್ಬಿಟ್ರೇಷನ್ ಫಾರ್ ಸ್ಪೋರ್ಟ್ಸ್) ಮನವಿ ಸಲ್ಲಿಸಿತ್ತು. ಏಪ್ರಿಲ್‌ನಲ್ಲಿ ಪ್ರಕರಣದ ವಿಚಾರಣೆಯನ್ನು ಸಿಎಎಸ್ ನಡೆಸಲಿದೆ.



ಪುರುಷರ ಸಿಂಗಲ್ಸ್ ಪ್ರಶಸ್ತಿಯೊಂದಿಗೆ ಇಟಲಿಯ ಯಾನಿಕ್ ಸಿನ್ನರ್ –ಎಪಿ/ಪಿಟಿಐ ಚಿತ್ರ

ಕಳೆದ ವರ್ಷ ಫೈನಲ್‌ನ ಐದು ಸೆಟ್‌ಗಳ ರೋಚಕ ಹಣಾಹಣಿಯಲ್ಲಿ ರಷ್ಯಾದ ಡೇನಿಯಲ್ ಮೆಡ್ವೆಡೇವ್ ಅವರನ್ನು ಸಿನ್ನರ್ ಮಣಿಸಿ ಚೊಚ್ಚಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದಿದ್ದರು. ವೃತ್ತಿಜೀವನದ 19ನೇ ಪ್ರಶಸ್ತಿಗೆ ಮುತ್ತಿಕ್ಕಿದ ಅವರು, ಅಜೇಯ ಓಟವನ್ನು 21 ಪಂದ್ಯಗಳಿಗೆ ವಿಸ್ತರಿಸಿಕೊಂಡರು.

'ಸಿನ್ನರ್ ವಿಶ್ವದ ಅತ್ಯುತ್ತಮ ಆಟಗಾರ. ಈ ಪ್ರಶಸ್ತಿಗೆ ಅವರು ನಿಜವಾಗಲೂ ಅರ್ಹರು' ಎಂದು ರನ್ನರ್ ಅಪ್ ಜ್ವರೇವ್ ಹೇಳಿದರು.

ಪಂದ್ಯದ ಆರಂಭದಲ್ಲೇ ಹಿಡಿತ ಸಾಧಿಸಿದ ಸಿನ್ನರ್‌ಗೆ ಮೊದಲ ಸೆಟ್‌ನಲ್ಲಿ ಜ್ವರೇವ್ ಅವರಿಂದ ಹೆಚ್ಚಿನ ಪ್ರತಿರೋಧ ಎದುರಾಗಲಿಲ್ಲ. 46ನೇ ನಿಮಿಷದಲ್ಲಿ ಮೊದಲ ಸೆಟ್ ಗೆದ್ದ ಇಟಲಿಯ ಆಟಗಾರನಿಗೆ ಎರಡನೇ ಸೆಟ್‌ನಲ್ಲಿ ಪ್ರಬಲ ಪೈಪೋಟಿ ಎದುರಾಯಿತು. ರೋಚಕ ಘಟ್ಟ ತಲುಪಿದ ಎರಡನೇ ಸೆಟ್ ಅನ್ನು ಟೈಬ್ರೇಕರ್‌ನಲ್ಲಿ ಸಿನ್ನರ್ ಗೆದ್ದರು. ಕೊನೆಯ ಸೆಟ್‌ನಲ್ಲೂ ಅವರು ನಿರಾಯಾಸವಾಗಿ ಮೇಲುಗೈ ಸಾಧಿಸಿದರು.

ಎಚ್‌ಎಸ್‌ಪಿಎಲ್ ಬೆಂಗಳೂರು ಡರ್ಬಿ: ಎರಡನೇ ಸ್ಥಾನ ಪಡೆದ ರೀಡಿಫೈನ್ಡ್

ರಾಂಕ್ವೆಲಿನೊಗೆ ಭರ್ಜರಿ ಜಯ

• ಡಿ. ರವಿಕುಮಾರ್

ಬೆಂಗಳೂರು: ಭಾನುವಾರ ಸಂಜೆ ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಸೇರಿದ್ದ ಅಪಾರ ಜನಸ್ತೋಮದ ಮುಂದೆ ರಾಂಕ್ವೆಲಿನೊ ಅಶ್ವವು ಎಚ್‌ಎಸ್‌ಪಿಎಲ್ ಬೆಂಗಳೂರು ಡರ್ಬಿ ರೇಸ್‌ನಲ್ಲಿ ಭರ್ಜರಿ ಜಯ ಸಾಧಿಸಿತು.

ಡೇರಿಯಸ್ ಬೈರಾಮ್ಜಿ ಅವರ ತರಬೇತಿನಲ್ಲಿ ಪಳಗಿರುವ ರಾಂಕ್ವೆಲಿನೊ ಬೆಂಗಳೂರು ಚಳಿಗಾಲದ ಪ್ರತಿಷ್ಠಿತ ರೇಸ್‌ನಲ್ಲಿ ಎರಡನೇ ಫೇವರಿಟ್ ಆಗಿತ್ತು. ಜಾಕಿ ಎ.ಸಂದೇಶ್ ಅವರು ತೋರಿದ ಚಾಕಚಕ್ಯತೆಯಿಂದಾಗಿ ರಾಂಕ್ವೆಲಿನೊ ವಿಜಯದ ಗೆರೆಯನ್ನು ದಾಟಿದ ಮೊದಲ ಅಶ್ವವಾಯಿತು.

2400 ಮೀಟರ್ಸ್ ಅಂತರದ ಡರ್ಬಿ ರೇಸ್ ಕ್ರಮಿಸಲು ರಾಂಕ್ವೆಲಿನೊ 2 ನಿಮಿಷ 29.87 ಸೆಕೆಂಡುಗಳನ್ನು ತೆಗೆದುಕೊಂಡಿತು. ಈ ಗೆಲುವಿನೊಂದಿಗೆ ಸುಮಾರು ₹ 2 ಲಕ್ಷ ಮೌಲ್ಯದ ಸುಂದರ ಟ್ರೋಫಿಯೊಂದಿಗೆ ಮೊದಲನೇ ಬಹುಮಾನ (₹ 61.70 ಲಕ್ಷ) ಗೆದ್ದಿತು.

ಡರ್ಬಿ ರೇಸ್ ಫಲಿತಾಂಶದ ವಿವರ (ಮೊದಲ ಆರು ಸ್ಥಾನಗಳು)

ಸ್ಥಾನ	ಕುದುರೆ ಹೆಸರು	ಟ್ರೈನರ್	ಜಾಕಿ	ಹೊತ್ತ ತೂಕ (ಕೆ.ಜಿ)	ಬಹುಮಾನದ ಮೊತ್ತ	ಕ್ರಮಿಸಿದ ಸಮಯ
1	ರಾಂಕ್ವೆಲಿನೊ	ಡಾರಿಯಸ್ ಬೈರಾಮ್ಜಿ	ಎ.ಸಂದೇಶ್	57	₹61.78ಲಕ್ಷ	2ನಿ.29.87ಸೆ.
2	ರೀಡಿಫೈನ್ಡ್	ಪ್ರಸನ್ನಕುಮಾರ್	ಅಕ್ಷಯ್ ಕುಮಾರ್	57	₹20.59ಲಕ್ಷ	2ನಿ.30.61ಸೆ.
3	ಮಾನ್ಸ ಮೂಸ	ಪೆಸಿ ಶ್ರಾಫ್	ಟ್ರೆವರ್ ಪಟೇಲ್	57	₹10.29 ಲಕ್ಷ	2ನಿ.31.17ಸೆ
4	ಮ್ಯಾಂಡರಿನೊ	ಇರ್ಫಾನ್ ಘಟಾಲ	ಅಲೆಕ್ಸ್ ರೊಜಾರಿಯೊ	57	₹5.14ಲಕ್ಷ	2ನಿ.31.21ಸೆ
5	ಸೀಕ್ರೆಟ್ ಸೇಂಟ್	ಭರತ್ ಸಿಂಗ್	ಮುಕೇಶ್ ಕುಮಾರ್	57	₹3.08ಲಕ್ಷ	2ನಿ.31.30ಸೆ
6	ಟಿಯೊಪೊಲೊ	ಪೆಸಿ ಶ್ರಾಫ್	ಜಿ.ವಿವೇಕ್	57	₹2.05ಲಕ್ಷ	2ನಿ.31.49ಸೆ

ಡರ್ಬಿ ರೇಸ್‌ಗೆ ಚಾಲನೆ ದೊರೆತಾಕ್ಷಣ ಎಕ್ಸಲೆಂಟ್ ಲಾಸ್ ಮುಂಚೂಣಿಯಲ್ಲಿ ಓಡಲಾರಂಭಿಸಿತು. ಅಕ್ವಾಸ್ಟಿಕ್ ಎರಡನೇ ಸ್ಥಾನದಲ್ಲಿ, ಫೇವರಿಟ್ ರೀಡಿಫೈನ್ಡ್ ಮೂರನೇ ಸ್ಥಾನದಲ್ಲಿ ಮತ್ತು ರಾಂಕ್ವೆಲಿನೊ ನಾಲ್ಕನೇ ಸ್ಥಾನದಲ್ಲಿ ಓಡಿದವು. ಕ್ರಮವಾಗಿ ಅದೇ ಸ್ಥಾನಗಳನ್ನೂ ಉಳಿಸಿಕೊಂಡು ಮುನ್ನುಗ್ಗುತ್ತಿದ್ದವು.

ಕೊನೆಯಲ್ಲಿ ಸುಮಾರು 400 ಮೀಟರ್‌ಗಳಷ್ಟು ದೂರ ಬಾಕಿಯಿದ್ದ ಸಂದರ್ಭದಲ್ಲಿ ಎಕ್ಸಲೆಂಟ್ ಲಾಸ್ ಅನ್ನು ಹಿಂದಿಕ್ಕಿ ರೀಡಿಫೈನ್ಡ್ ಲೀಡ್ ಪಡೆಯಲು ಪ್ರಯತ್ನಿಸಿತು. ಆದರೆ ರಾಂಕ್ವೆಲಿನೊ ಶರವೇಗದಲ್ಲಿ ಮುನ್ನುಗ್ಗಿ ಲೀಡ್ ಪಡೆಯಿತು. ರಾಂಕ್ವೆಲಿನೊ ನಾಲ್ಕೂವರೆ ಲೆಂಗ್ತ್ ಅಂತರದಿಂದ ಉಳಿದ ಕುದುರೆಗಳನ್ನು ಹಿಂದಿಕ್ಕಿ ಪ್ರಶಸ್ತಿ ಗೆದ್ದುಕೊಂಡಿತು.

ರೀಡಿಫೈನ್ಡ್ ಎರಡನೇ ಸ್ಥಾನ ಪಡೆಯಿತು. ಮಾನ್ಸ ಮೂಸ ಕುದುರೆಯ ಪ್ರಯತ್ನವು ತೀರಾ ತಡವಾಗಿತ್ತು. ಆದರೆ ಮ್ಯಾಂಡರಿನೊ ಕುದುರೆಯನ್ನು ನಿಕಟ ಅಂತರದಿಂದ ಹಿಂದಿಕ್ಕಿ ಮೂರನೇ ಸ್ಥಾನ ಪಡೆಯುವಲ್ಲಿ ಸಫಲವಾಯಿತು.

ಹಲವು ಪಾಲುದಾರರು ಇರುವ ಈ ಕುದುರೆಯ ಮಾಲೀಕರಲ್ಲಿ ಮಂಜ್ರಿ ಹಾರ್ಸ್ ಬ್ರೀಡರ್ಸ್ ಫಾರ್ಮ್ ಪ್ರೈವೇಟ್ ಲಿಮಿಟೆಡ್ ಪ್ರಮುಖ ಪಾಲುದಾರರು.





ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಭಾನುವಾರ ನಡೆದ ಡರ್ಬಿ ರೇಸ್‌ನಲ್ಲಿ ಮೊದಲ ಸ್ಥಾನದತ್ತ ರಾಂಕ್ವೆಲಿನೊ ಕುದುರೆಯನ್ನು ಮುನ್ನುಗ್ಗಿಸಿದ ಜಾಕಿ ಎ. ಸಂದೇಶ್ (ಎಡಚಿತ್ರ). ಡರ್ಬಿ ವೀಕ್ಷಿಸಲು ಸೇರಿದ್ದ ರೇಸ್ ಅಭಿಮಾನಿಗಳು –ಪ್ರಜಾವಾಣಿ ಚಿತ್ರ/ಎಸ್‌.ಕೆ. ದಿನೇಶ್

ಡ್ರಾ ಪಂದ್ಯದಲ್ಲಿ ಕೇರಳ: ಕರ್ನಾಟಕದ ಹಾದಿ ಕ್ಲಿಷ್ಟ

ತಿರುವನಂತಪುರ: ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಸಿ ಗುಂಪಿನ ಆರನೇ ಪಂದ್ಯದಲ್ಲಿ ಕೇರಳ ತಂಡವು ಮಧ್ಯ ಪ್ರದೇಶ ಎದುರು ಸೋಲಿನ ಆತಂಕದಿಂದ ತಪ್ಪಿಸಿಕೊಂಡಿತು. ಪಂದ್ಯವನ್ನು ಡ್ರಾ ಮಾಡಿಕೊಳ್ಳುವಲ್ಲಿ ಯಶಸ್ವಿಯಾಯಿತು.

ಇದರೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ 2ನೇ ಸ್ಥಾನ ಪಡೆಯಿತು. ಕೇರಳದ ಖಾತೆಯಲ್ಲಿ ಒಟ್ಟು 21 ಅಂಕಗಳಿವೆ. ಇದರಿಂದಾಗಿ ಕರ್ನಾಟಕದ ನಾಕೌಟ್ ಹಾದಿ ಕಠಿಣವಾಗಿದೆ.

ಗುಂಪು ಹಂತದಲ್ಲಿ ಕೇರಳ ಮತ್ತು ಕರ್ನಾಟಕ ತಂಡಗಳು ತಲಾ ಒಂದು ಪಂದ್ಯ ಆಡಬೇಕಿದೆ. ಕೇರಳ ತಂಡವು ತನ್ನ ಕೊನೆಯ ಪಂದ್ಯವನ್ನು ಬಿಹಾರದ ವಿರುದ್ಧ ಆಡಲಿದೆ. ದುರ್ಬಲ ತಂಡವಾಗಿರುವ ಬಿಹಾರವನ್ನು ಕೇರಳವು ಸೋಲಿಸುವ ಎಲ್ಲ ಸಾಧ್ಯತೆಗಳೂ ಹೆಚ್ಚು ಇವೆ. ಒಟ್ಟು 19 ಅಂಕ ಗಳಿಸಿರುವ ಕರ್ನಾಟಕ ತಂಡವು ಬೆಂಗಳೂರಿನಲ್ಲಿ ನಡೆಯಲಿರುವ ಅಂತಿಮ ಸುತ್ತಿನ ಪಂದ್ಯದಲ್ಲಿ ಬಲಿಷ್ಠ ಹರಿಯಾಣವನ್ನು ಎದುರಿಸಲಿದೆ. ಅದರಲ್ಲಿ ತಂಡವು ಪೂರ್ಣ 7 ಅಂಕ ಗಳಿಸಬೇಕು. ಇತ್ತ ಬಿಹಾರ ವಿರುದ್ಧ ಕೇರಳ ಸೋತರೆ ಅಥವಾ ಡ್ರಾ ಆದರೆ ಕರ್ನಾಟಕ ತಂಡಕ್ಕೆ ಸೆಮಿಫೈನಲ್ ಪ್ರವೇಶಿಸುವ ಅವಕಾಶ ಸಿಗಲಿದೆ.

ಒಂದೊಮ್ಮೆ ಹರಿಯಾಣ ಎದುರು ಡ್ರಾ ಮಾಡಿಕೊಂಡು 3 ಅಂಕ ಗಳಿಸಿದರೂ ಕರ್ನಾಟಕಕ್ಕೆ ನಾಲ್ಕರ ಘಟ್ಟದ ಪ್ರವೇಶ ಕಷ್ಟವಾಗಲಿದೆ. ಹರಿಯಾಣ ತಂಡವು ಈಗಾಗಲೇ 26 ಅಂಕ ಗಳಿಸಿ ನಾಕೌಟ್ ಹೊಸ್ತಿಲಿಗೆ ಬಂದು ನಿಂತಿದೆ.

ರಣಜಿ ಟ್ರೋಫಿ ಎಲೀಟ್ ಸಿ ಗುಂಪು

ತಂಡ	ಪಂದ್ಯ	ಜಯ	ಸೋಲು	ಡ್ರಾ	ಅಂಕ
ಹರಿಯಾಣ	6	3	0	3	26
ಕೇರಳ	6	2	0	4	21
ಕರ್ನಾಟಕ	6	2	0	4	19
ಬಂಗಾಳ	6	1	1	3	14
ಉತ್ತರಪ್ರದೇಶ	6	1	1	4	13
ಪಂಜಾಬ್	6	1	3	2	11
ಮಧ್ಯಪ್ರದೇಶ	6	1	1	4	10
ಬಿಹಾರ	6	0	5	0	1

* ಬಂಗಾಳ ಮತ್ತು ಬಿಹಾರದ ಒಂದು ಪಂದ್ಯ ರದ್ದಾಗಿದೆ

ಸಂಕ್ಷಿಪ್ತ ಸುದ್ದಿ

ಸಂಜಯ್ ಬಾಂಗಾರ್ ನೆರವು ಪಡೆದ ಕೊಹ್ಲಿ

ನವದೆಹಲಿ (ಪಿಟಿಐ): 12 ವರ್ಷಗಳ ಬಳಿಕ ರಣಜಿ ಟ್ರೋಫಿ ಕ್ರಿಕೆಟ್‌ಗೆ ಮರಳಲಿರುವ ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ಅವರು ಭಾರತ ತಂಡದ ಮಾಜಿ ಬ್ಯಾಟಿಂಗ್ ಕೋಚ್ ಸಂಜಯ್ ಬಾಂಗಾರ್ ಅವರ ಮಾರ್ಗದರ್ಶನ ಪಡೆದಿದ್ದಾರೆ.

36 ವರ್ಷ ವಯಸ್ಸಿನ ಕೊಹ್ಲಿ ಅವರು ದೆಹಲಿ ತಂಡದ ಪರ ಆಡಲಿದ್ದಾರೆ. ರಣಜಿ ಟ್ರೋಫಿ ಕಣಕ್ಕೆ ಮರಳುವ ಮೊದಲು ಅವರು ಬಾಂಗಾರ್ ಅವರ ಮಾರ್ಗದರ್ಶನದಲ್ಲಿ ನೆಟ್ಸ್‌ನಲ್ಲಿ ಬೆವರು ಹರಿಸುತ್ತಿದ್ದಾರೆ.

ಸೌರಾಷ್ಟ್ರ ವಿರುದ್ಧದ ಪಂದ್ಯವನ್ನು ಕತ್ತು ನೋವಿನ ಕಾರಣ ನೀಡಿ ಕೊಹ್ಲಿ ತಪ್ಪಿಸಿಕೊಂಡರು. ಭಾರತ ತಂಡದ ಸಹ ಆಟಗಾರ ರಿಷಭ್ ಪಂತ್ ಆ ಪಂದ್ಯಕ್ಕೆ ದೆಹಲಿ ತಂಡವನ್ನು ಸೇರಿಕೊಂಡಿದ್ದರು. ಸೌರಾಷ್ಟ್ರ ಆ ಪಂದ್ಯವನ್ನು 10 ವಿಕೆಟ್‌ಗಳಿಂದ ಗೆದ್ದಿದೆ. ಜನವರಿ 30ರಿಂದ ಪ್ರಾರಂಭವಾಗುವ ದೆಹಲಿ ರೈಲ್ವೇಸ್ ವಿರುದ್ಧದ ಪಂದ್ಯದಲ್ಲಿ ಕೊಹ್ಲಿ ಕಣಕ್ಕೆ ಇಳಿಯಲಿದ್ದಾರೆ.

ಹರ್ಡಲ್ಸ್: ಭಾರತದ ಜ್ಯೋತಿಗೆ ಚಿನ್ನ


ಜ್ಯೋತಿ

ನವದೆಹಲಿ (ಪಿಟಿಐ): ಭಾರತದ ಜ್ಯೋತಿ ಯರಾಜಿ ಅವರು ಫ್ರಾನ್ಸ್ ದೇಶದ ನಾಂತೆಸ್‌ನಲ್ಲಿ ನಡೆಯುತ್ತಿರುವ ಎಲೀಟ್ ಒಳಾಂಗಣ ಕೂಟದ 60 ಮೀಟರ್ಸ್ ಹರ್ಡಲ್ಸ್ ನಲ್ಲಿ ಚಿನ್ನದ ಪದಕ ಜಯಿಸಿದರು. ಅಲ್ಲದೇ ರಾಷ್ಟ್ರೀಯ ದಾಖಲೆಯನ್ನೂ ನಿರ್ಮಿಸಿದರು.

ಜ್ಯೋತಿ ಪ್ರಸ್ತುತ ಏಷ್ಯನ್ ಚಾಂಪಿಯನ್ ಕೂಡ ಹೌದು. 25 ವರ್ಷದ ಜ್ಯೋತಿ ಅವರು ಸ್ಪರ್ಧೆಯಲ್ಲಿ 8.07 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಈ ಹಿಂದೆ ತಾವೇ ಮಾಡಿದ್ದ ರಾಷ್ಟ್ರೀಯ ದಾಖಲೆಯನ್ನು (8.12 ಸೆಕೆಂಡು) ಮುರಿದರು.

ಇದೇ ಕೂಟದ ಪುರುಷರ 60 ಮೀ ಹರ್ಡಲ್ಸ್‌ನಲ್ಲಿ ಭಾರತದ ತೇಜಸ್ ಶಿರ್ಸೆ ಕಂಚಿನ ಪದಕ ಜಯಿಸಿದರು. ಅವರು 7.68 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು.

ಅಂಧರ ಫುಟ್‌ಬಾಲ್ ತಮಿಳುನಾಡು ತಂಡಗಳಿಗೆ ಪ್ರಶಸ್ತಿ

ಬೆಂಗಳೂರು: ತಮಿಳುನಾಡಿನ ಪುರುಷ ಮತ್ತು ಮಹಿಳೆಯರ ತಂಡಗಳು ಅಂತರರಾಷ್ಟ್ರೀಯ ಸೂಪರ್ ಲೀಗ್ ಅಂಧರ ಫುಟ್‌ಬಾಲ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದವು.

ಅಶ್ವಿನಿ ಅಂಗಡಿ ಟ್ರಸ್ಟ್ ಮತ್ತು ಭಾರತೀಯ ಅಂಧರ ಫುಟ್‌ಬಾಲ್ ಸಂಸ್ಥೆಯ ಸಹಯೋಗದಲ್ಲಿ ಭಾನುವಾರ ನಡೆದ ಟೂರ್ನಿಯ ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ತಮಿಳುನಾಡು ತಂಡವು 1–0 ಪೆನಾಲ್ಟಿ ಶೂಟೌಟ್‌ನಲ್ಲಿ ಕರ್ನಾಟಕ ತಂಡವನ್ನು ಮಣಿಸಿ, ₹1 ಲಕ್ಷ ಬಹುಮಾನ ಗೆದ್ದುಕೊಂಡಿತು.

ಪುರುಷರ ವಿಭಾಗದ ಫೈನಲ್‌ನಲ್ಲಿ ತಮಿಳುನಾಡು ತಂಡವು 1–0 ಪೆನಾಲ್ಟಿ ಶೂಟೌಟ್‌ನಲ್ಲಿ ಅರುಣಾಚಲ ಪ್ರದೇಶ ತಂಡವನ್ನು ಸೋಲಿಸಿ, ₹1 ಲಕ್ಷ ಬಹುಮಾನ ತನ್ನದಾಗಿಸಿಕೊಂಡಿತು.

ಶಾಸಕ ಡಾ.ಸಿ.ಎನ್.ಅಶ್ವಥ್ ನಾರಾಯಣ್, ಅಶ್ವಿನಿ ಅಂಗಡಿ ಅವರು ವಿಜೇತ ತಂಡಗಳಿಗೆ ಬಹುಮಾನ ವಿತರಿಸಿದರು.

ಕೆಪಿಬಿ ಮಹಿಳಾ ಓಪನ್ ಟೆನಿಸ್ ಟೂರ್ನಿ

ಜರ್ಮನಿಯ ಮರಿಯಾ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ಅಗ್ರಶ್ರೇಯಾಂಕದ ತಾತ್ಯಾನಾ ಮರಿಯಾ ಅವರು ಕೆಪಿಬಿ ಮಹಿಳಾ ಓಪನ್ ಟೆನಿಸ್ ಟೂರ್ನಿಯ ಮಹಿಳಾ ಸಿಂಗಲ್ಸ್ ಕಿರೀಟವನ್ನು ಮುಡಿಗೇರಿಸಿಕೊಂಡರು.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಅಂಗಣದಲ್ಲಿ ಭಾನುವಾರ ನಡೆದ ಫೈನಲ್ ಹಣಾಹಣಿಯಲ್ಲಿ ಜರ್ಮನಿಯ 37 ವರ್ಷ ವಯಸ್ಸಿನ ಮರಿಯಾ 6-7 (0-7), 6-3, 6-4ರ ಮೂರು ಸೆಟ್‌ಗಳ ಹೋರಾಟದಲ್ಲಿ ಏಳನೇ ಶ್ರೇಯಾಂಕದ ಲಿಯೊಲಿಯಾ ಜೀನ್‌ಜೀನ್ ಅವರನ್ನು ಮಣಿಸಿದರು. ಪ್ರಶಸ್ತಿ ಸುತ್ತಿನ ಪಂದ್ಯ ಎರಡು ಗಂಟೆ 41 ನಿಮಿಷ ನಡೆಯಿತು.

ಮೊದಲ ಸೆಟ್ ಅನ್ನು ಟೈಬ್ರೇಕರ್‌ನಲ್ಲಿ ಕೈವಶ ಮಾಡಿಕೊಳ್ಳುವ ಮೂಲಕ 29 ವರ್ಷ ವಯಸ್ಸಿನ ಲಿಯೊಲಿಯಾ ಉತ್ತಮ ಆರಂಭ ಪಡೆದಿದ್ದರು. ಆದರೆ, ಎರಡನೇ ಸೆಟ್‌ನಲ್ಲಿ ಮರಿಯಾ ತಿರುಗೇಟು ನೀಡಿದರು.

ರಕ್ಷಣಾತ್ಮಕ ಆಟದ ದೋಷವನ್ನು ಸರಿಪಡಿಸಿಕೊಂಡ ಮರಿಯಾ, ಎರಡನೇ ಸೆಟ್‌ನಲ್ಲಿ ಮೇಲುಗೈ ಸಾಧಿಸಿದರು. ನಿರ್ಣಾಯಕ ಸೆಟ್‌ನಲ್ಲೂ ಪ್ರಾಬಲ್ಯ ಮೆರೆದ ಅವರು ಪ್ರಶಸ್ತಿಯೊಂದಿಗೆ ₹13.13 ಲಕ್ಷ ಬಹುಮಾನ ಮತ್ತು 100 ಡಬ್ಲ್ಯುಟಿಎ ರ್‍ಯಾಂಕಿಂಗ್ ಪಾಯಿಂಟ್ಸ್ ತನ್ನದಾಗಿಸಿಕೊಂಡರು.



ಪ್ರಶಸ್ತಿಯೊಂದಿಗೆ ಜರ್ಮನಿಯ ತಾತ್ಯಾನಾ ಮರಿಯಾ ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

'ಸೆಮಿಫೈನಲ್‌ನಂತೆ ಈ ಪಂದ್ಯವೂ ರೋಚಕವಾಗಿತ್ತು. ಭಾರತದಲ್ಲಿ ನಾನು ಗೆದ್ದ ಎರಡನೇ ಪ್ರಶಸ್ತಿ ಇದಾಗಿದೆ' ಎಂದು ಮರಿಯಾ ಪಂದ್ಯದ ನಂತರ ಸುದ್ದಿಗಾರರಿಗೆ ಹೇಳಿದರು.

ಸೆಮಿಫೈನಲ್‌ನತ್ತ ಭಾರತ

ಕ್ವಾಲಾಲಂಪುರ (ಪಿಟಿಐ): ವೈಷ್ಣವಿ ಶರ್ಮಾ (15ಕ್ಕೆ3) ಅವರ ಅಮೋಘ ಬೌಲಿಂಗ್ ಬಲದಿಂದ ಭಾರತ ತಂಡವು 19 ವರ್ಷದೊಳಗಿನ ಮಹಿಳೆಯರ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸೂಪರ್ ಸಿಕ್ಸ್ ಪಂದ್ಯದಲ್ಲಿ ಬಾಂಗ್ಲಾ ಎದುರು ಜಯಿಸಿತು. ಸೆಮಿಫೈನಲ್ ಪ್ರವೇಶವನ್ನು ಖಚಿತಪಡಿಸಿಕೊಂಡಿತು.

ಹಾಲಿ ಚಾಂಪಿಯನ್ ಭಾರತ ತಂಡವು ಭಾನುವಾರ ಇಲ್ಲಿ ನಡೆದ ಪಂದ್ಯದಲ್ಲಿ 8 ವಿಕೆಟ್‌ಗಳಿಂದ ಜಯಿಸಿತು.

ಟಾಸ್ ಗೆದ್ದ ಭಾರತ ತಂಡದ ನಾಯಕಿ ನಿಕಿ ಪ್ರಸಾದ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ವೈಷ್ಣವಿ ಶರ್ಮಾ (15ಕ್ಕೆ3) ಅವರ ಉತ್ತಮ ಬೌಲಿಂಗ್ ಮುಂದೆ ಬಾಂಗ್ಲಾ 20 ಓವರ್‌ಗಳಲ್ಲಿ 8 ಕ್ಕೆ 64 ರನ್‌ಗಳ ಅಲ್ಪಮೊತ್ತಕ್ಕೆ ಕುಸಿಯಿತು.

ಗುರಿ ಬೆನ್ನಟ್ಟಿದ ಭಾರತ ತಂಡವು 7.1 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 66 ರನ್ ಗಳಿಸಿ ಜಯಿಸಿತು. ಆರಂಭಿಕ ಬ್ಯಾಟರ್ ಜಿ. ತ್ರಿಷಾ 31 ಎಸೆತಗಳಲ್ಲಿ 40 ರನ್ ಗಳಿಸಿದರು. ಅದರಲ್ಲಿ 8 ಬೌಂಡರಿಗಳು ಇದ್ದವು. ಈ ಹಂತದಲ್ಲಿ ಭಾರತ ತಂಡಕ್ಕೆ ಸ್ಕಾಟ್ಲೆಂಡ್ ಎದುರಿನ ಒಂದು ಪಂದ್ಯ ಮಾತ್ರ ಬಾಕಿ ಇದೆ.


ವೈಷ್ಣವಿ ಶರ್ಮಾ

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 20 ಓವರ್‌ಗಳಲ್ಲಿ 8ಕ್ಕೆ64 (ಸುಮಯಾ ಅಖ್ತರ್ ಔಟಾಗದೇ 21, ವೈಷ್ಣವಿ ಶರ್ಮಾ 15ಕ್ಕೆ3) ಭಾರತ: 7.1 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 66 (ಜಿ. ತ್ರಿಷಾ 40, ಸನಿಕಾ ಚಳ್ಕೆ ಔಟಾಗದೇ 11, ಅನಿಸಾ ಅಕ್ತರ್ ಸೋಬಾ 29ಕ್ಕೆ1) ಪಂದ್ಯಶ್ರೇಷ್ಠ: ವೈಷ್ಣವಿ ಶರ್ಮಾ.

ಬೆಂಗಳೂರು ಎಫ್‌ಸಿಗೆ ಬಾಗನ್ ಸವಾಲು

ಕೋಲ್ಕತ್ತ (ಪಿಟಿಐ): ಹಾಲಿ ಚಾಂಪಿಯನ್ ಮೋಹನ್ ಬಾಗನ್ ಸೂಪರ್ ಜೈಂಟ್ಸ್ ತಂಡವು ಇಂಡಿಯನ್ ಸೂಪರ್ ಲೀಗ್‌ನ ಪಂದ್ಯದಲ್ಲಿ ಸೋಮವಾರ ಬೆಂಗಳೂರು ಎಫ್‌ಸಿ ತಂಡವನ್ನು ಎದುರಿಸಲಿದೆ.

17 ಪಂದ್ಯಗಳಿಂದ 37 ಅಂಕ ಗಳಿಸಿರುವ ಬಾಗನ್ ತಂಡವು ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಅಷ್ಟೇ ಪಂದ್ಯಗಳನ್ನು ಆಡಿರುವ ಬೆಂಗಳೂರು ತಂಡವು ಎಂಟು ಪಂದ್ಯಗಳನ್ನು ಗೆದ್ದು 28 ಅಂಕಗಳೊಂದಿಗೆ ಮೂರನೇ ಸ್ಥಾನದಲ್ಲಿದೆ. ಗೋವಾ ಎಫ್‌ಸಿ (33) ಎರಡನೇ ಸ್ಥಾನ ಕಾಯ್ದುಕೊಂಡಿದೆ.

ಬಾಗನ್ ತಂಡವು ಉತ್ತಮ ಲಯದಲ್ಲಿದ್ದು, ತವರಿನಲ್ಲಿ ನಡೆದ ಕೊನೆಯ ಏಳು ಪಂದ್ಯಗಳಲ್ಲಿ ಜಯ ಸಾಧಿಸಿದೆ. ಅದಕ್ಕೂ ಹಿಂದಿನ ಐದು ಪಂದ್ಯಗಳ ಪೈಕಿ ಮೂರಲ್ಲಿ ಗೆದ್ದು, ಇನ್ನೆರಡಲ್ಲಿ ಡ್ರಾ ಸಾಧಿಸಿ ತವರಿನಲ್ಲಿ ಅಜೇಯವಾಗಿ ಉಳಿದಿದೆ.

ಋತುವಿನ ಆರಂಭದಲ್ಲಿ ಬೆಂಗಳೂರಿನಲ್ಲಿ ನಡೆದಿದ್ದ ಪಂದ್ಯದಲ್ಲಿ ಬಾಗನ್ ವಿರುದ್ಧ 3–0ಯಿಂದ ಜಯ ಸಾಧಿಸಿದ್ದ ಸುನಿಲ್ ಚೆಟ್ರಿ ಬಳಗವು ಮತ್ತೆ ಉತ್ತಮ ಪ್ರದರ್ಶನ ತೋರುವ ವಿಶ್ವಾಸದಲ್ಲಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಪೋರ್ಟ್ಸ್ 18

ಒಡಿಶಾ ವಾರಿಯರ್ಸ್‌ಗೆ ಪ್ರಶಸ್ತಿ

ರಾಂಚಿ (ಪಿಟಿಐ): ಒಡಿಶಾ ವಾರಿಯರ್ಸ್ ತಂಡವು ಭಾನುವಾರ ನಡೆದ ಫೈನಲ್‌ನಲ್ಲಿ 2–1 ಗೋಲುಗಳಿಂದ ಜೆಎಸ್‌ಡಬ್ಲ್ಯು ಸೂರ್ಮಾ ಹಾಕಿ ಕ್ಲಬ್ ತಂಡವನ್ನು ಮಣಿಸಿ ಚೊಚ್ಚಲ ಮಹಿಳಾ ಹಾಕಿ ಇಂಡಿಯಾ ಲೀಗ್ ಪ್ರಶಸ್ತಿಯನ್ನು ಗೆದ್ದುಕೊಂಡಿತು.

ಎರಡು ಗೋಲು ದಾಖಲಿಸಿದ ಋತುಜಾ ದಾದಾಸೊ ಪಿಸಾಲ್ (28ನೇ ಮತ್ತು 56ನೇ ನಿ) ಗೆಲುವಿನ ರೂವಾರಿಯಾದರು. ಸೂರ್ಮಾ ತಂಡದ ಪರ ಪೆನ್ನಿ ಸ್ಕ್ವಿಬ್ (28ನೇ ನಿ) ಏಕೈಕ ಗೋಲು ಗಳಿಸಿದರು.

ಟಾಟಾ ಸ್ಟೀಲ್ ಚೆಸ್: ಮುನ್ನಡೆಯಲ್ಲಿ ಮೂವರು

ಅಗ್ರಸ್ಥಾನ ಹಂಚಿಕೊಂಡ ಗುಕೇಶ್

ವಿಯ್ಕ್ ಆನ್ ಝೀ (ನೆದರ್ಲೆಂಡ್ಸ್), (ಪಿಟಿಐ): ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರು ಟಾಟಾ ಸ್ಟೀಲ್ ಚೆಸ್ ಟೂರ್ನಿಯ ಏಳನೇ ಸುತ್ತಿನಲ್ಲಿ ಸ್ವದೇಶದ ಅನುಭವಿ ಆಟಗಾರ ಪಿ.ಹರಿಕೃಷ್ಣ ಅವರನ್ನು ಸುಲಭವಾಗಿ ಸೋಲಿಸಿದರು. ಈ ಗೆಲುವಿನೊಡನೆ ಅವರು ಅಗ್ರಸ್ಥಾನದಲ್ಲಿರುವ ಆಟಗಾರರ ಜೊತೆಗೂಡಿದರು.

ಇದು ಗುಕೇಶ್ ಅವರಿಗೆ ಮೂರನೇ ಗೆಲುವಾಗಿದ್ದು, ಅವರು ಸ್ವದೇಶದ ಪ್ರಜ್ಞಾನಂದ ಮತ್ತು ಉಜ್ಬೇಕಿಸ್ತಾನದ ನದಿರ್ಬೆಕ್ ಅಬ್ದುಸತ್ತಾರೋವ್ ಜೊತೆ ಮೊದಲ ಸಲ ಅಗ್ರಸ್ಥಾನ ಹಂಚಿಕೊಂಡಿದ್ದಾರೆ. ಮೂವರೂ ತಲಾ ಐದು ಪಾಯಿಂಟ್ಸ್ ಗಳಿಸಿದ್ದಾರೆ. 14 ಆಟಗಾರರ ಈ ರೌಂಡ್‌ರಾಬಿನ್ ಟೂರ್ನಿಯಲ್ಲಿ ಇನ್ನೂ 6 ಸುತ್ತುಗಳು ಆಡಲು ಉಳಿದಿವೆ.

ಸೋಮವಾರ ನಡೆದ ಏಳನೇ ಸುತ್ತಿನ ಇನ್ನೊಂದು ಪಂದ್ಯದಲ್ಲಿ ಪ್ರಜ್ಞಾನಂದ ಅವರು ಆತಿಥೇಯ ನೆದರ್ಲೆಂಡ್ಸ್‌ನ ಜೋರ್ಡನ್ ವಾನ್ ಫೋರೀಸ್ಟ್ ಅವರ ರಕ್ಷಣೆಯನ್ನು ಭೇದಿಸಲು ಸಾಧ್ಯವಾಗದೇ ಡ್ರಾಕ್ಕೆ ಒಪ್ಪಿಕೊಳ್ಳಬೇಕಾಯಿತು. ಅಬ್ದುಸತ್ತಾರೋವ್ ಅವರೂ ನೆದರ್ಲೆಂಡ್ಸ್‌ನ ಅನಿಶ್ ಗಿರಿ ಜೊತೆ ಡ್ರಾ ಕರಾರಿಗೆ ಸಹಿಹಾಕಿದರು. ಗಿರಿ ಅವರಿಗೆ ಇದು ಸತತ ಆರನೇ ಡ್ರಾ.


ಡಿ.ಗುಕೇಶ್

ಅರ್ಜುನ್‌ಗೆ ಮತ್ತೆ ಹಿನ್ನಡೆ: ರ್‍ಯಾಂಕಿಂಗ್ ಪಟ್ಟಿಯಲ್ಲಿ ಐದನೇ ಸ್ಥಾನಕ್ಕೆ ಸರಿದ ಅರ್ಜುನ್ ಇರಿಗೇಶಿ ಅವರು ಟೂರ್ನಿಯಲ್ಲಿ ನಾಲ್ಕನೇ ಸೋಲು ಕಂಡು ನಿರಾಶೆಗೊಳಗಾದರು. ಆತಿಥೇಯ ದೇಶದ ಮ್ಯಾಕ್ಸ್ ವಾರ್ಡರ್‌ಮ್ಯಾನ್ ಅವರು ಇರಿಗೇಶಿ ಅವರನ್ನು ಮಣಿಸಿದರು. 2801 ರ್‍ಯಾಂಕಿಂಗ್‌ನೊಡನೆ ಟೂರ್ನಿಯಲ್ಲಿ ಎರಡನೇ ಶ್ರೇಯಾಂಕ ಪಡೆದಿದ್ದ ಇರಿಗೇಶಿ ಈಗಾಗಲೇ 28 ರೇಟಿಂಗ್ ಪಾಯಿಂಟ್ಸ್ ಕಳೆದುಕೊಂಡಿದ್ದಾರೆ.

ಚಾಲೆಂಜರ್ಸ್ ವಿಭಾಗದಲ್ಲಿ ಆರ್. ವೈಶಾಲಿ, ಬೆಂಜಮಿನ್ ಬೊಕ್ (ನೆದರ್ಲೆಂಡ್ಸ್) ಜೊತೆ ಡ್ರಾ ಮಾಡಿಕೊಂಡರೆ, ದಿವ್ಯಾ ದೇಶಮುಖ್, ಚೀನಾದ ಮಿಯೊಯಿ ಲು ಕೈಲಿ ಪರಾಭವ ಕಾಣಬೇಕಾಯಿತು.